ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 25 ಸೋಮವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 218 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರಾದ
ಶ್ರೀ ಜಿ.ಟಿ.ದೇವೇಗೌಡ
ರವರಿಗೆ
74ರ ಜನ್ಮದಿನದ
ಸಂಭ್ರಮ
ಶುಭಕೋರುವವರು
ದುರ್ಗಾ ಗ್ರೂಪ್ಸ್
VISMAYA
ADVERTISERS
8050302424

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 25 ಸೋಮವಾರ 2024

ಸಂಪುಟ: 45 | ಸಂಚಿಕೆ: 218 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಚನ್ನಪಟ್ಟಣದಲ್ಲಿ ಸಿ.ಪಿ.ಯೋಗೇಶ್ವರ್ ಗೆಲುವಿಗೆ

ಬಿಜೆಪಿ–ಜೆಡಿಎಸ್ ಬೆಂಬಲ

• ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅಚ್ಚರಿ ಹೇಳಿಕೆ • ಇದು ಅಪೂರ್ವ ಸಹೋದರರ ಗೆಲುವಲ್ಲ



ಕನಕಪುರ, ನ.24– ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಗೆಲುವಿಗೆ ಎಲ್ಲಾ ಪಾರ್ಟಿಯವರೂ ಸಹಾಯ ಮಾಡಿದ್ದಾರೆ. ಬಿಜೆಪಿ, ಜೆಡಿಎಸ್‌ನವರೂ ಸಪೋರ್ಟ್ ಮಾಡಿದ್ದಾರೆ. ಪ್ರತ್ಯಕ್ಷ, ಪರೋಕ್ಷವಾಗಿ ಕೆಲಸ ಮಾಡದೇ ಹೋಗಿದ್ದರೆ ಇಷ್ಟು ಮತ ನಮಗೆ ಬರುತ್ತಿರಲಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಚ್ಚರಿ ಹೇಳಿಕೆ ನೀಡಿದ್ದಾರೆ.

ಕನಕಪುರದಲ್ಲಿಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣದಲ್ಲಿ ಯೋಗೇಶ್ವರ್ ಗೆಲುವಿಗೆ ಪರೋಕ್ಷವಾಗಿ ಜೆಡಿಎಸ್, ಬಿಜೆಪಿಯವರೂ ಸಪೋರ್ಟ್ ಮಾಡಿದ್ದಾರೆ. ಮಾಜಿ ಸಚಿವ ಅಶ್ವಥ್ ನಾರಾಯಣ್ ಅವರು ಯೋಗೇಶ್ವರ್ ಗೆಲ್ಲುತ್ತಾರೆ ಎಂದು ಗೊತ್ತಿತ್ತು ಅಂದ್ರು, ಇದರ ಅರ್ಥ ಏನು? ಎಂದು ಪ್ರಶ್ನೆ ಮಾಡಿದರು.

ನಮ್ಮ ಮೇಲೆ ಈಗ ಕ್ಷೇತ್ರದ ಜನರ ಸಾಲ ಇದೆ. ಕ್ಷೇತ್ರದ ಜನ ನಮ್ಮ ಪರವಾಗಿ ಇದ್ದಾರೆ. ಈ ಗೆಲುವಿನ ಕ್ರೆಡಿಟ್ ಅಪೂರ್ವ ಸಹೋದರರಿಗೆ ಸಲ್ಲಬೇಕಾಗಿಲ್ಲ. ನಮ್ಮೆಲ್ಲ ನಾಯಕರು, ಮತದಾರರಿಗೆ ಸಲ್ಲಬೇಕು. ಕ್ಷೇತ್ರ ಖಾಲಿ ಆದಾಗಿನಿಂದ ಸಾಕಷ್ಟು ಪ್ರವಾಸ ಮಾಡಿದ್ದೆವು. ಕ್ಷೇತ್ರದ ಜನರಿಗೆ ಏನು ಮಾತು ಕೊಟ್ಟಿದ್ದೆವೋ ಅದನ್ನು ಮೊದಲು ಅನುಷ್ಠಾನ ಮಾಡಬೇಕು. ನಾನು ಯೋಗೇಶ್ವರ್, ಇಬ್ಬರೂ ಕೂತು ಚರ್ಚೆ ಮಾಡಿ ಇದಕ್ಕೆಲ್ಲ ಚಾಲನೆ ಕೊಡುತ್ತೇವೆ ಎಂದು ಆಶ್ವಾಸನೆ ನೀಡಿದರು.

ನಮಗೆ ಎಲ್ಲಾ ಪಾರ್ಟಿಯವರೂ ಸಹಾಯ ಮಾಡಿದ್ದಾರೆ. ಕಾಂಗ್ರೆಸ್‌ಗೆ ಇದ್ದಿದ್ದು ಕೇವಲ 16 ಸಾವಿರ ಮತಗಳು. ಈಗ ಅದು ಜಾಸ್ತಿ ಆಗಿದೆ. ಬಿಜೆಪಿಯವರೂ ಸಪೋರ್ಟ್ ಮಾಡಿದ್ದಾರೆ. ಬಿಜೆಪಿಯವರು ನಮ್ಮ ಜೊತೆ ಬಂದು ನಿಂತುಕೊಳ್ಳದೇ ಹೋಗಿದ್ದರೆ, ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕೆಲಸ ಮಾಡದೇ ಹೋಗಿದ್ದರೆ ಇಷ್ಟು ಮತ ನಮಗೆ ಬರುತ್ತಿರಲಿಲ್ಲ. ನಾನು ಅವರೆಲ್ಲರನ್ನೂ ಅಭಿನಂದಿಸುತ್ತೇನೆ ಎಂದು ನುಡಿದರು.

ಡಿಕೆ ಶಿವಕುಮಾರ್ ತಂದಿಕ್ಕುವ ಕೆಲಸ ಮಾಡುತ್ತಿದ್ದಾರೆ



ಮಂಡ್ಯ, ನ.24– ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ತಂದಿಕ್ಕುವ ಕೆಲಸ ಮಾಡುತ್ತಿದ್ದಾರೆ. ಅಭ್ಯರ್ಥಿ ಗತಿಯಿಲ್ಲದೇ ಯೋಗೇಶ್ವರ್ ಅವರನ್ನು ಬಿಜೆಪಿಯಿಂದ ಕರೆದುಕೊಂಡು ಕಾಂಗ್ರೆಸ್ ಅಭ್ಯರ್ಥಿ ಮಾಡಿದ್ದಾರೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಕಿಡಿಕಾರಿದ್ದಾರೆ.

ಚನ್ನಪಟ್ಟಣ ಗೆಲುವಿಗೆ ಬಿಜೆಪಿ ಸಪೋರ್ಟ್ ಕಾರಣ ಎಂಬ ಡಿಕೆಶಿ ಹೇಳಿಕೆ ವಿಚಾರವಾಗಿ ಮಂಡ್ಯದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಗೆದ್ದಿದ್ದೇವೆ ಎಂದು ಕಾಂಗ್ರೆಸ್‌ನವರು ಬೀಗುತ್ತಿದ್ದಾರೆ. ಈ ಗೆಲುವು ಶಾಶ್ವತ ಅಲ್ಲ. ನಾವು 18 ಉಪ ಚುನಾವಣೆಯಲ್ಲಿ ಗೆದ್ದವರು. ಬಳಿಕ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಸೋತಿದ್ದೇವೆ. ಇವರು 3 ಗೆದ್ದೇ ಹೀಗೆ ಮೆರೆಯುತ್ತಿದ್ದಾರೆ. 18 ಉಪ ಚುನಾವಣೆ ಗೆದ್ದ ನಾವು ಹೇಗೆ ಮೆರೆಯಬೇಕು ಎಂದು ವಾಗ್ದಾಳಿ ನಡೆಸಿದರು.

ಲೋಕಸಭಾ ಚುನಾವಣೆಯಲ್ಲಿ ಯಾಕೆ ಮಣ್ಣು ಮುಕ್ಕಿದಿರಿ. ಡಿಕೆಶಿ, ಸಿದ್ದರಾಮಯ್ಯ ಚುನಾವಣೆ ಅಲ್ಲ. ಇದು ಕಂಟ್ರಾಕ್ಟರ್‌ಗಳ, ಹಣದ ಚುನಾವಣಾ ಗೆಲುವು. ನಿಮ್ಮ ಪರಿಶ್ರಮದಿಂದ ಗೆದ್ದಿಲ್ಲ. ● 9ನೇ ಪುಟಕ್ಕೆ

ಈಗ ಏನು ಚರ್ಚೆ ಮಾಡಿದರೂ ಪ್ರಯೋಜನವಿಲ್ಲ



ಬೆಂಗಳೂರು, ನ.24– ಚನ್ನಪಟ್ಟಣ ಉಪ ಚುನಾವಣೆ ಫಲಿತಾಂಶ ಬಂದಾಗಿದೆ, ಈಗ ಏನು ಚರ್ಚೆ ಮಾಡಿದರೂ ಪ್ರಯೋಜನ ಇಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ್ದಾರೆ. ತಮ್ಮ ಮಗ ನಿಖಿಲ್ ಕುಮಾರಸ್ವಾಮಿ ಸೋಲಿನ ಬಗ್ಗೆ ಬೆಂಗಳೂರಿನಲ್ಲಿಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಫಲಿತಾಂಶ ಒಪ್ಪಿಕೊಳ್ಳಲೇಬೇಕು. ಏನೇ ಇದ್ದರೂ ಆಮೇಲೇ ಮಾತನಾಡುತ್ತೇನೆ ಎಂದು ಬೇಸರ ವ್ಯಕ್ತಪಡಿಸಿದರು.

ಸ್ತ್ರೀಶಕ್ತಿ ಮಾದರಿಯಲ್ಲಿ ಗೃಹಲಕ್ಷ್ಮಿ ಸಂಘಗಳ ಸ್ಥಾಪನೆ



ಕನಕಪುರ, ನ.24– ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಸ್ತ್ರೀಯರ ಹಾಗೂ ಸ್ತ್ರೀ ಶಕ್ತಿ ಸಂಘಗಳ ಪಾತ್ರ ಬಹಳ ದೊಡ್ಡದಿದೆ. ಈ ಹಿನ್ನೆಲೆಯಲ್ಲಿ ಗೃಹಲಕ್ಷ್ಮಿ ಸಂಘಗಳನ್ನು ಸ್ಥಾಪಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು.

ಕನಕಪುರದಲ್ಲಿ ಕನಕಾಂಬರಿ ಮಹಿಳಾ ಒಕ್ಕೂಟ ಭಾನುವಾರ ಆಯೋಜಿಸಿದ್ದ ಮಹಿಳಾ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಪ್ರತಿ ಅವಧಿಯಲ್ಲೂ ಮಹಿಳಾ ಪರ ಯೋಜನೆಗಳನ್ನು ಜಾರಿಗೆ ತಂದಿದೆ. ● 9ನೇ ಪುಟಕ್ಕೆ

ನ.28ಕ್ಕೆ ಜಾರ್ಖಂಡ್ ಸಿಎಂ ಆಗಿ ಹೇಮಂತ್ ಸೊರೇನ್ ಪ್ರಮಾಣ



ಜಾರ್ಖಂಡ್, ನ.24– ನಾಲ್ಕನೇ ಬಾರಿಗೆ ಜೆಎಂಎಂ ನಾಯಕ ಹೇಮಂತ್ ಸೊರೇನ್ ಅವರು ಜಾರ್ಖಂಡ್ ಮುಖ್ಯಮಂತ್ರಿಯಾಗಿ ನ.28 ರಂದು ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಪ್ರಮಾಣವಚನ ಸಮಾರಂಭದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಟಿಎಂಸಿ ಮುಖ್ಯಸ್ಥೆ ಹಾಗೂ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಸಮಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ಸಿಪಿಐ ನಾಯಕ ದೀಪಂಕರ್ ಭಟ್ಟಾಚಾರ್ಯ ಸೇರಿ ಪ್ರಮುಖ ನಾಯಕರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ● 9ನೇ ಪುಟಕ್ಕೆ

ಹಾಸನದಲ್ಲಿ ಸಿಎಂ ಸಿದ್ದರಾಮಯ್ಯ ಶಕ್ತಿ ಪ್ರದರ್ಶನ

ಡಿ.5ರಂದು ಸ್ವಾಭಿಮಾನಿ ಸಮಾವೇಶ



ಬೆಂಗಳೂರು, ನ.24–ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ ಫಲಿತಾಂಶ ಕಾಂಗ್ರೆಸ್ ನಾಯಕರಲ್ಲಿ ಆತ್ಮ ವಿಶ್ವಾಸ ಹೆಚ್ಚಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಭಿಮಾನಿಗಳೇ ಸೇರಿ ಹಾಸನದಲ್ಲಿ ಡಿ.5 ರಂದು 'ಸ್ವಾಭಿಮಾನಿ ಸಮಾವೇಶ' ಹೆಸರಲ್ಲಿ ಬೃಹತ್ ಸಮಾವೇಶ ನಡೆಸುವ ಮೂಲಕ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ.

ಸಮಾವೇಶ ಆಯೋಜಿಸುವ ಸಂಬಂಧ ಈಗಾಗಲೇ ಸಿಎಂ ಸಿದ್ದರಾಮಯ್ಯ ಅವರ ಪುತ್ರ ಹಾಗೂ ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಈಗಾಗಲೇ ನಾಲ್ವರು ಸಚಿವರ ಜೊತೆ ಸಭೆ ಮಾಡಿದ್ದು, ಸ್ವಾಭಿಮಾನಿ ಸಮಾವೇಶ ನಡೆಸುವುದಾಗಿ ಘೋಷಿಸಿದ್ದಾರೆ.

ಬೃಹತ್ ಸಮಾವೇಶದಲ್ಲಿ ಹಾಸನ, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಮೈಸೂರು, ಚಿಕ್ಕಮಗಳೂರು ಜಿಲ್ಲೆಯ ಜನರನ್ನು ಸೇರಿಸಲು ಯೋಜಿಸಲಾಗಿದೆ. ಲೋಕಸಭೆ ಚುನಾವಣೆಯಲ್ಲಿ ಹಾಸನ ಕ್ಷೇತ್ರವನ್ನು ಕೈವಶ ಮಾಡಿಕೊಳ್ಳಲಾಗಿದೆ. ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಜಯಭೇರಿ ಭಾರಿಸಲಾಗಿದೆ. ರಾಜ್ಯ ಸರ್ಕಾರ ಹಾಗೂ ಸಿಎಂ ಸಿದ್ದರಾಮಯ್ಯ ವಿರುದ್ಧ ಅನಗತ್ಯ ಆರೋಪಗಳನ್ನು ಮಾಡಿರುವ ವಿಪಕ್ಷಗಳಿಗೆ ಈ ಮೂಲಕ ಎದುರೇಟು ನೀಡಲು ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಿಎಂ ಆಪ್ತುಳಗದ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ, ಕೆ.ಎನ್. ರಾಜಣ್ಣ, ವೆಂಕಟೇಶ್, ಬೋಸರಾಜು, ಶಾಸಕರಾದ ಶಿವಲಿಂಗೇಗೌಡ, ಹಾಸನ ಸಂಸದ ಶ್ರೇಯಸ್ ಪಟೇಲ್, ಯತೀಂದ್ರ ಸಿದ್ದರಾಮಯ್ಯ ನೇತೃತ್ವದಲ್ಲಿ ಸಮಾವೇಶ ನಡೆಯಲಿದೆ. ● 9ನೇ ಪುಟಕ್ಕೆ

ಚಾಮುಂಡೇಶ್ವರಿಗೆ ಚಿನ್ನದ ರಥ ನಿರ್ಮಾಣ

ಪ್ರಸ್ತಾವ ಸಲ್ಲಿಸಲು ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಸೂಚನೆ



ಬೆಂಗಳೂರು, ನ.24– ನಾಡದೇವಿ ಮೈಸೂರಿನ ಚಾಮುಂಡೇಶ್ವರಿಗೆ ಚಿನ್ನದ ರಥ ನಿರ್ಮಿಸುವ ಸಂಬಂಧ ಪರಿಶೀಲಿಸಿ, ತಕ್ಷಣ ಪ್ರಸ್ತಾವ ಸಲ್ಲಿಸುವಂತೆ ಕಂದಾಯ ಇಲಾಖೆಯ ಧಾರ್ಮಿಕ ದತ್ತಿ ವಿಭಾಗದ ಪ್ರಧಾನ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ.

ಚಿನ್ನದ ರಥ ನಿರ್ಮಿಸಬೇಕೆಂಬ ಭಕ್ತರ ಬೇಡಿಕೆ, ಸಂಕಲ್ಪದ ಕುರಿತು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದರು.

ಚಾಮುಂಡೇಶ್ವರಿ ದೇವಿ ಕನ್ನಡ ನಾಡಿನ ಅಸ್ಮಿತೆ. ಕನ್ನಡಿಗರ ಧಾರ್ಮಿಕ ಪ್ರತಿನಿಧಿ. ಮೈಸೂರಿನ ಚಾಮುಂಡಿಬೆಟ್ಟಕ್ಕೆ, ದೇವಸ್ಥಾನಕ್ಕೆ, ದೇವಿಗೆ ಪೌರಾಣಿಕ, ಐತಿಹಾಸಿಕ ಹಿನ್ನೆಲೆಯಿದೆ. ನಾಡದೇವಿಯನ್ನು ಚಿನ್ನದ ರಥದಲ್ಲಿ ಕೂರಿಸಿ ಮೆರೆಸಬೇಕೆಂಬುದು ಭಕ್ತರ ಬೇಡಿಕೆ. ಚಿನ್ನದ ರಥ ನಿರ್ಮಾಣಕ್ಕೆ ಬೇಕಾದ ಅಂದಾಜು ವೆಚ್ಚದ ಪ್ರಸ್ತಾವವನ್ನು ಸರ್ಕಾರ ತಯಾರಿಸಬೇಕು. ಈ ಉದ್ದೇಶಕ್ಕೆ ದೇವಸ್ಥಾನದಲ್ಲಿ ಪ್ರತ್ಯೇಕ ಹುಂಡಿ ಇಡಬೇಕು. ಸಂಗ್ರಹವಾದ ಕಾಣಿಕೆಗಿಂತ ಹೆಚ್ಚಿಗೆ ಬೇಕಾಗುವ ಹಣವನ್ನು ಸರ್ಕಾರ ಭರಿಸಬೇಕು ಎಂದು ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೆ. ಅದಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ದಿನೇಶ್ ಗೂಳಿಗೌಡ ತಿಳಿಸಿದ್ದಾರೆ. ದೇವಸ್ಥಾನದಲ್ಲಿರುವ ಈಗಿನ ಮರದ ರಥವನ್ನು 1982ರಲ್ಲಿ ಕೊಯಮತ್ತೂರಿನ ಭಕ್ತಾದಿಗಳು ಮಾಡಿಸಿದ್ದರು ಎನ್ನಲಾಗುತ್ತದೆ. ಹಾಲಿ ರಥವೂ ಶಿಥಿಲವಾಗುತ್ತಾ ಬಂದಿದೆ. ಹೀಗಾಗಿ, ಹೊಸ ಚಿನ್ನದ ರಥ ನಿರ್ಮಿಸಿ, ಚಾಮುಂಡಿ ದೇವಿಯ ರಥೋತ್ಸವ ಮಾಡಬೇಕು ಎಂಬುದು ಭಕ್ತರ ಸಂಕಲ್ಪ. ಹೊಸ ಚಿನ್ನದ ರಥ ● 9ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ ಸಿಬಿಐಗೆ ವಹಿಸುವ ಸಂಬಂಧ

ನಾಳೆ ಹೈಕೋರ್ಟ್‌ನಲ್ಲಿ ವಿಚಾರಣೆ, ಇಂದು ಲೋಕಾಯುಕ್ತರಿಂದ ಮಧ್ಯಂತರ ವರದಿ ಸಲ್ಲಿಕೆ



ಮೈಸೂರು, ನ.24(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದ ತನಿಖೆಯ ಮಧ್ಯಂತರ ವರದಿಯನ್ನು ಲೋಕಾಯುಕ್ತರು ನಾಳೆ (ನವೆಂಬರ್ 25) ಹೈಕೋರ್ಟ್‌ಗೆ ಸಲ್ಲಿಸಲಿದ್ದಾರೆ.

ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದ ಬಗ್ಗೆ ನವೆಂಬರ್ 26ರಂದು ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುವ ಹಿನ್ನೆಲೆಯಲ್ಲಿ ನ್ಯಾಯಾಲಯದ ಸೂಚನೆಯಂತೆ ನಾಳೆ ಲೋಕಾಯುಕ್ತರು ಮಧ್ಯಂತರ ವರದಿ ಸಲ್ಲಿಸಲಿದ್ದಾರೆ.

ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಮುಡಾದ ಶೇಕಡ 50:50 ಅಕ್ರಮ ನಿವೇಶನ ಮಂಜೂರಾತಿ ಆಗಿರುವ ಪ್ರಕರಣದ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಲೋಕಾಯುಕ್ತ ಅಧಿಕಾರಿಗಳು ರಾಜ್ಯ ಸರ್ಕಾರದ ಅಧೀನದಲ್ಲಿ ಬರುವ ಕಾರಣ ಲೋಕಾಯುಕ್ತರಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ. ಆದ ಕಾರಣ ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಸ್ನೇಹಮಯಿ ಕೃಷ್ಣ ಪರ ವಕೀಲ ರಾಘವನ್ ನವೆಂಬರ್ 5ರಂದು ಹೈಕೋರ್ಟ್‌ನಲ್ಲಿ ನಡೆದ ● 9ನೇ ಪುಟಕ್ಕೆ

ಪ್ರಧಾನಿ ಮೋದಿಯವರ ಮನ್ ಕಿ ಬಾತ್‌ನಲ್ಲಿ

ಪಕ್ಷಿ, ಪ್ರಕೃತಿ ಮಹತ್ವ ತಿಳಿಸುತ್ತಿರುವ ಮೈಸೂರಿನ ಅರ್ಲಿ ಬರ್ಡ್ ಸಂಸ್ಥೆ ಬಗ್ಗೆ ಶ್ಲಾಘನೆ



ಮೈಸೂರು, ನ.24(ಬಿಎಲ್‌ಯು)– ಪಕ್ಷಿ ಹಾಗೂ ಪ್ರಕೃತಿಯ ಮಹತ್ವವನ್ನು ಮಕ್ಕಳಿಗೆ ತಿಳಿಸುತ್ತಿರುವ ಮೈಸೂರಿನ ಅರ್ಲಿ ಬರ್ಡ್ ಸಂಸ್ಥೆಯ ಕೆಲಸವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ.

ರೇಡಿಯೋ ಮೂಲಕ ಪ್ರಸಾರವಾಗುವ 116 ನೇ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಮಾತನಾಡಿದ ನರೇಂದ್ರ ಮೋದಿ ಅವರು, ಮಕ್ಕಳಿಗೆ ಪ್ರಕೃತಿ ಶಿಕ್ಷಣ ನೀಡುತ್ತಿರುವ ಮೈಸೂರಿನ ಅರ್ಲಿ ಬರ್ಡ್ ಸಂಸ್ಥೆ ಕಾರ್ಯ ಪ್ರಶಂಸನೀಯ ಎಂದು ಹೇಳಿದ್ದಾರೆ. ಅರ್ಲಿ ಬರ್ಡ್ ಸಂಸ್ಥೆ ಪಕ್ಷಿ ಮತ್ತು ಪ್ರಕೃತಿಯ ಮಹತ್ವವನ್ನು ಮಕ್ಕಳಿಗೆ ತಿಳಿಸುತ್ತಿದೆ. ಮಕ್ಕಳನ್ನು ಹಳ್ಳಿಗಳಿಗೆ ಕರೆದೊಯ್ದು ಪಕ್ಷಿ ಸಂಕುಲದ ಬಗ್ಗೆ ಪರಿಚಯ ಮಾಡಿಕೊಡುತ್ತಿದೆ ಎಂದರು. ● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಟೀಚರ್ : ಜಗತ್ತಿನ ಎರಡು ವೇಗದ ನೆಟ್‌ವರ್ಕ್‌ಗಳ ಯಾವುವು?
ಗುಂಡ : ಒಂದು ಇ–ಮೇಲ್, ಮತ್ತೊಂದು ಫೀ–ಮೇಲ್...!

ಮೈಸೂರು ಮಿತ್ರ
ಸೋಮವಾರ, 25 ನವೆಂಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಭಾವನೆಗಳಿಗೆ ಬೆಲೆ ಕೊಡಬೇಕು. ಆದರೆ, ಬಲಿಯಾಗಬಾರದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಳಾಗಿ ದುಡಿ, ಅರಸನಾಗಿ ಉಣ್ಣು

ನಿಮ್ಮ ಪತ್ರಗಳು

ನಕ್ಸಲ್ ವಾದ ಈಗ ಅಪ್ರಸ್ತುತ...

ಮಾನ್ಯರೆ,

ಕೊಲೆ, ಸುಲಿಗೆ ಸೇರಿ 61 ಪ್ರಕರಣಗಳಿದ್ದ, ಕೇರಳ, ಕರ್ನಾಟಕ ಪೊಲೀಸರಿಗೆ ಬೇಕಾಗಿದ್ದ ನಕ್ಸಲ್ ನಾಯಕ ವಿಕ್ರಂಗೌಡ ಪೊಲೀಸರು ಮತ್ತು ನಕ್ಸಲರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಹತ್ಯೆಯಾಗುವುದರೊಂದಿಗೆ ಕರ್ನಾಟಕದಲ್ಲಿನ ನಕ್ಸಲ್ ಹೋರಾಟ ಬಹುತೇಕ ಬಲಗುಂದಿದೆ.

1967ರಲ್ಲಿ ಪಶ್ಚಿಮ ಬಂಗಾಳದಲ್ಲಿ ಭೂ ಮಾಲೀಕರ ವಿರುದ್ಧ ಕೃಷಿ ಕಾರ್ಮಿಕರು ಸಿಡಿದಿದ್ದು, ಸಶಸ್ತ್ರ ಹೋರಾಟ ಆರಂಭಿಸಿ, 1969ರಲ್ಲಿ ಸಿಪಿಐಎಂಎಲ್ ಪಕ್ಷದ ಹುಟ್ಟಿಗೆ ಕಾರಣವಾದ ನಕ್ಸಲಿಸಂ, ಇಂದು ತನ್ನ ಮಹತ್ವವನ್ನು ಕಳೆದುಕೊಳ್ಳುವ ಹಂತ ತಲುಪಿದೆ. 1974ರ ನಂತರ ಜಾರಿಗೆ ಬಂದ ಭೂ ಸುಧಾರಣೆ ಕಾನೂನು, ರಿಯಾಯಿತಿ ಪಡಿತರ, ಉಚಿತ ಶಿಕ್ಷಣ ಸೇರಿದಂತೆ, ಬಡವರನ್ನು ಮೇಲೆತ್ತಲು ಅನೇಕ ಸುಧಾರಣಾ ಕ್ರಮಗಳನ್ನು ಕೇಂದ್ರ, ರಾಜ್ಯ ಸರ್ಕಾರಗಳೆರಡೂ ಮಾಡುತ್ತಾ ಬಂದಿವೆ. ಇತ್ತೀಚೆಗೆ ಪ್ರಕಟವಾದ ಅಂಕಿ ಅಂಶಗಳ ಪ್ರಕಾರ ಬಡತನ ರೇಖೆಯಿಂದ ಕೆಳಗಿರುವವರ ಪ್ರಮಾಣ ಈಗ ಕಡಿಮೆಯಾಗಿದ್ದು, ಸರ್ಕಾರದ ವಿವಿಧ ಸೌಲಭ್ಯ, ಮೀಸಲಾತಿ, ಕೊಡುಗೆಗಳ ಕಾರಣ ಬಡತನದ ಪ್ರಮಾಣ ಕಡಿಮೆಯಾಗಿದೆ, ಹಿಂದೆ ಭೂ ಮಾಲೀಕರಿಂದ ಶೋಷಣೆಗೆ ಒಳಗಾಗುತ್ತಿದ್ದರು ಎನ್ನುವುದು ಈಗ ಬಹಳಷ್ಟು ಭೂ ಮಾಲೀಕರು ಸಣ್ಣ ಹಿಡುವಳಿದಾರರಾಗಿದ್ದು, ಕೂಲಿ, ಕಂಬಳ ಏರಿಕೆಯಿಂದ ಬೆಳೆ ಬೆಳೆಯುವುದು ತ್ರಾಸದಾಯಕವಾಗಿದೆ.ನಿತ್ಯ ಐನೂರು, ಎಂಟನೂರು, ಕೂಲಿ ಕೊಡಲಾಗದೆ ಕೃಷಿಕ ಹೈರಾಣಾದರೆ ಇತ್ತ ಅದೇ ಕೂಲಿ ಕೆಲಸದಿಂದ ಪ್ರತಿ ದಿನ ಆದಾಯ ಪಡೆದು ಕೂಲಿ ಕಾರ್ಮಿಕರು ತೃಪ್ತಿ ಪಡುತ್ತಿದ್ದಾರೆ. ಭೂ ಮಾಲೀಕರು ಅಂತ ಇದ್ದರೆ ಅದು ಕಾಫಿ, ಟೀ ಎಸ್ಟೇಟ್‌ಗಳಷ್ಟೇ. ಇದು ಒಂದು ಕಡೆಯಾದರೆ, ಮತ್ತೊಂದು ಕಡೆ, ನಗರ, ಪಟ್ಟಣಗಳ ಸುತ್ತಮುತ್ತಲ ಜಮೀನುಗಳು ರಿಯಲ್ ಎಸ್ಟೇಟ್ ಮಾಫಿಯಗಳ ಮುಷ್ಟಿಯಲ್ಲಿದೆ.

ವಿಕ್ರಂಗೆ ದುಡಿದು ತಿನ್ನು, ಇದೆಲ್ಲ ಬೇಡ, ಎಂದು ಹೇಳಿದ್ದೆ, ಮೈಮುರಿದು ದುಡಿದಿದ್ದರೆ ಉತ್ತಮ ಬದುಕು ಕಟ್ಟಿಕೊಳ್ಳಬಹುದಿತ್ತು. ಎಂದು ಆತನ ಸೋದರ ಮಾವ ಹೇಳಿರುವುದು ನಕ್ಸಲ್ ವಾದಿಗಳ ಬದುಕನ್ನು ತೆರೆದಿಟ್ಟಿದೆ. ಇಂತಹ ಹತ್ಯಾಕಾರರನ್ನು ಪ್ರೋತ್ಸಾಹಿಸುವಂತೆ ನಕ್ಸಲ್ ಶರಣಾಗತಿ ಮತ್ತು ಪುನರ್ ವಸತಿ ಸಮಿತಿ ಸದಸ್ಯ ಬಂಜಗೆರೆ ಜಯಪ್ರಕಾಶ್ ಆಗ್ರಹಿಸಿರುವುದು ಹಾಸ್ಯಾಸ್ಪದವಾಗಿದೆ. ಕೊಲ್ಲುವುದು ಸಲ್ಲ ಎಂದಿದ್ದಾರೆ. ಹಾಗಾದರೆ ಪೊಲೀಸರು ಅವರಿಂದ ಕೊಲ್ಲಿಸಿ ಕೊಳ್ಳಬೇಕಾಗಿತ್ತು ಎನ್ನುವುದು ಅವರ ಇಂಗಿತವೇ?!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಈ ಸಾವಿಗೆ ಯಾರು ಹೊಣೆ?

ಮಾನ್ಯರೆ,

ಮೈಸೂರಿನ ಮೂವರು ಎಂಜಿನಿಯರಿಂಗ್ ವಿದ್ಯಾರ್ಥಿನಿಯರು, ದಕ್ಷಿಣ ಕನ್ನಡದ ಉಳ್ಳಾಲ ಬಳಿಯ ವಾಸ್ಕೊ ರೆಸಾರ್ಟ್‌ನ, ಈಜುಕೊಳದಲ್ಲಿ ಭಾನುವಾರ ಬೆಳಗ್ಗೆ ಈಜು ಬಾರದ ಕಾರಣ ಸಾವನ್ನಪ್ಪಿರುವುದು ಹೃದಯವಿದ್ರಾವಕ ಘಟನೆ, ಈ ಸಾವಿಗೆ ರೆಸಾರ್ಟ್ ಈಜುಕೊಳದಲ್ಲಿ ಈಜು ಸುರಕ್ಷಾ ಪರಿಕರಗಳು ಇರಲಿಲ್ಲ, ಈಜುಕೊಳದ ಸಿಬ್ಬಂದಿಯೂ ಆ ವೇಳೆಯಲ್ಲಿ ಇರಲಿಲ್ಲ ಎಂದು ಹೇಳಲಾಗುತ್ತಿದೆ. ಈ ಯುವತಿಯರು ಮುಳುಗುತ್ತಿದ್ದ ವೇಳೆ ಯುವತಿಯರು ಕೂಗಿಕೊಂಡರು ಯಾವುದೇ ಸಿಬ್ಬಂದಿ ಇವರ ನೆರವಿಗೆ ಬಂದಿಲ್ಲದಿರುವುದು ಅಲ್ಲಿನ ಸಿ.ಸಿ.ಕ್ಯಾಮರಾದ ದೃಶ್ಯಾವಳಿಯಿಂದ ಖಾತ್ರಿಯಾಗಿದೆ ಎಂದು ಮಂಗಳೂರಿನ ಪೊಲೀಸ್ ಆಯುಕ್ತರು ಹೇಳಿದ್ದಾರೆ. ಇದು ಮೇಲ್ನೋಟಕ್ಕೆ ರೆಸಾರ್ಟ್‌ನ ಲೋಪದೋಷಗಳೇ ಕಾರಣ ಎಂದು ಹೇಳಲಾಗುತ್ತಿದೆ, ಇದರಿಂದ ಆ ರೆಸಾರ್ಟ್ ಮಾಲೀಕನಿಗೆ ಶಿಕ್ಷೆಯು ಆಗಬಹುದು, ಆದರೆ ಹೋದ ಅಮೂಲ್ಯ ಜೀವಗಳು ಮತ್ತೆ ಬರುತ್ತವೆಯಾ? ಇದಕ್ಕೆ ಹೊಣೆ ಯಾರು? ಇಂತಹ ಪ್ರಕರಣಗಳು ಇನ್ನೆಂದೂ ಮರುಕಳಿಸದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು. –ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.



ರೇಷನ್ ಕಾರ್ಡೂ ಹಾಗೂ ಆದಾಯವೂ

ಮಾನ್ಯರೆ,



ಕಳೆದ ವಾರ ಬೆಂಗಳೂರಿಗೆ ಹೋಗಿದ್ದಾಗ ಹೆಗ್ಡೆ ನಗರದಿಂದ ಕತ್ರಿಗುಪ್ಪೆಗೆ ಊಬರ್ ಬುಕ್ ಮಾಡಿಸಿಕೊಂಡು ಹೋದೆ. ಮೊಬೈಲ್ ಸಹ ನಂದಲ್ಲ ಒಂದು ಗಂಟೆಗೂ ಹೆಚ್ಚಿನ ಪ್ರಯಾಣ. ಡ್ರೈವರ್ ಕುಳಿತುಕೊಳ್ಳುವಾಗ ಆಗಾಗ ಕುಳಿತುಕೊಳ್ಳುವ ಶೈಲಿ ಬದಲಾಯಿಸುತ್ತಿದ್ದ. ಯಾಕೆಂದು ಕೇಳಿದೆ. ಬೆನ್ನು ನೋವು, ಹೊದ್ವಾರ ಆಪರೇಷನ್ ಆಯಿತು. ರೆಸ್ಟ್ ತಗೋ ಅಂತಾರೆ. ಮನೇಲಿ ಇದ್ರೆ ಹೊಟ್ಟೆ ತುಂಬಬೇಕಲ್ಲ. ಡ್ಯೂಟಿಗೆ ಬಂದೆ. ಎಷ್ಟು ಖರ್ಚಾಯ್ತು ಅಂದೆ. ಎಷ್ಟೋ ಲಕ್ಷಾ ಅಂದ. ದುಡ್ಡಿಗೇನ್ಮಾಡಿದ್ರಿ ಅಂದೆ ನನ್ನದು BPL ಕಾರ್ಡ್ ಇದೇ. ಅದರ ಮೂಲಕ ಉಚಿತ ಆಪರೇಷನ್ ಆಯ್ತು ಅಂದ್ರು. ಗಾಡಿ ಯಾರದ್ದು ಅಂದೆ. ನಂದೇ, ನನ್ ಅಪ್ಪನ ಹೆಸರಲ್ಲಿದೆ ಅಂದ. ಸರ್ಕಾರ ಚಾಪೆ ಕೆಳಗೆ ನುಸುಳಿದರೆ. ಕಿಲಾಡಿಗಳು ರಂಗೋಲಿ ಕೆಳಗೆ ನುಸುಳುತ್ತಾರೆ. ಬಪ್ಪರೇ ಅಂದೆ ನಮ್ಮ ಸಿಸ್ಟಮ್ಮಿಗೆ.

–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು.

ನಿರಂತರ ಇರಲಿ ಗುಣಮಟ್ಟ

ಮಾನ್ಯರೆ,

ಗುಣಮಟ್ಟವನ್ನು ಕಾಯ್ದುಕೊಳ್ಳುವುದು ತೀರಾ ಅಗತ್ಯ. ಹಾಗಿದ್ದಾಗ ಮಾತ್ರ, ವಿದೇಶಗಳಲ್ಲಿ ನಮ್ಮ ಉತ್ಪನ್ನಗಳನ್ನು ಮಾರಲು ಸಾಧ್ಯ. ಆದರೆ ಇತ್ತೀಚೆಗೆ ಬಂದ ಕೆಲವು ಸುದ್ದಿಗಳು ಬಹಳ ನಿರುತ್ತೇಜನಕಾರಿಯಾಗಿದೆ. ಕೆಲವು ದೇಶಗಳಿಗೆ ರಫ್ತಾದ ಕೆಮ್ಮಿನ ಔಷಧಗಳನ್ನು ಸೇವಿಸಿದ ನೂರಾರು ಮಕ್ಕಳು ಸಾವಿಗೀಡಾಗಿದ್ದಾರೆ. ಹೀಗೆ ಆಗಲೇಬಾರದು. ಒಮ್ಮೆ ನಂಬಿಕೆ ಹೋದರೆ ಮತ್ತೆ ಅದನ್ನು ಗೆಲ್ಲುವುದು ಬಹಳ ಕಷ್ಟ. ದಿನೇ ದಿನೆ ನಮ್ಮ ಉತ್ಕೃಷ್ಟತೆಯ ಸಹಿಯನ್ನು ನಾವು ತಯಾರಿಸುವ ಉತ್ಪನ್ನಗಳ ಮೇಲೆ ಮುದ್ರಿಸಬೇಕು. ನಾವು ತಯಾರಿಸುವ ಪ್ರತಿಯೊಂದು ಉತ್ಪನ್ನದಲ್ಲೂ – ಭಾರತಕ್ಕೇ ಇರಲಿ, ದಕ್ಷಿಣ ಆಫ್ರಿಕಾಕ್ಕೇ ಹೋಗಲಿ, ಅಥವಾ ಜಪಾನಿಗೇ ಅಂತ ಮಾಡಿದ್ದಿರಲಿ ಅದರಲ್ಲಿ ಗುಣಮಟ್ಟವು ಅತ್ಯುತ್ತಮವಾಗಿರಬೇಕು. ಇದನ್ನು ಸಾಧಿಸುವುದರಲ್ಲಿ ಎಡವಿದರೆ ನಮ್ಮ ಕೈಯಲ್ಲಿರುವ ಅದ್ಭುತ ಅವಕಾಶವನ್ನು ಕೈಯಿಂದ ಚೆಲ್ಲಿದಂತೆ!

–ಚೇತನ್ ಎನ್, ನಗರ್ಲೆ, ನಂಜನಗೂಡು.

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



45. ಭಾಗವತ ಸುಬ್ಬರಾಯರು



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಈ ಹಿಂದೆ ಹೇಳಿದಂತೆ ಮೈಸೂರಿನ ಮಹಾರಾಜರ ಕಾಲದಲ್ಲಿ ಸಮಾಜದ ಏಳಿಗೆಗಾಗಿ ದುಡಿದವರು ಹಲವಾರು ಮಂದಿ ಇದ್ದರು. ಯಾವುದೇ ಆಸೆ–ಆಕಾಂಕ್ಷೆಗಳನ್ನು ಇಟ್ಟುಕೊಳ್ಳದೆ 'ಜನಸೇವೆಯೇ ಜನಾರ್ಧನ ಸೇವೆ' ಎಂದು ನಂಬಿ ದಾನ–ಧರ್ಮ ಮಾಡಿದವರು ಅನೇಕ ಮಂದಿ. ಯಾವುದೇ ಕೀರ್ತಿ–ಆಸೆಗಳನ್ನು ಬಯಸದೆ ನಿಸ್ವಾರ್ಥವಾಗಿ ಈ ಮಹನೀಯರು ತಮ್ಮ ಸೇವೆಯನ್ನು ಮಾಡಿದರು. ಅಂತಹವರಿಗೆ ಮಹಾರಾಜರ ಬೆಂಬಲ–ನೆರವು–ಪ್ರೋತ್ಸಾಹವೂ ಇತ್ತು. ಈ ಜನರನ್ನು ಗುರುತಿಸಿ ಅರಮನೆಯಲ್ಲಿಯಾಗಲೀ, ಆಸ್ಥಾನದಲ್ಲಾಗಲಿ ಅವರಿಗೆ ಆಶ್ರಯ–ಬೆಂಬಲ ನೀಡುತ್ತಿದ್ದರು. ಹಾಗೆ ಸಾಧನೆ ಮಾಡಿದವರಲ್ಲಿ ಭಾಗವತ ಸುಬ್ಬರಾಯರೂ ಒಬ್ಬರು.

ಮೈಸೂರಿನ ಮಧ್ಯಭಾಗದಲ್ಲಿ ಸುಬ್ಬರಾಯನ ಕೆರೆ ನೋಡಬಹುದು. ಈ ಐತಿಹಾಸಿಕ ಕೆರೆಗೆ ಕಾರಣಕರ್ತರು ಸುಬ್ಬರಾಯರು. ಆ ಕಾರಣಕ್ಕಾಗಿಯೇ ಅದು ಸುಬ್ಬರಾಯನಕೆರೆ. ಅವರ ಸೇವೆ, ನಗರಕ್ಕೆ ಅಂದು ಕೊಟ್ಟ ಕೊಡುಗೆ ಇಂದೂ ಉಳಿದುಬಂದಿದೆ. ಅವರ ಹೆಸರನ್ನು ಚಿರಸ್ಮರಣೀಯವನ್ನಾಗಿ ಮಾಡಿದೆ. ಕುಡಿಯುವ ನೀರು ಸಿಗಲಾರದ ದಿನಗಳಲ್ಲಿ ಜನರಿಗೆ ನೀರುಣಿಸುವುದಕ್ಕಿಂತ ದೊಡ್ಡ ಸೇವೆ ಬೇರೆ ಇರಲಿಲ್ಲ. ಅದೊಂದು ಭಗವತ್ಕಾರ್ಯವಾಗಿತ್ತು. ಅಂತಹ ಸತ್ಕಾರ್ಯವಾಗಿತ್ತು. ಇಂತಹ ಸಾರ್ವಜನಿಕ ಸೇವೆ ಅಂದು ಸಾಮಾನ್ಯವಾಗಿತ್ತು. ಹಾಗೆ ಅರಿತು ಸಮಾಜದ ಋಣ ತೀರಿಸಿದವರು ಹಲವಾರು ಮಂದಿ. ಅವರಲ್ಲಿ ಸುಬ್ಬರಾಯರೂ ಒಬ್ಬರು. ಆ ಕೆರೆ ಇಂದು ನೀರಿಲ್ಲದಿದ್ದರೂ ಬೇರೆ ರೀತಿ ಸಾರ್ವಜನಿಕರಿಗೆ ನೆರವಾಗಿದೆ. ಸುಬ್ಬರಾಯರ ಸತ್ಕಾರ್ಯ ಬೇರೆ ರೀತಿ ಸದುಪಯೋಗವಾಗುತ್ತಿದೆ. ಅವರ ಹೆಸರನ್ನು ಉಳಿಸಿಕೊಂಡು ಹೋಗುತ್ತಿದೆ.

ಸುಬ್ಬರಾಯರು ಬೊಬ್ಬೂರು ಕಮ್ಮೆ ಪಂಗಡದವರು. ಇವರು ಮೈಸೂರು ಅರಮನೆಯ ಖಾಸಾ ಬೊಕ್ಕಸದ ಇಲಾಖೆಯಲ್ಲಿ ಒಬ್ಬ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಜೊತೆಗೆ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಭಾಗವತ ಪ್ರವಚನವನ್ನೂ ಮಾಡಿ ವಿವರಿಸುತ್ತಿದ್ದರು. ಈ ಕಾರಣ ಅವರ ಹೆಸರಿಗೆ 'ಭಾಗವತ' ಸೇರಿಹೋಗಿತ್ತು. ಭಾಗವತ ಸುಬ್ಬರಾಯರನ್ನು ಕಂಡರೆ ಮಹಾರಾಜರಿಗೆ ಹೆಚ್ಚಿನ ಗೌರವ. ಇವರು ಮಾಡುತ್ತಿದ್ದ ದಾನ–ಧರ್ಮ ಕಾರ್ಯಗಳ ಬಗ್ಗೆ ವಿಶೇಷ ಅಭಿಮಾನ–ಮೆಚ್ಚುಗೆ. ಇಬ್ಬರೂ ಏಕ ಮನಸ್ಕರು. ಸುಬ್ಬರಾಯರಾದರೋ ಮಹಾರಾಜರಿಗೆ ಹತ್ತಿರವಾಗಿದ್ದು ಅವರ ಶ್ರೇಯಸ್ಸನ್ನೇ ಸದಾ ಬಯಸುತ್ತಿದ್ದರು. ತಮ್ಮ ಸೇವಾ ಮನೋಭಾವ, ಸಾತ್ವಿಕತೆ, ಮತ್ತು ನಿಷ್ಠೆಯಿಂದ ಅವರ ಗೌರವ–ಅಭಿಮಾನವನ್ನು ಗಳಿಸಿದ್ದರು. ಇದರಿಂದಾಗಿ ಸುಬ್ಬರಾಯರಿಗೆ ಬೊಕ್ಕಸದ ಇಲಾಖೆಯ ಜೊತೆಗೆ ಝನಾನ ಬಾಗಿಲಿನ ಎಲ್ಲ ಕಾರ್ಯಗಳ ಜವಾಬ್ದಾರಿಯನ್ನೂ ವಹಿಸಲಾಗಿತ್ತು. ಝನಾನ ಬಾಗಿಲಿನ ಮೊಕ್ತೇಸರು ಆಗಿದ್ದು ಝನಾನದ ಘೋಷಾ ಪದ್ಧತಿಯ ಕಟ್ಟುಪಾಡುಗಳು ಇವರಿಗೆ ಅನ್ವಯವಾಗುತ್ತಿರಲಿಲ್ಲ. ರಾಣೀವಾಸದ ಭಾಗಗಳಿಗೆ ಹೋಗಲು ಇವರಿಗೆ ಯಾವ ನಿರ್ಬಂಧಗಳೂ ಇರಲಿಲ್ಲ.

ಸಮ್ಮುಖದ ಊಳಿಗದ ಎರಡು ಶಾಖೆಗಳ ಪೈಕಿ ಝನಾನಾ ಸಮ್ಮುಖ ಒಂದು. ಇನ್ನೊಂದು ಖಾಸ್ ಸಮ್ಮುಖ. ಝನಾನಾ ಸಮ್ಮುಖ ಅಂತಃಪುರದ ಒಳಗಿನ ನೌಕರರ ಜವಾಬ್ದಾರಿ ನಿರ್ವಹಿಸುತ್ತಿತ್ತು. ಝನಾನಾ ಸಮ್ಮುಖವನ್ನು ಮೂರು ವಿಭಾಗಗಳನ್ನಾಗಿ ಮಾಡಲಾಗಿತ್ತು. ಅವೆಂದರೆ ಅಂಬಾ ವಿಲಾಸ, ಝನಾನಾ ಬಾಗಿಲು, ಮತ್ತು ಒಳ ಬಾಗಿಲು. ಮಹಾರಾಜ ಕೃಷ್ಣರಾಜ ಒಡೆಯರು ನಿಧನರಾದ ಮೇಲೆ 1868ರಲ್ಲಿ ಸುಬ್ಬರಾಯರು ಅರಮನೆ ಬೊಕ್ಕಸದ ಎರಡನೇ ಭಕ್ಷಿಯಾಗಿ ನಿವೃತ್ತರಾದಂತೆ ಕಂಡು ಬರುತ್ತದೆ.

ವೇದಗಳನ್ನು ಕಲಿಯುವವರ ಮತ್ತು ವೇದಗಳನ್ನು ಕಲಿತ ವೈದಿಕರ ಬಗ್ಗೆ ಸುಬ್ಬರಾಯರಿಗೆ ಹೆಚ್ಚಿನ ಗೌರವ ಇತ್ತು. ವೇದಾಚರಣೆ ಮಾಡುತ್ತಾ ತಾವೇ ಶ್ರೋತ್ರೀಯ ಬ್ರಾಹ್ಮಣರ ಬದುಕು ನಡೆಸಿಕೊಂಡು ಹೋಗುತ್ತಿದ್ದರು. ಅವರ ಮನೆ ಒಂದು ಛತ್ರದಂತಿದ್ದು ಅಲ್ಲಿಗೆ ಅನೇಕ ಮಂದಿ ಅತಿಥಿಗಳಾಗಿ ಬಂದು ಹೋಗುತ್ತಿದ್ದರು. ಪ್ರತಿ ದಿನ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಅಂತಹವರು ಅವರ ಮನೆಗೆ ಬಂದು ಆತಿಥ್ಯ ಪಡೆದು ಹೋಗುತ್ತಿದ್ದರು. ಅವರ ವಿಶಾಲವಾದ ಮನೆ ಒಂದು ಶಾಲೆಯಂತಿತ್ತು. ಹಲವಾರು ಪಂಡಿತರು ಅಲ್ಲಿ ವೇದಾಭ್ಯಾಸಗಳಿಗೆ ಪಾಠ–ಪ್ರವಚನಗಳನ್ನು ಹೇಳಿಕೊಡುತ್ತಿದ್ದರು. ವೇದಾಭ್ಯಾಸಕ್ಕಾಗಿ, ಅಧ್ಯಯನಕ್ಕಾಗಿ ಹೊರಗಿನಿಂದ ಬಂದ ಹಲವಾರು ವಿದ್ಯಾರ್ಥಿಗಳೇ ಅಲ್ಲದೆ ಯಾತ್ರಾರ್ಥಿಗಳೂ, ವಿದ್ವಾಂಸರೂ ಅವರ ಮನೆಗೆ ಬಂದು ಒಂದೆರಡು ದಿನಗಳ ಆಶ್ರಯ ಪಡೆದು ಹೋಗುತ್ತಿದ್ದರು. ಅವರಿಗೆ ಬೇಕಾದ ಸೌಕರ್ಯಗಳನ್ನಲ್ಲದೆ, ಸುಬ್ಬರಾಯರು ಅವರಿಗೆ ನೆರವೂ ನೀಡುತ್ತಿದ್ದರು. ಅವರಿಗೆ ವರ್ಷಕ್ಕೊಮ್ಮೆ ಒಂದು ಜೊತೆ ಪಂಚೆಯನ್ನು ದಾನವಾಗಿ ಕೊಡುತ್ತಿದ್ದರು. ಅಂತಹವರು ಒಳ್ಳೆಯ ವಿದ್ವಾಂಸರೂ, ವೇದ ಪಂಡಿತರೂ ಆದರೆ ಅವರನ್ನು ಮಹಾರಾಜರಿಗೆ ಪರಿಚಯ ಮಾಡಿಸುತ್ತಿದ್ದರು. ವಿಶಾಲ ಮನೋಭಾವದವರಾಗಿದ್ದರಲ್ಲದೆ ಸರಳರೂ ಆಗಿದ್ದ ಅವರು ತಾವೂ ವಿದ್ಯಾರ್ಥಿಗಳೊಂದಿಗೇ ಕುಳಿತು ಊಟ ಮಾಡುತ್ತಿದ್ದರು. ಅವರಿಗೆ ಮಾಡಿದ್ದ ಅಡುಗೆಯನ್ನೇ ತಾವು ತಿನ್ನುತ್ತಿದ್ದರು.

ಅಷ್ಟೇ ಅಲ್ಲದೆ ಅವರು ಕೆಲವು ಛತ್ರಗಳನ್ನು, ದೇವಸ್ಥಾನಗಳನ್ನು, ಕೆರೆಗಳನ್ನು, ದನಕರುಗಳಿಗೆ ನೀರು ಕುಡಿಯುವ ತೊಟ್ಟಿಗಳನ್ನು, ಮಂಟಪಗಳನ್ನು ಕಟ್ಟಿಸಿದ್ದರು. ಯಾಗಗಳನ್ನೂ ಮಾಡಿಸುತ್ತಿದ್ದರು. ಕನ್ನಂಬಾಡಿಯಲ್ಲಿ (ಕೃಷ್ಣರಾಜಸಾಗರ) ಇವರು ಸುಬ್ರಹ್ಮಣ್ಯಪುರ ಹೆಸರಿನಲ್ಲಿ ಒಂದು ಅಗ್ರಹಾರವನ್ನು ಕಟ್ಟಿಸಿ ನರಸಿಂಹಸ್ವಾಮಿ ದೇವರ ಒಂದು ದೇವಸ್ಥಾನವನ್ನು ಕಟ್ಟಿಸಿದ್ದು, ಅವನ್ನು ಏಪ್ರಿಲ್ 22, 1839ರಲ್ಲಿ ಘಂಟಾವತಾರ ಪರಕಾಲ ಸ್ವಾಮಿಗಳವರಿಂದ ಅನಾವರಣಗೊಳಿಸಿದ್ದರು. ಹಾಗೆ ಅವರು ಕಟ್ಟಿಸಿದ್ದ ಕೆರೆಗಳ ಪೈಕಿ ಒಂದು ಅವರ ಹೆಸರಿನಲ್ಲಿ ಕರೆಯುಲಾಗುತ್ತಿರುವ ಸುಬ್ಬರಾಯನಕೆರೆ. ಅವರು ಸ್ಥಿತಿವಂತರಾಗಿದ್ದರೂ ಈ ಅಪಾರ ಸೇವೆಯಿಂದ ಸುಬ್ಬರಾಯರು ಒಮ್ಮೊಮ್ಮೆ ಸಾಲಗಳನ್ನು ಮಾಡಿಕೊಂಡು ತೀರಿಸಲು ಕಷ್ಟಪಡುತ್ತಿದ್ದರು. ಅವರ ಕಷ್ಟಗಳನ್ನು ನೋಡಿ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರೇ ಅವರ ಸಾಲಗಳನ್ನು ಹಲವಾರು ಬಾರಿ ತೀರಿಸಿದ್ದೂ ಉಂಟು. ಇಂತಹ ವಿಶಾಲ ಮನೋಭಾವದವರು ಭಾಗವತ ಸುಬ್ಬರಾಯರು. ಅಷ್ಟೇ ಹೃದಯ ವೈಶಾಲ್ಯದವರು ಮುಮ್ಮಡಿಯವರು.

ಅರಮನೆಯಲ್ಲಿ ಅಧಿಕಾರಿಯಾಗಿದ್ದು, ತಮ್ಮ ಸೇವಾ ಕಾರ್ಯಗಳಿಂದ ಪ್ರಸಿದ್ಧರೂ, ಮಾನ್ಯರೂ ಆಗಿದ್ದ ಭಾಗವತ ಸುಬ್ಬರಾಯರ ಬಗ್ಗೆ ಹೆಚ್ಚಿನ ವಿವರಗಳು ಕಂಡುಬರದೆ ಇರುವುದು ವಿಷಾದದ ಮಾತು. ಸುಬ್ಬರಾಯರ ಮೊಮ್ಮಕ್ಕಳಾದ ಸುಬ್ಬಕೃಷ್ಣಪ್ಪ ಎಂಬುವರು 1890ರಲ್ಲಿ ಶಿರಸ್ತೇದಾರರಾಗಿದ್ದರೆಂದು ಹೇಳಲಾಗಿದೆ. ಖ್ಯಾತ ಟೆಸ್ಟ್ ಕ್ರಿಕೆಟಿಗರಾದ ಬಿ (ಭಾಗವತ). ಎಸ್.ಚಂದ್ರಶೇಖರ್ ಸುಬ್ಬರಾಯರ ಮರಿಮಗನ ಮಗ.

(**ಚಿತ್ರ ಮತ್ತು ಮಾಹಿತಿ** ಕ್ಯಾಲಿಫೋರ್ನಿಯಾದ ಬೌರ್ನ್ಸ್ ಇಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ಪ್ರೊಫೆಸರ್ ಸಿ.ವಿ.ರವಿಶಂಕರ್ ಅವರ 'ಸನ್ಸ್ ಅಫ್ ಸರಸ್ವತಿ' ಪುಸ್ತಕದಿಂದ).

ಪ್ರಗತಿಪರ ರೈತ ಮಾತ್ರವಲ್ಲ ಜನಪರ ನಾಯಕ ಜಿಟಿಡಿ

ಮೈಸೂರು, ನ.24(ಎಸ್‌ಬಿಡಿ)– ಮಾದರಿ ರೈತ, ಅತ್ಯುತ್ತಮ ಸಹಕಾರಿ, ಬದ್ಧತೆಯ ರಾಜಕೀಯ ಮುತ್ಸದ್ದಿ, ಸಂಘಟಕ, ಸಮಾಜ ಸೇವಕ, ಜನಪ್ರೀತಿಯ ಆಡಳಿತಗಾರ ಜಿ.ಟಿ.ದೇವೇಗೌಡರಿಗೆ ಹುಟ್ಟುಹಬ್ಬದ ಸಂಭ್ರಮ. ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾಗಿರುವ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿಟಿಡಿ ಜೀವನಯಾನ ಯುವ ಜನತೆಗೆ ಪ್ರೇರಣೆಯಾಗಬಹುದು. ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರ ಬಾಲ್ಯ, ಬೆಳೆದು ಬಂದ ಹಾದಿಯ ಬಗ್ಗೆ ಸಂಕ್ಷಿಪ್ತ ವಿವರ ಇಲ್ಲಿದೆ.



ಜಿ.ಟಿ.ದೇವೇಗೌಡರು

ಜಿಟಿಡಿ ಬಾಲ್ಯ: ಮೈಸೂರು ತಾಲೂಕು, ಇಲವಾಲ ಹೋಬಳಿ, ಗುಂಗ್ರಾಲ್ ಛತ್ರ ಗ್ರಾಮದ ಲೇಟ್ ತಮ್ಮೇಗೌಡ ಅವರ ಪುತ್ರನಾಗಿ 1949ರ ನವೆಂಬರ್ 25ರಂದು ಜನಿಸಿದ ಜಿಟಿಡಿ, 3ನೇ ತರಗತಿ ವರೆಗೆ ಹುಣಸೂರು ತಾಲೂಕು ಶಾನುಬೋಗನಹಳ್ಳಿ ಶಾಲೆ, ನಂತರ ಗುಂಗ್ರಾಲ್ ಛತ್ರ, ಕಲ್ಲೂರು, ಇಲವಾಲ ಪ್ರೌಢಶಾಲೆಯಲ್ಲಿ 9ನೇ ತರಗತಿವರೆಗೆ ಕಲಿತರು. ಹೈಸ್ಕೂಲ್‌ನಲ್ಲಿದ್ದಾಗಲೇ ವ್ಯವಸಾಯದಲ್ಲಿ ತೊಡಗಿಸಿಕೊಂಡ ಇವರಿಗೆ ಶಿಕ್ಷಣ ಮುಂದುವರೆಸಲು ಸಾಧ್ಯವಾಗಲಿಲ್ಲ. 1966ರಲ್ಲಿ ಭೀಕರ ಬರಗಾಲವಿದ್ದ ವೇಳೆ ತಂದೆ ನಿಧನರಾದ ನಂತರ ತುಂಬು ಕುಟುಂಬದ ನೊಗ ಹೊರಬೇಕಾಯಿತು. ಐವರು ಸಹೋದರಿಯರಲ್ಲಿ ಇಬ್ಬರಿಗೆ ವಿವಾಹವಾಗಿತ್ತು. ಇನ್ನು ಮೂವರು ಸೋದರಿಯರು ಹಾಗೂ 1 ವರ್ಷದ ತಮ್ಮನ ಜವಾಬ್ದಾರಿ ಹೊತ್ತು ಮನೆಯ ಹಿರಿಯನಂತೆ ಜೀವನ ಕಟ್ಟಿದರು.

ಉತ್ತಮ ಸಹಕಾರಿ: 1970ರಲ್ಲಿ ಗುಂಗ್ರಾಲ್ ಛತ್ರ ಸಹಕಾರ ಸಂಘದಲ್ಲಿ ಕಾರ್ಯದರ್ಶಿಯಾಗಿ ಸಹಕಾರ ಕ್ಷೇತ್ರಕ್ಕೆ ಹೆಜ್ಜೆ ಇಟ್ಟು ತಮ್ಮದೇ ಆದ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಕಾರ್ಯದರ್ಶಿಯಾಗಿದ್ದಾಗ ಗ್ರಾಮದ ಪ್ರತಿ ಮನೆಗೆ ಶೇ.4ರ ಬಡ್ಡಿದರದಲ್ಲಿ ಸಾಲ ಸೌಲಭ್ಯ, ವಿದ್ಯುತ್ ಸಂಪರ್ಕ ಕಲ್ಪಿಸುವ ಮೂಲಕ ಸಹಕಾರ ಕ್ಷೇತ್ರದ ಮಹತ್ವವನ್ನು ಜನರಿಗೆ ಮನವರಿಕೆ ಮಾಡಿಕೊಟ್ಟರು. 1982ರಲ್ಲಿ ಸಂಘದ ಅಧ್ಯಕ್ಷರಾಗಿ ಮತ್ತಷ್ಟು ಸೇವೆ ಸಲ್ಲಿಸಿ, 1983ರ ಮೈಸೂರು ತಾಲೂಕು ಎಪಿಎಂಸಿ ಚುನಾವಣೆಯಲ್ಲಿ ಉಪಾಧ್ಯಕ್ಷರಾಗಿ ಆಯ್ಕೆಯಾದರು. ರೈತಪರವಾದ ತರಕಾರಿ ನಿಯಂತ್ರಣ ಕಾಯ್ದೆ ಜಾರಿಗೆ ಹೋರಾಟ ನಡೆಸಿ, ಸಫಲರಾದರು. 1986ರಲ್ಲಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್, ಟಿಎಪಿಸಿಎಂಎಸ್ ನಿರ್ದೇಶಕ, 1992ರಿಂದ ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿರ್ದೇಶಕ, ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ, ಯೂನಿಯನ್ ಅಧ್ಯಕ್ಷ, ಮೈಸೂರು ವಿಭಾಗದಿಂದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕ, ಮಹಾಮಂಡಳದ ಅಧ್ಯಕ್ಷ, ರಾಷ್ಟ್ರೀಯ ಸಹಕಾರ ಯೂನಿಯನ್ ನಿರ್ದೇಶಕ, ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷ, ಹೀಗೆ ಸಹಕಾರ ಕ್ಷೇತ್ರದ ಹತ್ತು–ಹಲವು ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. 1995ರಿಂದ ಮೂರೂವರೆ ವರ್ಷ ಹಾಗೂ 2001ರಿಂದ ಈವರೆಗೂ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಮೂಲಕ ಸಾಧನೆ ಸೌಧ ನಿರ್ಮಿಸಿದ್ದಾರೆ. 'ಮೈಸೂರು ವಿಭಾಗದ ಅತ್ಯುತ್ತಮ ಕಾರ್ಯದರ್ಶಿ', 'ಭಾರತ ವಿಕಾಸ ರತ್ನ', 'ಜೀವನಶ್ರೇಷ್ಠ', 'ಸಹಕಾರ ಕ್ಷೇತ್ರದ ರಾಯಭಾರಿ', 'ಸಹಕಾರಿ ಶಿರೋಮಣಿ' ಸೇರಿದಂತೆ ಹಲವು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿಗಳು ಸಂದಿವೆ.

ರಾಜಕೀಯ ಪಯಣ: 1971ರ ಲೋಕಸಭಾ ಚುನಾವಣೆಯಲ್ಲಿ ಸಂಸ್ಥಾ ಕಾಂಗ್ರೆಸ್ ಮೂಲಕ ರಾಜಕೀಯ ಪ್ರವೇಶಿಸಿದ ಜಿಟಿಡಿ, ಡಾ:ಹೆಚ್.ಎಲ್.ತಿಮ್ಮೇಗೌಡರ ನೇತೃತ್ವದಲ್ಲಿ ಸಕ್ರಿಯರಾದರು. 1983ರಿಂದ 2006ರವರೆಗೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿದ್ದು, ಸಿದ್ದರಾಮಯ್ಯನವರ ಗೆಲುವಿಗೆ ಶ್ರಮಿಸಿದರು. 1987ರಲ್ಲಿ ರಾಜ್ಯದಲ್ಲಿ ಪ್ರಥಮವಾಗಿ ನಡೆದ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಇಲವಾಲ ಕ್ಷೇತ್ರದಿಂದ ಸ್ಪರ್ಧಿಸಿ, ಗೆದ್ದರು. ಜಿಲ್ಲಾ ಪರಿಷತ್ ಆಡಳಿತ ಪಕ್ಷದ ನಾಯಕನಾಗಿ, ಹಣಕಾಸು ಮತ್ತು ಕಾಮಗಾರಿ ಸಮಿತಿಗಳಲ್ಲಿ ಸದಸ್ಯನಾಗಿ ಕಾರ್ಯ ನಿರ್ವಹಿಸಿದರು. 1987–90ರವರೆಗೆ ಜಿಲ್ಲಾ ಯುವ ಜನತಾದಳ ಉಪಾಧ್ಯಕ್ಷರಾಗಿ ಪಕ್ಷ ಸಂಘಟಿಸಿದರು. 1989ರಲ್ಲಿ ಮೈಸೂರು ತಾಲೂಕು ಪಂಚಾಯ್ತಿ ಅಧ್ಯಕ್ಷರಾದರು. 1990ರಿಂದ ಹತ್ತು ವರ್ಷ ಜಿಲ್ಲಾ ಗ್ರಾಮಾಂತರ ಜನತಾದಳದ ಮಹಾಪ್ರಧಾನ ಕಾರ್ಯದರ್ಶಿಯಾಗಿದ್ದರು. 1995ರಲ್ಲಿ ಇಲವಾಲ ಕ್ಷೇತ್ರದಿಂದ ಜಿಲ್ಲಾ ಪಂಚಾಯತ್‌ಗೆ ಪುನರಾಯ್ಕೆಯಾದರು. 1995–97ರ ಅವಧಿಯಲ್ಲಿ ಮೈಸೂರು ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ, ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯ ಪರಿಣಾಮಕಾರಿ ಜಾರಿಗೆ ಶ್ರಮಿಸಿದರು. 1995–97ರ ಅವಧಿಯಲ್ಲಿ ಕರ್ನಾಟಕ ರಾಜ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರು/ಉಪಾಧ್ಯಕ್ಷರುಗಳ ಸಂಘಟನೆಯ ರಾಜ್ಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು.

ಲೋಕಸಭೆ– ವಿಧಾನಸಭೆಗೆ : 1996ರ ಲೋಕಸಭಾ ಚುನಾವಣೆಯಲ್ಲಿ ಮೈಸೂರು ಕ್ಷೇತ್ರದಿಂದ ಮಹಾರಾಜ ಶ್ರೀಕಂಠದತ್ತ ಒಡೆಯರ್ ಅವರ ವಿರುದ್ಧ ಸ್ಪರ್ಧಿಸಿ, ಕೇವಲ 10 ಸಾವಿರ ಮತಗಳ ಅಂತರದಲ್ಲಿ ಪರಾಜಿತರಾದರು. 1997ರಲ್ಲಿ ಕರ್ನಾಟಕ ಪ್ರದೇಶ ಜನತಾದಳದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಜಿಟಿಡಿ, 1998ರ ಲೋಕಸಭಾ ಚುನಾವಣೆಯಲ್ಲಿ ಮತ್ತೆ ಸೋಲುಂಡರು. 1998ರ ಹುಣಸೂರು ಉಪಚುನಾವಣೆಯಲ್ಲಿ ಗೆಲುವು ದಾಖಲಿಸಿ, ವಿಧಾನಸಭೆ ಪ್ರವೇಶಿಸಿದರು. 1999ರ ಸಾರ್ವತ್ರಿಕ ಚುನಾವಣೆಯಲ್ಲಿ ಸೋತ ನಂತರ ಏಳು ವರ್ಷ ಜಿಲ್ಲಾ ಗ್ರಾಮಾಂತರ ಜಾತ್ಯಾತೀತದಳ ಅಧ್ಯಕ್ಷರಾಗಿದ್ದರು. ಆ ವೇಳೆ ರಾಜ್ಯದಲ್ಲಿಯೇ ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್‌ಗಳ ಜೆಡಿಎಸ್ ಅಧಿಕಾರ ಹಿಡಿದಿದ್ದು ದಾಖಲೆ. 2004ರ ಚುನಾವಣೆಯಲ್ಲಿ ಹುಣಸೂರಿನಿಂದ ಶಾಸಕರಾಗಿ ಪುನರಾಯ್ಕೆಯಾಗಿ, 2007ರಲ್ಲಿ ಮೊದಲ ಬಾರಿ ಸಚಿವರಾದರು. ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಸಹಕಾರ ಸಚಿವರಾಗಿ ಸೇವೆ ಸಲ್ಲಿಸಿದರು. 2008ರಿಂದ 2013ರವರೆಗೆ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿದ್ದರು. 2013ರ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧಿಸಿ, ಗೆದ್ದರು. 2018ರಲ್ಲಿ ಸಿದ್ದರಾಮಯ್ಯ ಅವರನ್ನು 36 ಸಾವಿರ ಮತಗಳ ಅಂತರದಲ್ಲಿ ಮಣಿಸುವ ಮೂಲಕ ದೇಶದ ಗಮನ ಸೆಳೆದರು. ಉನ್ನತ ಶಿಕ್ಷಣ ಸಚಿವರಾಗಿ ನಂತರ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯ ನಿರ್ವಹಿಸಿದರು.

ಸಚಿವರಾಗಿ ಸಾಧನೆ: ಸಹಕಾರ ಸಚಿವರಾಗಿದ್ದಾಗ ರಾಜ್ಯದ 6,56,800 ರೈತರಿಗೆ ತಲಾ 25,000 ರೂ.ಗಳಂತೆ 2000 ಕೋಟಿ ರೂ.ಗಳ ಸಾಲ ಮನ್ನಾ ಮಾಡಿ, ಮನೆ ಬಾಗಿಲಿಗೆ ಸಾಲ ತೀರುವಳಿ ಪತ್ರ ವಿತರಿಸಲಾಯಿತು. ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸಬಲಗೊಳಿಸಲು ವೈದ್ಯನಾಥನ್ ಸಮಿತಿ ವರದಿ ಜಾರಿಗೊಳಿಸಲಾಯಿತು. ಮೈಸೂರಿನಲ್ಲಿ ಸಹಕಾರಿ ಶತಮಾನೋತ್ಸವದ ಸಮಾರೋಪ ಸಮಾರಂಭವನ್ನು ಯಶಸ್ವಿಯಾಗಿ ನಡೆಸಲಾಯಿತು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ರಾಜ್ಯದಲ್ಲೇ ಮೊದಲಿಗೆ 'ಹಳ್ಳಿಯೆಡೆಗೆ ಸರ್ಕಾರದ ನಡಿಗೆ' ಕಾರ್ಯಕ್ರಮ ಆರಂಭಿಸಿದರು. ಮೈಸೂರು ನಗರದಲ್ಲಿ 'ಅಧಿಕಾರಿಗಳ ನಡಿಗೆ ಮೈಸೂರು ಮನೆ ಮನೆಗೆ' ಕಾರ್ಯಕ್ರಮ ರೂಪಿಸಿದ್ದರು. ಲಕ್ಷ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದರು. ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಗ್ರಾಮ ವಾಸ್ತವ್ಯ ಹೂಡಿದ್ದರು. ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿದ್ದಾಗ ವಿವೇಚನಾ ಕೋಟಾದಲ್ಲಿ ನೀಡುವ ನಿವೇಶನಗಳಲ್ಲಿ ಶೇ.22.75 ರಷ್ಟನ್ನು ಎಸ್ಸಿ, ಎಸ್ಟಿ ಸಮುದಾಯದವರಿಗೆ ಮೀಸಲಿಡಲಾಗಿತ್ತು. ಬೆಂಗಳೂರಿನಲ್ಲಿ 750 ಎಕರೆ ಪ್ರದೇಶದಲ್ಲಿ ಸೂರ್ಯನಗರ 2ನೇ ಹಂತ ಬಡಾವಣೆ ನಿರ್ಮಿಸಿ, 9500 ನಿವೇಶನಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಲಾಯಿತು. ಮೈಸೂರು ಇಲವಾಲದ ಬಳಿ ಕೆ.ಆರ್.ಎಸ್. ನಿಸರ್ಗ ಬಡಾವಣೆಯನ್ನೂ ಆ ಅವಧಿಯಲ್ಲೇ ನಿರ್ಮಾಣ ಮಾಡಲಾಯಿತು.

ಮಾದರಿ ರೈತ: 1965ರಿಂದಲೂ ಕೃಷಿಯಲ್ಲಿ ತೊಡಗಿ, ಆಧುನಿಕ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೂಲಕ ಮಾದರಿ ರೈತರಾದರು. ನೀರಾವರಿ ಬಾವಿ ಮೂಲಕ ತೆಂಗು, ಬಾಳೆ, ಮಾವಿನ ತೋಟವನ್ನು ಅಭಿವೃದ್ಧಿಪಡಿಸಿ, ಯುವ ರೈತರಿಗೆ ಪ್ರೇರಣೆಯಾದರು. ರಾಜ್ಯ ಕೃಷಿ ನಿರ್ದೇಶಕರಿಂದ 'ಪ್ರಗತಿಪರ ರೈತ' ಮನ್ನಣೆಗೆ ಭಾಜನರಾದರು. ಗ್ರಾಮದಲ್ಲಿ ಯೂತ್ ಕ್ಲಬ್ ಮೂಲಕ ಸಾವಯವ ಕೃಷಿ ಪದ್ಧತಿ ಅಳವಡಿಕೆ ಹಾಗೂ ಕಾಂಪೋಸ್ಟ್ ಗೊಬ್ಬರ ಉತ್ಪಾದನೆ ಮತ್ತು ಬಳಕೆಯಲ್ಲಿ ಯಶಸ್ವಿಯಾಗಿ ಜಿಲ್ಲಾಧಿಕಾರಿಗಳಿಂದಲೂ ಪ್ರಶಸ್ತಿ ಪಡೆದರು. ಜೀವನದಲ್ಲಿ ಯಾವುದೇ ಸ್ಥಾನಮಾನ ದೊರೆತರೂ ಇಂದಿಗೂ ಅವರು ಕೃಷಿಯಲ್ಲಿ ಸಕ್ರಿಯರಾಗಿರುವುದು ಅನುಕರಣೀಯ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

'ನಾಸ್ತಿಕವಾದ' ಎಂದಿಗೂ 'ವಿಚಾರವಾದ' ಆಗಲು ಸಾಧ್ಯವಿಲ್ಲ

ಹಿರಿಯ ಸಾಹಿತಿ ಡಾ.ಲತಾ ಮೈಸೂರು ಪ್ರತಿಪ್ರಾದನೆ



ಕನ್ನಡ ರಾಜ್ಯೋತ್ಸವ-ಸುವರ್ಣ ಕರ್ನಾಟಕ ಸಂಭ್ರಮ-50ರ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ 10 ಮಂದಿ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು, ನ.24(ಎಸ್‌ಪಿಎನ್)- 'ನಾಸ್ತಿಕವಾದ' ಎಂದಿಗೂ 'ವಿಚಾರವಾದ' ಆಗುವುದಿಲ್ಲ ನಾಸ್ತಿಕವಾದ ಎನ್ನುವುದು ಸದಾ ಮುಚ್ಚಿರುವುದು ಎಂದರ್ಥ. 'ವಿಚಾರವಾದ' ಎಂಬುದು ಸದಾ ತೆರೆದಿರುವುದು ಎಂದು ಹಿರಿಯ ಸಾಹಿತಿ, ಕನ್ನಡ ಪ್ರಾಧ್ಯಾಪಕಿ ಡಾ.ಲತಾ ಮೈಸೂರು ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ-ಸುವರ್ಣ ಕರ್ನಾಟಕ ಸಂಭ್ರಮ-50ರ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಿ, ಕವನ ಸಂಕಲನವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಬರಹಗಾರರ ಒಕ್ಕೂಟ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕುವೆಂಪು ಅಧ್ಯಕ್ಷತೆ ವಹಿಸಿ, ವಿಚಾರವಾದ ಮತ್ತು ನಾಸ್ತಿಕವಾದ ಕುರಿತು ಮಾತನಾಡಿದ್ದರು. ಈ ಭಾಷಣ 'ವಿಚಾರ ಕ್ರಾಂತಿಗೆ ಆಹ್ವಾನ' ಸಮಗ್ರ ಅಧ್ಯಯನ ಪುಸ್ತಕದಲ್ಲಿ ಉಲ್ಲೇಖವಿದೆ. ನಾಸ್ತಿಕರು ಅಜ್ಞನಯತವಾದಿಗಳೇ ಹೊರತು ವಿಚಾರವಾದಿಗಳಾಗಲು ಸಾಧ್ಯವಿಲ್ಲ ಎಂದು ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತ ಕುವೆಂಪು ಅವರೇ ಸ್ಪಷ್ಟಪಡಿಸಿದ್ದಾರೆ.

'ದೇವರು' ಎಂಬುದು ನಂಬಹುದಾದ ಸತ್ಯ. ಆದರೆ, ಅದರ ಆಚಾರ-ವಿಚಾರಗಳಲ್ಲಿ ಪರ-ವಿರೋಧ ಚರ್ಚೆ ಇಂದಿಗೂ ನಡೆಯುತ್ತಿದೆ. ದೇವರು ಇದ್ದಾನೋ ಇಲ್ಲವೂ ಎಂಬುದರ ಬಗ್ಗೆ ಹನ್ನೆರಡನೆ ಶತಮಾನದ ಬಸವಣ್ಣ, ಅಲ್ಲಮ ಪ್ರಭು, ಅಕ್ಕ ಮಹಾದೇವಿ, ಚನ್ನಬಸವಣ್ಣ ಸೇರಿದಂತೆ ಅನೇಕ ವಚನಕಾರರು ತಮ್ಮ ತಮ್ಮ ವಿಚಾರಗಳನ್ನು ವಚನ ಸಾಹಿತ್ಯದ ಮೂಲಕ ಸಾರ್ವಜನಿಕಗೊಳಿಸಿದ್ದಾರೆ ಎಂದರು.

ಕುವೆಂಪುರವರ ಪ್ರಕಾರ ನಾಸ್ತಿಕವಾದ ಎಂಬುದು ಇಂದಿಗೆ ಕೊನೆಗೊಳ್ಳುತ್ತದೆ. ಆದರೆ, ವಿಚಾರವಾದ ಸದಾ ಹೊಸ ಆಯಾಮಕ್ಕೆ ತೆರೆದುಕೊಳ್ಳುತ್ತದೆ. ನಾಸ್ತಿಕವಾದಿಗಳು ಎಂದಿಗೂ ವಿಚಾರವಾದಿಗಳಾಗಲು ಸಾಧ್ಯವಿಲ್ಲ. ಅವರು ಅಜ್ಞನಯತವಾದಿಗಳು ಎಂದು ಪ್ರತಿಪ್ರಾದಿಸಿದ್ದಾರೆ ಎಂದರಲ್ಲದೆ, ಕುವೆಂಪು ಅವರ ಬರಹಗಳನ್ನು 50 ವರ್ಷಗಳ ನಂತರ ಅಧ್ಯಯನ ಮಾಡಿದಾಗ ನನಗೆ ಅನಿಸಿದ್ದು, ಅವರು ಆಧ್ಯಾತ್ಮಿಕ ವಿಚಾರಗಳನ್ನು ಅದ್ಭುತವಾಗಿ ಮಂಡಿಸಿದ್ದಾರೆ. ಅವರ ಬರಹಗಳಲ್ಲಿ ವೈಚಾರಿಕತೆ, ವೈಜ್ಞಾನಿಕತೆಗೆ ಜನರ ನಂಬಿಕೆಯನ್ನು ಹತ್ತಿರಕ್ಕೆ ತಂದು ನಿಲ್ಲಿಸುವ ಭಾವಗಳು ಅಡಕವಾಗಿದೆ ಎಂದು ತಿಳಿಸಿದರು.

ದೇವರು ಎಂಬುದನ್ನು ನಾನು ಒಪ್ಪುತ್ತೇನೆ. ಆ ನೆಪದಲ್ಲಿ ಪೂಜೆ, ಪುರಸ್ಕಾರ, ಮಡಿವಂತಿಕೆ ಇಂತಹ ವಾದಗಳು ಸಾರ್ವಜನಿಕ ಚರ್ಚೆ ವಿಷಯಗಳಾಗುತ್ತವೆ. ಹಾಗಾಗಿ ಹನ್ನೆರಡನೇ ಶತಮಾನದ ವಚನಗಳು ಇಂದಿಗೂ, ಮುಂದೆಯೂ ಪ್ರಸ್ತುತವಾಗುತ್ತದೆ. ಪ್ರಸ್ತುತ ಜನ್ಮವೇ ಮನುಷ್ಯನ ಮಾನದಂಡವಾಗಿದ್ದು, ಜಾತಿ, ವರ್ಗ, ಲಿಂಗ ತಾರತಮ್ಯ ನೆಲೆದಲ್ಲಿ ವಿಜೃಂಭಿಸುತ್ತಿದೆ. ಗುಣ, ಸ್ವಭಾವ, ವ್ಯಕ್ತಿತ್ವ ಆಧಾರಿತವಾಗಿದ್ದ ವರ್ಣ ವ್ಯವಸ್ಥೆ ಜನ್ಮ ಆಧಾರಿತ ತಕ್ಷಣವೇ ಧರ್ಮ ದಾರಿ ತಪ್ಪಿದೆ ಎನ್ನುವ ಭಾವನೆ ಎಲ್ಲರನ್ನೂ ಮನೆ ಮಾಡಿದೆ ಎಂದು ಬೇಸರ ವ್ಯಕ್ತಪಡಿಸಿದರು.

ದೇವರು ಎಂದರೆ 'ನಡವಳಿ' ಆಗಬೇಕು: ಸಾಹಿತಿ ಲಕ್ಷ್ಮೀಶ ತೋಳ್ಪಾಡಿ ಅವರು ದೇವರು ಎಂದರೆ 'ನಂಬಿಕೆ' ಆಗಬಾರದು. ದೇವರು ಎಂದರೆ 'ನಡವಳಿ' ಆಗಬೇಕು. ಆಗ ಮಾತ್ರ ಈ ಭೂಮಿ ಸ್ವರ್ಗವಾಗಲಿದೆ ಎಂದಿದ್ದಾರೆ. ಮನುಜರಾದ ನಾವು ಶ್ರೇಷ್ಠ-ಕನಿಷ್ಟತೆಯ ತಾರತಮ್ಯ ಬಿಡಬೇಕು. ಇದನ್ನು ಬಿಟ್ಟರೆ ಎಲ್ಲಾ ಮನುಜರಲ್ಲೂ ದೇವತ್ವ ಮನೋಭಾವ ಮೂಡುತ್ತದೆ ಎಂದು ತಿಳಿಸಿದರು.

ವಿವಿಧ ಸಾಧಕರಿಗೆ ಪ್ರಶಸ್ತಿ ಪ್ರದಾನ: 2024ನೇ ಸಾಲಿನ ಬಾಲಶ್ರೀ ಪ್ರಶಸ್ತಿಯನ್ನು ಚಾರ್ವಿ ಸತೀಶ್, ಎನ್.ಆರ್.ಪ್ರಣತಾರ್ತಿಹರನ್, ಎನ್.ಆರ್.ಕೃಷ್ಣ ಅವರಿಗೆ, ಯುವಶ್ರೀ ಪ್ರಶಸ್ತಿಯನ್ನು ಸ್ಪಂದನ ಗಣೇಶ್, ಶ್ರೀಹರಿ ಆಚಾರ್ಯ ಉಳಿಯಾರೂ ಅವರಿಗೆ, ವಿದ್ಯಾವಾರಿಧಿ ಪ್ರಶಸ್ತಿಯನ್ನು ಎಸ್.ಕೆ.ಜ್ಯೋತಿ, ಕೆ.ಪಿ.ಭಾರತಿ, ಯೋಗೀಶ್ ಚುಂಚನಹಳ್ಳಿ, ಪ್ರೊ.ಪರಮೇಶ್ ಕೆ.ಉತ್ತನಹಳ್ಳಿ ಅವರಿಗೆ ಹಾಗೂ ಸಾಧನಶ್ರೀ ಪ್ರಶಸ್ತಿಯನ್ನು ವಿಶ್ವೇಶ್ವರ ಆರಾಧ್ಯ ಅವರಿಗೆ ಗೌರವಿಸಲಾಯಿತು.

ಕವನ ಸಂಕಲನ ಬಿಡುಗಡೆ: ಕವಿ ಎಂ.ಬಿ. ಸಂತೋಷ್ ಅವರ 'ಭಾವಭೃಂಗದ ಮಧುರಗಾನ' ಹನಿಗವನಗಳ ಸಂಕಲನ, ಲೇಖಕಿ ಸಿ.ವಾಣಿ ರಾಘವೇಂದ್ರ ಅವರ ಓ ಸಖಿ ನೀನೆಷ್ಟು ಸುಖಿ..?! ಕವನ ಸಂಕಲನ ಬಿಡುಗಡೆಗೊಳಿಸಲಾಯಿತು. ನಂತರ ವಿದುಷಿ ಎನ್.ವಿ.ಪನ್ನಗ ಅವರು ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು ಹಾಗೂ ಚಿತ್ರಕಲಾ ಸ್ಪರ್ಧೆಯಲ್ಲಿ ಬಾಗಿಯಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಈ ವೇಳೆಯಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಪ್ರತಿಷ್ಠಾನದ ಅಧ್ಯಕ್ಷ ಎಂ.ಬಿ.ಸಂತೋಷ್, ಉಪಾಧ್ಯಕ್ಷರಾದ ಎ.ಹೇಮಗಂಗಾ, ಡಾ.ಸೌಗಂಧಿಕಾ ವಿ.ಜೋಯಿಸ್, ಪ್ರಧಾನ ಕಾರ್ಯದರ್ಶಿ ಬಿ.ಶೋಭಾ, ಎನ್.ಆರ್.ರೂಪಶ್ರೀ, ಪದಾಧಿಕಾರಿಗಳಾದ ಎನ್.ಸಿ.ಮಮತ, ರೇಖಾ ಸಂತೋಷ್, ಕೆ.ಪ್ರೇಮಾಕುಮಾರ್, ನೀತು ಎಸ್.ರಾಜ್ ಸೇರಿದಂತೆ ಇನ್ನಿತರರಿದ್ದರು.

ರೈತ ಮಹಿಳೆಯರಿಗೆ ವಿಶೇಷ ಬಹುಮಾನ

ಮೈಸೂರು, ನ. 24- ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ರೈತರು, ರೈತ ಮಹಿಳೆಯರನ್ನು ಪ್ರೋತ್ಸಾಹಿಸಲು ಯಳಂದೂರು ತಾಲೂಕಿನ ದುಗ್ಗಹಟ್ಟಿ ಗ್ರಾಮದ ಶ್ರೀಮತಿ ಸುಂದರಮ್ಮ ದುಗ್ಗಹಟ್ಟಿ ವೀರಭದ್ರಪ್ಪ ಪ್ರತಿಷ್ಠಾನವು ರೈತ ಬಾಂಧವರಿಗೆ ವಿಶೇಷ ನಗದು ಬಹುಮಾನ ಘೋಷಿಸಿದೆ. ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಬಾಳೆ, ಕೊಳ್ಳೇಗಾಲ ತಾಲೂಕಿನಲ್ಲಿ ಕಬ್ಬು, ಹನೂರು ತಾಲೂಕಿನಲ್ಲಿ ಮುಸುಕಿನ ಜೋಳ, ಚಾಮರಾಜನಗರ ತಾಲೂಕಿನಲ್ಲಿ ಟೊಮ್ಯಾಟೋ ಮತ್ತು ಗುಂಡ್ಲುಪೇಟೆ ತಾಲೂಕಿನಲ್ಲಿ ಪೋಲ್ ಬೀನ್ಸ್ ಬೆಳೆಗಳಲ್ಲಿ ಗರಿಷ್ಠ ಇಳುವರಿ ಪಡೆದ ಇಬ್ಬರು (ಪ್ರಥಮ ಹಾಗೂ ದ್ವಿತೀಯ) ರೈತ, ರೈತ ಮಹಿಳೆಯರನ್ನು ಆಯ್ಕೆ ಮಾಡಿ ಬಹುಮಾನ ನೀಡಲಾಗುವುದು. ಬಹುಮಾನವನ್ನು ನ.26ರಿಂದ 31, 2025ರವರೆಗೆ ನಡೆಯುವ ಸುತ್ತೂರು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದಲ್ಲಿ ನೀಡಲಾಗುವುದು. ಆಸಕ್ತಿಯುಳ್ಳ ರೈತ ಬಾಂಧವರು ಡಿಸೆಂಬರ್ 15ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಮೊ. 99861 91256 ಸಂಪರ್ಕಿಸುವುದು.

ಇಂದು ಉಪನ್ಯಾಸ ಕಾರ್ಯಕ್ರಮ

ಮೈಸೂರು, ನ.24- ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ನ.25ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರ ಕಚೇರಿಯಲ್ಲಿ 'ಕರ್ನಾಟಕದ ಇತಿಹಾಸದಲ್ಲಿ ಪ್ರಾದೇಶಿಕ ಇತಿಹಾಸದ ಮಹತ್ವ' ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಇತಿಹಾಸಕಾರರು ಹಾಗೂ ನ್ಯಾಷನಲ್ ಫೆಲೋಶಿಪ್ ಕಮಿಟಿಯ ಸದಸ್ಯ ಡಾ. ಲಕ್ಷ್ಮೀಶ್ ಸೋಂದಾ ಉಪನ್ಯಾಸ ನೀಡಲಿದ್ದು, ಆಸಕ್ತ ವಿದ್ಯಾರ್ಥಿಗಳು, ಇತಿಹಾಸಕಾರರು, ಸಂಶೋಧಕರು, ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ. ಮಾಹಿತಿಗಾಗಿ ಕಚೇರಿ ದೂ. ಸಂಖ್ಯೆ 0821-2424671 ಅನ್ನು ಸಂಪರ್ಕಿಸಬಹುದು.

ಮಕ್ಕಳಿಗೆ ನೃತ್ಯ ಸ್ಪರ್ಧೆ, ಪ್ರತಿಭಾ ಪುರಸ್ಕಾರ

ಮೈಸೂರು,ನ.23-ಮೈಸೂರಿನ ಎನ್‌ವಿಎಸ್ ಕ್ರಿಯೇಷನ್ಸ್ ನ್ಯಾಚುರಲ್ ವ್ಯಾಲ್ಯೂಬಲ್ ಸಪೋರ್ಟ್ ಸಂಸ್ಥೆಯ 9ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ಮಕ್ಕಳಿಗೆ ನೃತ್ಯ ಸ್ಪರ್ಧೆ, ಪ್ರತಿಭಾ ಪುರಸ್ಕಾರ, ಆದರ್ಶ ದಂಪತಿ, ಡ್ರಾಯಿಂಗ್ ಸ್ಪರ್ಧೆಗಳನ್ನು ಡಿ.1ರಂದು ಬೆಳಗ್ಗೆ 9ರಿಂದ ರಾತ್ರಿ 10ರವರೆಗೆ ಜಗನ್ಮೋಹನ ಅರಮನೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತರು ನ.27ರೊಳಗೆ ತಮ್ಮ ಹೆಸರು ನೋಂದಾಯಿಸಿ ಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ. 9036533037 ಸಂಪರ್ಕಿಸಬಹುದು.



ಸಂವಿಧಾನ ತಿದ್ದುಪಡಿ ಮೂಲಕ ಪ್ರಾದೇಶಿಕ ಭಾಷೆಗಳಲ್ಲಿಯೇ ಪ್ರಾಥಮಿಕ ಶಿಕ್ಷಣ ನೀಡುವಂತಾಗಬೇಕು

ಕೇಂದ್ರ ಸರ್ಕಾರಕ್ಕೆ ಹಿರಿಯ ವಿದ್ವಾಂಸ ಡಾ.ಕೆ.ಅನಂತರಾಮು ಆಗ್ರಹ

ಮೈಸೂರು,ನ.24(ಪಿಎಂ)– ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ಆಯಾಯ ಪ್ರಾದೇಶಿಕ ಭಾಷೆಗಳಲ್ಲಿಯೇ ಪ್ರಾಥಮಿಕ ಶಿಕ್ಷಣ ನೀಡುವಂತಾಗಲು ಕೇಂದ್ರ ಸರ್ಕಾರ ಕ್ರಮ ವಹಿಸಬೇಕು ಎಂದು ಹಿರಿಯ ವಿದ್ವಾಂಸ ಡಾ.ಕೆ.ಅನಂತರಾಮು ಆಗ್ರಹಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮೈಸೂರು ಸಾಹಿತ್ಯ ದಾಸೋಹ ಸಂಘಟನೆಯ 9ನೇ ವಾರ್ಷಿಕೋತ್ಸವ ಮತ್ತು ಕನ್ನಡ ರಾಜ್ಯೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಈ ಹಿಂದೆ ರಾಜ್ಯ ಸರ್ಕಾರ ಸದರಿ ವಿಷಯ ಕುರಿತಂತೆ ಆದೇಶ ಹೊರಡಿಸಿತ್ತು. ಆದರೆ ಖಾಸಗಿ ಶಾಲೆಗಳ ಆಡಳಿತ ಮಂಡಳಿಯವರು ಸುಪ್ರೀಂಕೋರ್ಟ್ ಮೊರೆ ಹೋದ ಕಾರಣ ಅದು ಸಾಧ್ಯವಾಗಲಿಲ್ಲ. ಹಾಗಾಗಿ ಕೇಂದ್ರ ಸರ್ಕಾರವೇ ಸಂವಿಧಾನಕ್ಕೆ ತಿದ್ದುಪಡಿ ತಂದರೆ ಎಲ್ಲರೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಆಯಾಯಾ ಪ್ರಾದೇಶಿಕ ಭಾಷೆಗಳಲ್ಲಿ ನೀಡಬೇಕಾಗುತ್ತದೆ ಎಂದು ಪ್ರತಿಪಾದಿಸಿದರು.

ಪ್ರಸ್ತುತ ಇಂಗ್ಲಿಷ್ ಭರಾಟೆ ಜೋರಾಗಿದ್ದು, ಇದರ ಪರಿಣಾಮ ಕನ್ನಡದ ಸ್ಥಿತಿಗತಿ ಗಾಳಿಯಲ್ಲಿ ತೂರಿ ಹೋಗುವ ತರಗೆಲೆಯಂತಾಗಿದೆ. ಮಹಾಭಾರತ ಕಾಲದಿಂದಲೂ ಕನ್ನಡ ಇದೆ. ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಕನ್ನಡದ ಎರಡು ಕಣ್ಣುಗಳಂತಿವೆ. ಭಾಷೆ ಮತ್ತು ಸಂಸ್ಕೃತಿಗೆ ನೇರ ಸಂಬಂಧ ಇದೆ. ಭಾಷೆ ಅಳಿದರೆ ಸಂಸ್ಕೃತಿಯೂ ಅಳಿಯುತ್ತದೆ ಎಂದರು.

'ದಾಸೋಹ' ವಿಶಿಷ್ಟ ಶಬ್ದ: ಕರ್ಮಯೋಗಪೂರ್ಣ ಸಾಹಿತ್ಯ ರಚನೆಗೆ ಹೊಂದುವಂತಹ ಶಬ್ದ ಕನ್ನಡದ 'ದಾಸೋಹ' ಎಂದು ಡಾ.ಕೆ.ಅನಂತ ರಾಮು ಹೇಳಿದರು. ಅಂತಹ ಶಬ್ದವನ್ನು ಸಂಘಟನೆ ಶೀರ್ಷಿಕೆಯಲ್ಲಿ ಬಳಸಿಕೊಂಡಿರುವುದು ಸೂಕ್ತವಾಗಿದೆ. ದಾಸೋಹ ಎನ್ನುವುದು ವಿಶಿಷ್ಟ ಶಬ್ದ. ದಾಸೋಹಕ್ಕೆ ಕನ್ನಡ ಶಾಸನಗಳಲ್ಲಿ 'ಪುಣ್ಯ ಸಂಪಾದನೆಗೆ ಜಂಗಮರಿಗೆ ನೀಡುವ ಭೋಜನ' ಎಂಬ ಅರ್ಥದಲ್ಲಿ ಉಲ್ಲೇಖಿಸಲಾಗಿದೆ. ಕಾಲಾಂತರದಲ್ಲಿ ಈ ಶಬ್ದ ಅಷ್ಟಕ್ಕೆ ಸೀಮಿತಗೊಳ್ಳದೇ ವಿಸ್ತಾರಗೊಂಡಿದೆ ಎಂದು ತಿಳಿಸಿದರು.

ಮುಂದೆ ದಾಸೋಹ ಶಬ್ದ ದಾನ ಮಾಡುವುದು ಎಂಬ ಅರ್ಥಕ್ಕೂ ಬಂದಿದೆ. ಅನ್ನ ದಾಸೋಹ, ವಸ್ತ್ರ ದಾಸೋಹ, ಜ್ಞಾನ ದಾಸೋಹ ಹೀಗೆಲ್ಲಾ ದಾಸೋಹಕ್ಕೆ ದಾನ ಎನ್ನುವ ಹಿನ್ನೆಲೆಯಲ್ಲಿ ಅರ್ಥ ವಿಸ್ತಾರಗೊಂಡಿದೆ. ಇದು ಸಂಸ್ಕೃತದ್ದೇ ಶಬ್ದ. ಯಾವುದಾದರೂ ಕಾರ್ಯವನ್ನು ತಪಸ್ಸು ಎನ್ನುವಂತೆ ಸ್ವೀಕರಿಸಿದರೆ ಅದಕ್ಕೂ ದಾಸೋಹ ಎಂದು ಕರೆಯಲಾಗುತ್ತದೆ. ಈ ಒಂದು ಪದ ದಾಸೋಹಕ್ಕೆ ಪರಿಪೂರ್ಣವಾಗಿ ಒಪ್ಪುವಂತಹ ಅರ್ಥ ಇದು ಎಂದು ವಿವರಿಸಿದರು.

ಬಳಿಕ ಹಿರಿಯ ವಿಜ್ಞಾನ ಲೇಖಕರೂ ಆದ ಕರ್ನಾಟಕ ಮುಕ್ತ ಸಾಹಿತ್ಯ ಅಕಾಡೆಮಿ ಟ್ರಸ್ಟ್ ಸಂಸ್ಥಾಪಕ ಎಸ್.ರಾಮಪ್ರಸಾದ್ ಬಳಗದ ಸದಸ್ಯರಿಗೆ ರಸಪ್ರಶ್ನೆ ಕಾರ್ಯಕ್ರಮ ನಡೆಸಿಕೊಟ್ಟರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಮೈಸೂರು ಸಾಹಿತ್ಯ ದಾಸೋಹ ಸಂಸ್ಥಾಪಕ ಎಂ.ಆರ್.ಆನಂದ್, ಸಂಚಾಲಕಿ ಪದ್ಮಾ ಆನಂದ್, ಮುಖಂಡ ರಂಗನಾಥ್ ಮೈಸೂರು ಮತ್ತಿತರರು ಹಾಜರಿದ್ದರು.



ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮೈಸೂರು ಸಾಹಿತ್ಯ ದಾಸೋಹದ 9ನೇ ವಾರ್ಷಿಕೋತ್ಸವ ಹಾಗೂ ಕನ್ನಡ ರಾಜ್ಯೋತ್ಸವವನ್ನು ಹಿರಿಯ ವಿದ್ವಾಂಸ ಡಾ.ಕೆ.ಅನಂತರಾಮು ಉದ್ಘಾಟಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಪ್ರಭುತ್ವ (ಕ) + ಮರ್ಯಾದೆ ಪ್ರಶ್ನೆ (ಕ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಜೀಬ್ರಾ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕಂಗುವಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ವಿಶ್ವಂ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ತ)	4 ಪ್ರದರ್ಶನಗಳು
ಸಂಗಂ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಲಿಡೋ	
ಸಂಗೊಳ್ಳಿ ರಾಯಣ್ಣ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅಮರನ್ (ತ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಂಗುವಾ (3ಡಿ) (ತ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ಅಮರನ್ (ತ): ಸಂ.4ಕ್ಕೆ, ಆನಂದ್ ಶ್ರೀಬಾಲ (ಮ): ರಾ.10.20ಕ್ಕೆ.
ಸ್ಕ್ರೀನ್ 2	ಅಮರನ್ (ತ): ಬೆ.9.40ಕ್ಕೆ, ಮ.1ಕ್ಕೆ, ಬಘೀರ (ಕ): ಸಂ.4.15ಕ್ಕೆ, ಗ್ಲಾಡಿಯೇಟರ್ 2 (ಇಂ): ರಾ.7.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.35ಕ್ಕೆ, ರಾ.7.15ಕ್ಕೆ, ಬಘೀರ (ಕ): ಮ.1.10ಕ್ಕೆ, ಲಕ್ಕಿ ಭಾಸ್ಕರ್ (ಮ): ಸಂ.4.15ಕ್ಕೆ, ಮಟ್ಕಾ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಭೈರತಿ ರಣಗಲ್ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಬಘೀರ (ಕ): ಬೆ.10ಕ್ಕೆ, ಮ.3.55ಕ್ಕೆ, ಕಂಗುವಾ (ಕ): ಮ.1ಕ್ಕೆ, ಕಂಗುವಾ (ತ): ಸಂ.6.55ಕ್ಕೆ, ಅಮರನ್ (ತ): ರಾ.9.50ಕ್ಕೆ.
ಸ್ಕ್ರೀನ್ 2	ಅಮರನ್ (ಕ): ಬೆ.10.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಭೈರತಿ ರಣಗಲ್ (ಕ): ಬೆ.10ಕ್ಕೆ, ಸಂ.6.30ಕ್ಕೆ, ಅಮರನ್ (ಕ): ಮ.12.40ಕ್ಕೆ, ಕಂಗುವಾ (3ಡಿ)(ತ): ಮ.3.55ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಕಂಗುವಾ (ತ): ಬೆ.10.30ಕ್ಕೆ, ಸಂ.5.20ಕ್ಕೆ, ಅಮರನ್ (ತ): ಮ.2.10ಕ್ಕೆ, ಅಮರನ್ (ಕ): ರಾ.8.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು ಪಡುವಾರಹಳ್ಳಿಯಲ್ಲಿ ತೆಪ್ಪೋತ್ಸವ

ಮೈಸೂರು, ನ.24(ಎಸ್‌ಬಿಡಿ)– ಮೈಸೂರಿನ ಪಡುವಾರಹಳ್ಳಿ(ವಿನಾಯಕನಗರ) ಶ್ರೀ ವರಸಿದ್ಧಿ ಮಹದೇಶ್ವರ ಸ್ವಾಮಿಯ ಕಾರ್ತಿಕ ಮಾಸದ ಪೂಜಾ ಮಹೋತ್ಸವದ ಅಂಗವಾಗಿ ಕೊನೆ ಸೋಮವಾರ(ನ.25) ಸಂಜೆ 6ಕ್ಕೆ ಪಾಂಡವಪುರದ ಗ್ರಾಮರಂಗ ಸಾಂಸ್ಕೃತಿಕ ವೇದಿಕೆಯಿಂದ ಭಕ್ತಿಗೀತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಂಜೆ 7ಕ್ಕೆ ತೆಪ್ಪೋತ್ಸವ ನೆರವೇರಿದ ಬಳಿಕ ಪ್ರಸಾದ ವಿನಿಯೋಗ ಮಾಡಲಾಗುವುದು. ಮಂಗಳವಾರ(ನ.26) ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಇದರೊಂದಿಗೆ ನ.1ರಂದು ಆರಂಭಗೊಂಡ ಕಾರ್ತಿಕ ಮಾಸದ ಪೂಜಾ ಮಹೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತೆರೆ ಬೀಳಲಿದೆ ಎಂದು ಪಡುವಾರಹಳ್ಳಿ(ವಿನಾಯಕನಗರ) ಗ್ರಾಮಾಭ್ಯುದಯ ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದು, ನಾಳೆ ಮೈಸೂರಲ್ಲಿ ಎಸ್‌ಡಿಪಿಐ ರಾಜ್ಯ ಪ್ರತಿನಿಧಿಗಳ ಸಭೆ

ಮೈಸೂರು, ನ.24(ಎಂಟಿವೈ)– ಮೈಸೂರಿನ ರಿಂಗ್‌ರಸ್ತೆಯಲ್ಲಿರುವ ಮಣಿಪಾಲ ಆಸ್ಪತ್ರೆ ಸಮೀಪದ ವೈಟ್ ಪ್ಯಾಲೇಸ್‌ನಲ್ಲಿ ನಾಳೆಯಿಂದ (ನ.25) ಎರಡು ದಿನ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ)ದ ರಾಜ್ಯ ಘಟಕದ 6ನೇ ರಾಜ್ಯ ಪ್ರತಿನಿಧಿ ಸಭೆ ನಡೆಯಲಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ತಿಳಿಸಿದ್ದಾರೆ.

ಮೈಸೂರಿನ ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ.25 ಮತ್ತು 26ರಂದು ಎರಡು ದಿನಗಳ ಕಾಲ ಸಭೆ ನಡೆಯಲಿದ್ದು, ನಾಳೆ ಬೆಳಿಗ್ಗೆ 10.30ಕ್ಕೆ ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷ ಬಿ.ಎಂ.ಕಾಂಬ್ಳೆ ಸಭೆಯನ್ನು ಉದ್ಘಾಟಿಸಲಿದ್ದಾರೆ. ಸಭೆಯಲ್ಲಿ 31 ಸಂಘಟನಾತ್ಮಕ ಜಿಲ್ಲಾ ಸಮಿತಿಗಳ 500 ಪದಾಧಿಕಾರಿಗಳು ಹಾಗೂ ಮಹಿಳಾ ಘಟಕದ 50 ಮಂದಿ ಭಾಗವಹಿಸಲಿದ್ದಾರೆ ಎಂದರು.

ಸಭೆಯಲ್ಲಿ ರಾಜ್ಯ ಉಸ್ತುವಾರಿ ಅಬ್ದುಲ್ ಮಜೀದ್ ಫೈಜಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಇಲಿಯಾಸ್ ಮಹಮ್ಮದ್, ರಾಷ್ಟ್ರೀಯ ಕಾರ್ಯದರ್ಶಿ ಆಲ್ಫೋನ್ಸೊ ಫ್ರಾಂಕೋ, ರಾಜ್ಯ ಘಟಕದ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ಪ್ರಧಾನ ಕಾರ್ಯದರ್ಶಿ ಭಾಸ್ಕರ್ ಪ್ರಸಾದ್ ವಿಷಯ ಮಂಡಿಸಲಿದ್ದಾರೆ. ಪ್ರಸ್ತುತ ರಾಜಕೀಯ ಬೆಳವಣಿಗೆಗಳ ಬಗ್ಗೆಯೂ ಸಮಾಲೋಚನೆ ನಡೆಯಲಿದೆ. ಮುಂಬರುವ ಚುನಾವಣೆಗಳಿಗೆ ಪಕ್ಷವನ್ನು ಸಜ್ಜುಗೊಳಿಸುವ ಕುರಿತು ನಿರ್ಣಯ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ವಕ್ಫ್ ಮಂಡಳಿಯ ನಿರ್ಲಕ್ಷ್ಯ ಹಾಗೂ ತಪ್ಪಿನಿಂದಾಗಿ ಅದರ ಆಸ್ತಿ ಒತ್ತುವರಿ ಆಗುತ್ತಿದೆ. ನೋಟಿಸ್ ನೀಡಿ ಒತ್ತುವರಿದಾರರ ಬಳಿ ಇರುವ ದಾಖಲೆಗಳನ್ನು ಪಡೆದು ಪರಿಶೀಲಿಸುವುದರಲ್ಲಿ ತಪ್ಪೇನಿಲ್ಲ. ನೋಟಿಸ್ ಬಂದರೆ ರೈತರು ಅಥವಾ ನೋಟಿಸ್ ಪಡೆದವರು ಸಮರ್ಪಕ ದಾಖಲೆ ನೀಡಿ ಸ್ಪಷ್ಟಪಡಿಸಿಕೊಳ್ಳಬೇಕು. ಆದರೆ, ಬಿಜೆಪಿಯವರು ಅದನ್ನೇ ದೊಡ್ಡ ವಿವಾದಂತೆ ಬಿಂಬಿಸಿ, ಬೂಟಾಟಿಕೆ ರಾಜಕೀಯ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಮಠ, ಮಂದಿರ, ಚರ್ಚ್ ಅಥವಾ ಮಸೀದಿ ಸೇರಿದಂತೆ ಯಾವುದೇ ಧಾರ್ಮಿಕ ಕೇಂದ್ರಗಳಿಗೆ ಅಥವಾ ಆ ವಿಷಯಕ್ಕೆ ಜಮೀನನ್ನು ದಾನ ಕೊಟ್ಟಿದ್ದರೆ ಅದು ಉಳುತ್ತಿರುವವರಿಗೆ ಯಾವುದೇ ಕಾರಣಕ್ಕೂ ಸಿಗುವುದಿಲ್ಲ. ಉಳುವವನೇ ಭೂಮಿ ಒಡೆಯ, ಭೂಸುಧಾರಣಾ ಕಾಯ್ದೆಯೂ ಇದಕ್ಕೆ ಅನ್ವಯ ಆಗುವುದಿಲ್ಲ. ಈಗಾಗಲೇ ಕೆಲ ಪ್ರಕರಣದಲ್ಲಿ ನ್ಯಾಯಾಲಯ ನೀಡಿದ ತೀರ್ಪಿನಲ್ಲಿ ಹೇಳಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ರಫತ್ ಖಾನ್, ರಾಜ್ಯ ಸಮಿತಿ ಸದಸ್ಯ ಅಮ್ಜದ್ ಖಾನ್, ಜಿಲ್ಲಾ ಘಟಕದ ಕಾರ್ಯದರ್ಶಿ ಫರ್ದೀನ್, ಜಿಲ್ಲಾ ಘಟಕದ ಉಪಾಧ್ಯಕ್ಷ ಎಸ್. ಸ್ವಾಮಿ ಇದ್ದರು.

ಜಗದೀಶ್ ನಿಧನ



ಮೈಸೂರು, ನ.24– ಮೈಸೂರಿನ ಆಲನಹಳ್ಳಿ ನಿವಾಸಿ ಜಗದೀಶ್(72) ಅವರು ಭಾನುವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು. ಇವರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸಿದ್ಧಾರ್ಥನಗರದ ವೀರಶೈವ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ 12ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರಮಪಟ್ಟು ಅನ್ವೇಷಣೆ ಮಾಡಿದ್ದನ್ನು ಸಂರಕ್ಷಿಸಿಕೊಳ್ಳಲು ಬೌದ್ಧಿಕ ಆಸ್ತಿ ಹಕ್ಕು ಕಾಯ್ದೆ ಸಹಕಾರಿ


ಕೇರಳ ಹೈಕೋರ್ಟ್ ನ್ಯಾಯಮೂರ್ತಿ ವಿ.ಎಂ.ಶ್ಯಾಮ್ ಕುಮಾರ್

ಮೈಸೂರು, ನ.24(ಎಂಟಿವೈ– ಶ್ರಮಪಟ್ಟು, ಬುದ್ಧಿಶಕ್ತಿಯನ್ನು ಬಳಸಿ ಅನ್ವೇಷಣೆ ಮಾಡಿರುವುದನ್ನು ಸಂರಕ್ಷಿಸಿಕೊಳ್ಳುವುದಕ್ಕಾಗಿಯೇ ಬೌದ್ಧಿಕ ಆಸ್ತಿ ಹಕ್ಕು ಕಾಯಿದೆ ರೂಪುಗೊಂಡಿದೆ ಎಂದು ಕೇರಳ ಹೈಕೋರ್ಟ್ ನ್ಯಾಯಮೂರ್ತಿ ವಿ.ಎಂ.ಶ್ಯಾಮ್ ಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ನಡೆದ 'ಬೌದ್ಧಿಕ ಆಸ್ತಿ ಹಕ್ಕುಗಳಲ್ಲಿ ಸಮಕಾಲಿನ ಸಮಸ್ಯೆಗಳು ಮತ್ತು ಸವಾಲುಗಳು' ಕುರಿತು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ವ್ಯಕ್ತಿಯೂ ಅನ್ವೇಷಣಾ ಕಾರ್ಯದಲ್ಲಿ ತೊಡಗಿದಾಗ ಹಾಗೂ ಹೊಸ ಉದ್ಯಮವನ್ನು ಆರಂಭಿಸಿದಾಗ ತನ್ನ ಬುದ್ಧಿವಂತಿಕೆಯಿಂದ ರೂಪಿಸಲಾಗಿರುವ ಬೌದ್ಧಿಕ ಆಸ್ತಿಯನ್ನು ರಕ್ಷಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಆತನು ಸಂರಕ್ಷಣಾ ಕಾಯಿದೆಗಳ ಬಗ್ಗೆ ಅರಿವನ್ನು ಹೊಂದಿರಬೇಕು ಮತ್ತು ತಿಳಿವಳಿಕೆ ಮೂಡಿಸಿಕೊಳ್ಳಬೇಕು. ಇದೇ ಅಲ್ಲದೇ ಸರ್ಕಾರಗಳು ಕೂಡಾ ವ್ಯಕ್ತಿಗಳ ಬೌದ್ಧಿಕ ಆಸ್ತಿ ರಕ್ಷಣೆಯ ಹೊಣೆಗಾರಿಕೆಯನ್ನು ಹೊಂದಿವೆ ಎಂದು ಅವರು ತಿಳಿಸಿದರು.


ಬೌದ್ಧಿಕ ಆಸ್ತಿಯ ಹಕ್ಕುಗಳ ರಕ್ಷಣೆಯ ಉಲ್ಲೇಖವೂ ಶತಮಾನಗಳ ಹಿಂದೆಯೇ ಸಿಗುತ್ತದೆ. ಆದರೆ ವಿಶ್ವದಲ್ಲಿ ಕೈಗಾರಿಕಾ ಕ್ರಾಂತಿಯಾದ ನಂತರ ನವೋದ್ಯಮಗಳು ಹೆಚ್ಚು–ಹೆಚ್ಚಾಗಿ ಸ್ಥಾಪನೆಯಾದವು. ಆಗ ನೂತನ ಅನ್ವೇಷಣೆಗಳ ರಕ್ಷಣೆಗಾಗಿ ಬೌದ್ಧಿಕ ಆಸ್ತಿಯ ಹಕ್ಕುಗಳ ಕಾಯ್ದೆಗೆ ಹೆಚ್ಚಿನ ಮಹತ್ವ ದೊರೆಯಿತು ಎಂದರು.

ಬೌದ್ಧಿಕ ಆಸ್ತಿ ಎನ್ನುವುದು ಅತ್ಯಂತ ಅಮೂಲ್ಯವಾಗಿದ್ದು, ವಜ್ರಕ್ಕಿಂತಲೂ ಹೆಚ್ಚಿನ ಮೌಲ್ಯ ಹೊಂದಿದೆ. ಪ್ರತಿಭೆ, ಕೌಶಲ, ಸಂಶೋಧನೆ, ತಂತ್ರಜ್ಞಾನ, ಸಾಹಿತ್ಯ, ಸಂಗೀತ ಕ್ಷೇತ್ರದಲ್ಲೂ ಬೌದ್ಧಿಕ ಆಸ್ತಿ ಹಕ್ಕನ್ನು ಪಡೆಯಬಹುದಾಗಿದೆ. ಪೇಟೆಂಟ್, ಕಾಪಿರೈಟ್, ಟ್ರೇಡ್‌ಮಾರ್ಕ್, ಫ್ಯಾಕ್ಟರಿ ಡಿಸೈನ್ ಸೇರಿದಂತೆ ವಿವಿಧ ಹೆಸರಿನಲ್ಲಿ ಬೌದ್ಧಿಕ ಆಸ್ತಿ ಹಕ್ಕು ಜಾರಿಯಲ್ಲಿದೆ. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಲ್ಲಿರುವ ನವೋದ್ಯಮಿಗಳು ಕೂಡ ಬೌದ್ಧಿಕ ಆಸ್ತಿ ಹಕ್ಕು ಪಡೆಯಲು ಅವಕಾಶ ಇದೆ. ಇದನ್ನು ಅವರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ.ಎನ್.ವಾಣಿಶ್ರೀ ಇದ್ದರು.



ಮೈಸೂರಿನ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ನಡೆದ 'ಬೌದ್ಧಿಕ ಆಸ್ತಿ ಹಕ್ಕುಗಳಲ್ಲಿ ಸಮಕಾಲಿನ ಸಮಸ್ಯೆಗಳು ಮತ್ತು ಸವಾಲುಗಳು' ಕುರಿತು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಕೇರಳ ಹೈಕೋರ್ಟ್ ನ್ಯಾಯಮೂರ್ತಿ ವಿ.ಎಂ.ಶ್ಯಾಮ್ ಕುಮಾರ್ ಉದ್ಘಾಟಿಸಿ ಮಾತನಾಡಿದರು

ಹುಟ್ಟುಹಬ್ಬದ ಅಭಿನಂದನೆ



ಭಾನುವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ಜಿಲ್ಲಾ ಚಿನ್ನ–ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ಅಧ್ಯಕ್ಷ ವಿ.ಸುರೇಶ್ (ಗೋಲ್ಡ್) ಅವರನ್ನು ಎಂಎಲ್‌ಸಿ ಮಂಜೇಗೌಡ, ಫಾಲ್ಕನ್ ಬೋರೇಗೌಡ, ಜೆಡಿಎಸ್ ಮುಖಂಡರಾದ ಕೆ.ಆರ್.ಮಿಲ್ ಶಿವಣ್ಣ, 'ಮಾವುತ' ಚಿತ್ರದ ನಾಯಕ ಲಕ್ಷ್ಮೀಪತಿ ಬಾಲಾಜಿ, ಲಯನ್ ಪ್ರಮೀಳಾ, ಲಯನ್ ಆಶಾ, ಲಯನ್ ಮಂಜುನಾಥ್, ಲಯನ್ ಶಶಿ, ಲಯನ್ ಶಂಕರ್ ಅಭಿನಂದಿಸಿದರು.

ಸುಂದರಕಾಂಡ ರಾಮಾಯಣ ಸಪ್ತಾಹ

ಮೈಸೂರು, ನ. 24– ಮೈಸೂರಿನ ದಿವ್ಯ ಜೀವನ ಸಂಘ ಮಹಿಳಾ ಶಾಖೆ ವತಿಯಿಂದ ನ.29 ರವರೆಗೆ ಪ್ರತಿದಿನ ಸಂಜೆ 6.30 ರಿಂದ 7.30 ರವರೆಗೆ ಸುಂದರ ಕಾಂಡ ರಾಮಾಯಣ ಸಪ್ತಾಹ ಪ್ರವಚನವನ್ನು, ಜೆಎಲ್‌ಬಿ ರಸ್ತೆಯಲ್ಲಿರುವ ಶಿವಾನಂದ ಜ್ಞಾನಾಲಯದಲ್ಲಿ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9449044301 ಸಂಪರ್ಕಿಸಬಹುದು.

ಸಹಜ ಹೆರಿಗೆಗಾಗಿ ಶುಶ್ರೂಷಕಿಯರಿಗೆ ಸೂಕ್ತ ತರಬೇತಿ

- ಮೊದಲ ತಂಡ ಯಶಸ್ವಿ ತರಬೇತಿ ನಂತರ ಸೇವೆಗೆ ಸಜ್ಜು
- ಚೆಲುವಾಂಬ ಆಸ್ಪತ್ರೆಯಲ್ಲಿ ಮಹತ್ವದ ಯೋಜನೆ ಅನುಷ್ಠಾನ

ಮೈಸೂರು,ನ.24(ಎಂಟಿವೈ)– ಸಿಸೇರಿಯನ್ ಹೆರಿಗೆ ಸಂಖ್ಯೆಯನ್ನು ನಿಯಂತ್ರಿಸಿ, ಸಾಮಾನ್ಯ ಹೆರಿಗೆ ಸಂಖ್ಯೆ ಹೆಚ್ಚಳ ಮಾಡುವ ನಿಟ್ಟಿನಲ್ಲಿ ಶುಶ್ರೂಷಕಿಯರಿಗೆ ತರಬೇತಿ ನೀಡುವ 'ಮಿಡ್‌ವೈಫರಿ ಇನಿಷಿಯೇಟಿವ್' ಯೋಜನೆಯನ್ನು ಜಿಲ್ಲೆಯಲ್ಲಿ ಯಶಸ್ವಿಯಾಗಿ ಜಾರಿಗೊಳಿಸಲಾಗಿದೆ ಎಂದು ಚೆಲುವಾಂಬ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ರಾಜೇಂದ್ರಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಜೆಕೆ ಮೈದಾನದಲ್ಲಿರುವ ಸರ್ಕಾರಿ ಮೆಡಿಕಲ್ ಕಾಲೇಜು ಅಮೃತೋತ್ಸವ ಭವನದಲ್ಲಿ ಶನಿವಾರ ಚೆಲುವಾಂಬ ಆಸ್ಪತ್ರೆ ಮತ್ತು ಆಸ್ಟ್ರಿಕಾ ಫೌಂಡೇಷನ್ ಸಹಯೋಗದಲ್ಲಿ ಆಯೋಜಿಸಿದ್ದ 'ಮಿಡ್‌ವೈಫರಿ ಇನಿಷಿಯೇಟಿವ್' ಯೋಜನೆಯ ತರಬೇತಿ ಪಡೆದ ಮೊದಲ ತಂಡಕ್ಕೆ ಶುಭ ಹಾರೈಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ವರ್ಷಗಳಲ್ಲಿ ಸಿಸೇರಿಯನ್ ಹೆರಿಗೆ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅದಕ್ಕೆ ಕಡಿವಾಣ ಹಾಕಿ, ಸಾಮಾನ್ಯ ಹೆರಿಗೆ ಸಂಖ್ಯೆ ಹೆಚ್ಚಿಸಲು ಆರೋಗ್ಯ ಸಿಬ್ಬಂದಿ ಮತ್ತು ಶುಶ್ರೂಷಕಿಯರಿಗೆ ಸೂಕ್ತ ತರಬೇತಿ ನೀಡುವ 'ಮಿಡ್‌ವೈಫರಿ ಇನಿಷಿಯೇಟಿವ್' ಯೋಜನೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ಸಿಬ್ಬಂದಿಗೆ ತರಬೇತಿ ನೀಡಿ ಸಿಸೇರಿಯನ್ ಹೆರಿಗೆ ಪ್ರಮಾಣ ತಗ್ಗಿಸಿ, ಗಂಡಾಂತರ ಹೆರಿಗೆಯನ್ನೂ ಸಹಜ ಹೆರಿಗೆಯಾಗಿ ಪರಿವರ್ತಿಸುವ ಶುಶ್ರೂಷಕಿಯರನ್ನು ಸಜ್ಜುಗೊಳಿಸಲಾಗುತ್ತಿದೆ. ಯಶಸ್ವಿಯಾಗಿ ತರಬೇತಿ ಪಡೆದ ಶುಶ್ರೂಷಕಿಯರ ಮೊದಲ ತಂಡ ಜಿಲ್ಲೆಯಲ್ಲಿ ಕಾರ್ಯಾಚರಣೆ ಆರಂಭಿಸಲಿದೆ ಎಂದರು.

ಸಿಸೇರಿಯನ್ ಹೆರಿಗೆ ತಗ್ಗಿಸಿ ಸಹಜ ಹೆರಿಗೆ ಪ್ರಮಾಣ ಹೆಚ್ಚಿಸಲು ಇದೇ ಮೊದಲ ಬಾರಿಗೆ ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ಎಸ್‌ಎಂಟಿಐ (ಸ್ಟೇಟ್ ಮಿಡ್‌ವೈಫರಿ ಟ್ರೈನಿಂಗ್ ಇನ್‌ಸ್ಟಿಟ್ಯೂಟ್) ತರಬೇತಿ ಕೇಂದ್ರ ತೆರೆದು ಮಿಡ್‌ವೈಫರಿ ಇನಿಷಿಯೇಟಿವ್ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಈಗಾಗಲೇ 20 ಮಂದಿ ಶುಶ್ರೂಷಕಿಯರಿಗೆ ಒಂದು ವರ್ಷದ ಸಹಜ ಹೆರಿಗೆ ತರಬೇತಿ ನೀಡಲಾಗಿದೆ. ಇವರು ತಮ್ಮ ತಾಲೂಕು ವ್ಯಾಪ್ತಿಯಲ್ಲಿ ಸಹಜ ಹೆರಿಗೆ ಮಾಡಿಸಲಿದ್ದಾರೆ. ರಾಷ್ಟ್ರೀಯ ಆರೋಗ್ಯ ಸೂಚ್ಯಂಕದ ಪ್ರಕಾರ ಜಿಲ್ಲಾ ಮಟ್ಟದ ಹೆರಿಗೆ ಆಸ್ಪತ್ರೆಗಳಲ್ಲಿ ವಾರ್ಷಿಕ ಶೇ. 20ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಸಿಸೇರಿಯನ್‌ಗಳಾಗಬೇಕು. ಆದರೆ, ಜಿಲ್ಲೆ, ತಾಲೂಕು ಕೇಂದ್ರಗಳಲ್ಲಿ ಸಹಜ ಹೆರಿಗೆಗಳನ್ನು ಅಲ್ಲಿಯೇ ಮಾಡಿ, ಗಂಡಾಂತರವಿರುವ ಪ್ರಕರಣಗಳನ್ನು ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ರವಾನಿಸಲಾಗುತ್ತಿದೆ. ಹೀಗಾಗಿ ಈ ಆಸ್ಪತ್ರೆಯಲ್ಲಿ ಶೇ.35 ರಿಂದ 40 ರಷ್ಟು ಹೆರಿಗೆಗಳನ್ನು ಶಸ್ತ್ರಚಿಕಿತ್ಸೆ ಮೂಲಕ ನೆರವೇರಿಸಲಾಗುತ್ತಿದೆ ಆದ್ದರಿಂದ ಸಹಜ ಹೆರಿಗೆ ಆದ್ಯತೆ ನೀಡುವ ದಾದಿಯರನ್ನು ಸೃಷ್ಟಿಸಲು ತರಬೇತಿ ಕೇಂದ್ರ ಆರಂಭಿಸಲಾಗಿದೆ ಎಂದು ವಿವರಿಸಿದರು.

ಆರೋಗ್ಯ ಇಲಾಖೆಯ ತಾಯಿ ಆರೋಗ್ಯ ವಿಭಾಗದ ಉಪ ನಿರ್ದೇಶಕ ಡಾ. ರಾಜಕುಮಾರ್ ಮಾತನಾಡಿ, 1 ಲಕ್ಷ ಜನನಕ್ಕೆ 69 ಮಂದಿ ಗರ್ಭಿಣಿಯರು ಮರಣ ಹೊಂದುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ 100ಕ್ಕೆ 40 ಸಿಸೇರಿಯನ್‌ಗಳಾದರೆ, ಖಾಸಗಿ ಆಸ್ಪತ್ರೆಯಲ್ಲಿ 60 ರಿಂದ 70 ಸಿಸೇರಿಯನ್ ಹೆರಿಗೆಯಾಗುತ್ತಿದೆ. ಇದರಲ್ಲಿ ಶೇ.15 ರಿಂದ 20 ರಷ್ಟು ಗಂಡಾಂತರ ಹೆರಿಗೆಯಾಗಿರುತ್ತದೆ. ಸೂಕ್ತ ಮುಂಜಾಗ್ರತೆ ಇದ್ದರೆ ಇದನ್ನು ಸಹಜ ಹೆರಿಗೆಯಾಗಿ ಪರಿವರ್ತಿಸಬಹುದು ಎಂದರು.


ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆ ಜಿಲ್ಲಾ ತರಬೇತಿ ಕೇಂದ್ರದ ಪ್ರಾಂಶುಪಾಲ ರವಿ ಎಲ್., ಚೆಲುವಾಂಬ ಆಸ್ಪತ್ರೆ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥ ಡಾ. ಲಕ್ಷ್ಮಿಕಾಂತ್, ಆರ್‌ಎಂಎಒ ಶಿವರಾಮಕೃಷ್ಣ, ಬೆಂಗಳೂರು ಮೆಡಿಕಲ್ ಕಾಲೇಜಿನ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥೆ ಡಾ. ಸವಿತಾ ಹಾಗೂ ಇತರರು ಉಪಸ್ಥಿತರಿದ್ದರು.



ಮೈಸೂರಿನ ಜೆಕೆ ಮೈದಾನದಲ್ಲಿರುವ ಸರ್ಕಾರಿ ಮೆಡಿಕಲ್ ಕಾಲೇಜು ಅಮೃತೋತ್ಸವ ಭವನದಲ್ಲಿ ಶನಿವಾರ ಸಿಸೇರಿಯನ್ ಹೆರಿಗೆಯನ್ನು ಸಹಜ ಹೆರಿಗೆಯಾಗಿ ಪರಿವರ್ತಿಸಲು ಜಾರಿಗೊಳಿಸಿರುವ 'ಮಿಡ್‌ವೈಫರಿ ಇನಿಷಿಯೇಟಿವ್' ಯೋಜನೆಯ ತರಬೇತಿ ಪಡೆದ ಮೊದಲ ಬ್ಯಾಚ್‌ನ ಶುಶ್ರೂಷಕಿಯರೊಂದಿಗೆ ವೈದ್ಯಾಧಿಕಾರಿಗಳನ್ನು ಕಾಣಬಹುದು.

ದಶಬಲ ಟ್ರಸ್ಟ್‌ನಲ್ಲಿ ರಾಜಕಾರಣಿ, ಸಾಹಿತ್ಯೇತರರಿಗೆ ಅವಕಾಶ ಬೇಡ

ಹಿರಿಯ ಸಾಹಿತಿ ಸಿಪಿಕೆ ಸಲಹೆ



ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ಆಯೋಜಿಸಿದ್ದ 'ಮಾಲಗತ್ತಿ ದಶಬಲ ಟ್ರಸ್ಟ್ ಮತ್ತು ರೈಟರ್ಸ್ ಅಕಾಡೆಮಿ' ಉದ್ಘಾಟಿಸಿ, ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಅವರ ನಾಲ್ಕು ಕೃತಿಗಳನ್ನು ಹಿರಿಯ ಸಾಹಿತಿ ಪ್ರೊ.ಸಿ.ಪಿ.ಕೃಷ್ಣಕುಮಾರ್ ಬಿಡುಗಡೆ ಮಾಡಿದರು.

ಮೈಸೂರು,ನ.24(ಎಂಟಿವೈ)– ದಲಿತ, ಬಂಡಾಯ ಸಾಹಿತ್ಯ ಪ್ರತಿನಿಧಿ ಮತ್ತು ನಿಧಿಯಾಗಿರುವ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಅವರು ಅಸ್ತಿತ್ವಕ್ಕೆ ತಂದಿರುವ ದಶಬಲ ಟ್ರಸ್ಟ್ ಮತ್ತು ರೈಟರ್ಸ್ ಅಕಾಡೆಮಿಯಲ್ಲಿ ರಾಜಕಾರಣಿಗಳು ಹಾಗೂ ಸಾಹಿತ್ಯೇತರರಿಗೆ ಅವಕಾಶ ನೀಡಬಾರದು ಎಂದು ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ಆಯೋಜಿಸಿದ್ದ 'ಮಾಲಗತ್ತಿ ದಶಬಲ ಟ್ರಸ್ಟ್ ಮತ್ತು ರೈಟರ್ಸ್ ಅಕಾಡೆಮಿ' ಉದ್ಘಾಟಿಸಿ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಅವರ ನಾಲ್ಕು ಕೃತಿಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಮಾಲಗತ್ತಿ ದಶಬಲ ಟ್ರಸ್ಟ್ ಮತ್ತು ರೈಟರ್ಸ್ ಅಕಾಡೆಮಿ ಸಂಸ್ಥೆಗಳು ನಂಬಿಕೆ, ವಿವೇಕ, ಸೈರಣೆ ಆಶಯದೊಂದಿಗೆ ಮಾರ್ಗದರ್ಶಕ ಸಾಹಿತ್ಯ ಸಂಘಟನೆಯಾಗಿ ರೂಪುಗೊಳ್ಳಬೇಕು ಎಂಬುದು ನಮ್ಮ ಆಶಯ. ಈ ಟ್ರಸ್ಟ್‌ನಲ್ಲಿ ರಾಜಕೀಯಕ್ಕೆ ಅವಕಾಶ ಮಾಡಿಕೊಡಬಾರದು. ಟ್ರಸ್ಟ್ ಎಂದರೆ ನಂಬಿಕೆ. ನಂಬಿಕೆ ಇಲ್ಲದಿದ್ದರೆ ಬದುಕಲು ಸಾಧ್ಯವಿಲ್ಲ. ಹೀಗಾಗಿ ಆದರ್ಶ ಇಟ್ಟುಕೊಂಡು ದಶಬಲ ಟ್ರಸ್ಟ್ ಮತ್ತು ರೈಟರ್ಸ್ ಅಕಾಡೆಮಿಯು ಸದಾ ನಿಷ್ಕಳಂಕ ಕಲಾ ಕ್ಷೇತ್ರವಾಗಿ ಉಳಿಯಬೇಕು ಎಂದು ಹೇಳಿದರು.

ದಲಿತ, ಬಂಡಾಯ ಸಾಹಿತ್ಯದ ಪ್ರತಿನಿಧಿ ಮತ್ತು ನಿಧಿಯಾಗಿರುವ ಮಾಲಗತ್ತಿ ಅವರು ದಲಿತ ಸಾಹಿತ್ಯ ಸರೋವರದಲ್ಲಿ ಅರಳಿದ ಅರವಿಂದ ಎನಿಸಿದ್ದಾರೆ. ಅರವಿಂದ ಮಾಲಗತ್ತಿ ಅವರ ಬರವಣಿಗೆ ಏಕಕಾಲದಲ್ಲಿ ಸೂಕ್ಷ್ಮ ಮತ್ತು ತೀಕ್ಷ್ಣದಿಂದ ಕೂಡಿದೆ. ಅವರ ಸಾಹಿತ್ಯದಲ್ಲಿ ವೈವಿಧ್ಯತೆಯಲ್ಲಿ ಏಕತೆ ಕಾಣಬಹುದು. ಗದ್ಯ–ಪದ್ಯ ಎರಡು ಸೃಜನಶೀಲರು ಮತ್ತು ಪರಂಪರೆಯ ಉಪಾಸಕರು. ಅನೇಕ ಪ್ರಶ್ನೆಗಳಿಗೆ ಸಮ್ಮೇಳನಾತ್ಮಕವಾಗಿ ಮಾಲಗತ್ತಿ ಉತ್ತರ ಕೊಟ್ಟಿದ್ದಾರೆ. ವಾಸ್ತವವಾಗಿ ಪ್ರೊ.ಅರವಿಂದ ಮಾಲಗತ್ತಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿಯೇ ಟ್ರಸ್ಟ್ ಮತ್ತು ಅಕಾಡೆಮಿಯ ಆಶಯದಂತೆ ಕೆಲಸ ಮಾಡಿದ್ದಾರೆ. ಕನ್ನಡ ಸಾಹಿತ್ಯ ಚಾರಿತ್ರೆ ಹೊಸ ದಿಕ್ಕಿಗೆ ಹೊರಳಿರುವ ಒಂದು ವಿರಳ ವಿಶಿಷ್ಟ ಸಂದರ್ಭ ಇದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಲಗತ್ತಿ ದಶಬಲ ಟ್ರಸ್ಟ್‌ನ ಗೌರವಾಧ್ಯಕ್ಷ ಬಸವರಾಜು ಮಾಲಗತ್ತಿ, ಉಪಾಧ್ಯಕ್ಷ ಪ್ರೊ.ಡಿ.ಕೆ.ರಾಜೇಂದ್ರ, ಖಜಾಂಚಿ ಡಾ.ಮೈಲಹಳ್ಳಿ ರೇವಣ್ಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ.ಎನ್.ಕೆ.ಲೋಲಾಕ್ಷಿ, ಡಾ.ಎಸ್.ಚಂದ್ರಕಿರಣ್, ಡಾ.ಸಂತೋಷ್ ಚೊಕ್ಕಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಡಾ.ಧರಣಿದೇವಿ ಮಾಲಗತ್ತಿ ಇನ್ನಿತರರು ಹಾಜರಿದ್ದರು.

ಮೈಸೂರು ಮಿತ್ರ

ಹೆಚ್.ಡಿ.ದೇವೇಗೌಡರು ಕಟ್ಟಿದ ಪಕ್ಷವನ್ನು ಕುಮಾರಸ್ವಾಮಿ ಡೆಮಾಲಿಷ್ ಮಾಡುತ್ತಿದ್ದಾರೆ

ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ಕಿಡಿ



ಮೈಸೂರು, ನ.24–ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಕಷ್ಟಪಟ್ಟು ಕಟ್ಟಿದ ಪಕ್ಷವನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರ ಸ್ವಾಮಿ ಡೆಮಾಲಿಷ್ ಮಾಡುತ್ತಿದ್ದಾರೆ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಕಿಡಿಕಾರಿದ್ದಾರೆ.

ಇಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಬಿಜೆಪಿ ಜೊತೆ ಹೋಗಿದ್ದಾರಲ್ಲಾ, ಹೋಗದಿದ್ದರೆ ಏನಾಗುತ್ತಿತ್ತು ಎಂದು ಪ್ರಶ್ನಿಸಿದರಲ್ಲದೆ, ದೇವರು ಮತ್ತು ಹೆಚ್.ಡಿ.ದೇವೇಗೌಡರ ಶ್ರಮದಿಂದಾಗಿ ಪಕ್ಷ ಉಳಿಯುತ್ತಿದೆ ಎಂದು ಹೇಳಿದರು.

ಹಿಂದಿನಿಂದಲೂ ನಾನು ಕುಮಾರಸ್ವಾಮಿ ಅವರನ್ನು ಪ್ರೀತಿಸುತ್ತಿದ್ದೇನೆ. ಅವರು ಮುಖ್ಯಮಂತ್ರಿ ಆಗಬೇಕೆಂದು ಶ್ರಮ ಪಟ್ಟಿದ್ದೇನೆ. ಆದರೆ ಅವರು ನನ್ನನ್ನು ಪ್ರೀತಿಸುತ್ತಿಲ್ಲ. ರಾಜಕೀಯವಾಗಿ ನನ್ನನ್ನು ಮುಗಿಸಬೇಕೆಂದು ನೋಡುತ್ತಿದ್ದಾರೆ. ನನ್ನನ್ನು ಪಕ್ಷದಿಂದ ತೆಗೆಯಲು ಹಲವಾರು ಬಾರಿ ಪ್ರಯತ್ನ ಪಟ್ಟಿದ್ದಾರೆ. ಆದರೆ ಹೆಚ್.ಡಿ.ದೇವೇಗೌಡರಿಂದಾಗಿ ನಾನು ಪಕ್ಷದಲ್ಲಿ ಉಳಿದುಕೊಂಡಿದ್ದೇನೆ. ಇವರಿಂದಾಗಿ ಬಹಳಷ್ಟು ನೋವು ಅನುಭವಿಸುತ್ತಿದ್ದರೂ, ಪಕ್ಷ ಕಟ್ಟಬೇಕು ಎಂದು ಭಾವಿಸಿದ್ದೇನೆ ಎಂದರು.

ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರ ವಿರುದ್ಧ ನಾನು ಸ್ಪರ್ಧಿಸಿದ್ದಾಗ ಮುಖ್ಯಮಂತ್ರಿಗೆ ಸಮಾನಾಂತರವಾದ ಸ್ಥಾನ ಕೊಡುತ್ತೇನೆ ಎಂದು ಹೇಳಿದ್ದರು. ಆದರೆ ನಾನೂ ಗೆದ್ದು ಇವರು ಮುಖ್ಯಮಂತ್ರಿಯಾದ ನಂತರ ಒಂದು ತಿಂಗಳು ನನಗೆ ಮಂತ್ರಿಗಿರಿಯನ್ನೇ ಕೊಟ್ಟಿಲ್ಲ. ಇವನಿಗೆ (ಜಿಟಿಡಿ) ಓದು–ಬರಹ ಬರುವುದಿಲ್ಲ. ಫೇಲ್ ಆಗಿಬಿಡಲಿ ಎಂದು ಉನ್ನತ ಶಿಕ್ಷಣ ಸಚಿವ ಸ್ಥಾನವನ್ನು ಬೇಡ–ಬೇಡ ಎಂದರೂ ಕೊಟ್ಟರು. ಆದರೆ ನಾನಲ್ಲಿ ಪಾಸ್ ಆದೆ ಎಂದರು.

ಸಾ.ರಾ.ಮಹೇಶ್ ಅವರು ಒಂದು ಸಭೆಯಲ್ಲಿ ಇನ್ನು ಮುಂದೆ ಹೆಚ್.ಡಿ.ದೇವೇಗೌಡರೂ ಇಲ್ಲ, ಕುಮಾರಣ್ಣನೂ ಇಲ್ಲ. ನಾನೇ ಬಿ–ಫಾರಂ ಕೊಡುವುದು. ಆದ್ದರಿಂದ ಎಲ್ಲರೂ ನಾನು ಹೇಳಿದಂತೆ ಕೇಳಬೇಕು ಎಂದರು. ಅಂದರೆ ನಾನು ಸಾ.ರಾ.ಮಹೇಶ್ ಬಳಿ ಬಿ–ಫಾರಂ ಪಡೆಯಬೇಕೇ? ಎಂದು ಪ್ರಶ್ನಿಸಿದ ಜಿಟಿಡಿ, ಅದೇ ಸಭೆಯಲ್ಲಿ ನಿಖಿಲ್ ಕುಮಾರಸ್ವಾಮಿ ಮಾತನಾಡಿ, ಸಾ.ರಾ.ಮಹೇಶ್ ದುಡುಕಿ ಮಾತನಾಡಿಬಿಟ್ಟಿದ್ದಾರೆ, ಕ್ಷಮಿಸಿ ಎಂದು ಕೇಳಿಕೊಂಡರು. ಇಷ್ಟೆಲ್ಲಾ ನೋವು ಅನುಭವಿಸುತ್ತಿದ್ದರೂ ಪಕ್ಷದಲ್ಲೇ ಇದ್ದೀನಿ. ಪಕ್ಷ ಕಟ್ಟಬೇಕು ಎಂಬ ಆಸೆ ಇಟ್ಟುಕೊಂಡಿದ್ದೀನಿ ಎಂದರು.

ಸಿದ್ದರಾಮಯ್ಯ ಪಕ್ಷ ಬಿಟ್ಟು ಹೋದಾಗ ಇವರೊಂದಿಗೆ ಯಾರಿದ್ದರು? ಸಾ.ರಾ.ಮಹೇಶ್ ಇದ್ದರೇ? ಇವರೆಲ್ಲಾ ಕುಮಾರಸ್ವಾಮಿ ಮುಖ್ಯಮಂತ್ರಿಯಾದ ನಂತರ ಬಂದು ಸೇರಿದವರು. ನಾನು ಕುಮಾರಸ್ವಾಮಿ ಯನ್ನು ಕರೆದುಕೊಂಡು ಸುತ್ತಾಡಿ, ಅವರು ಮುಖ್ಯಮಂತ್ರಿಯಾಗಲು ಶ್ರಮಿಸಿದವನು ಎಂದರು.

ನಾನು ಬಹುತೇಕ ಕಾಂಗ್ರೆಸ್‌ಗೆ ಹೋಗಿಯಾಗಿತ್ತು. ನನ್ನೊಂದಿಗೆ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಸುರ್ಜೇವಾಲಾ, ವೇಣುಗೋಪಾಲ್, ರಾಹುಲ್ ಗಾಂಧಿಯವರ ಪಿಎ ಎಲ್ಲರೂ ಮಾತನಾಡಿದ್ದರು. 'ಭಾರತ್ ಜೋಡೋ' ಯಾತ್ರೆ ವೇಳೆ ರಾಹುಲ್ ಗಾಂಧಿಯವರೇ ನಮ್ಮ ಮನೆಗೆ ಬರುವುದಿತ್ತು ಆಗ ಬಹುತೇಕ ಕಾಂಗ್ರೆಸ್‌ಗೆ ಹೋಗಿ ಬಿಟ್ಟಿದ್ದೆ. ಆದರೆ ಹೆಚ್.ಡಿ.ದೇವೇಗೌಡರು ನಮ್ಮ ಮನೆಗೆ ಬಂದಾಗ ಅವರಿಗೆ ಗೌರವ ಕೊಟ್ಟು ಪಕ್ಷದಲ್ಲೇ ಉಳಿದುಕೊಂಡೆ ಎಂದು ಹೇಳಿದರು.

ಈ ಬಾರಿ ನಾನು ಮತ್ತು ನನ್ನ ಮಗ ಗೆದ್ದ ನಂತರ ನನ್ನನ್ನು ಕೋರ್ ಕಮಿಟಿ ಅಧ್ಯಕ್ಷರನ್ನಾಗಿ ಮಾಡಿದರು. ರಾಜ್ಯವೆಲ್ಲಾ ಸುತ್ತಾಡಿ ಪಕ್ಷ ಸಂಘಟನೆ ಮಾಡಿದೆ. ವಿಧಾನಸಭೆಯಲ್ಲಿ ಜೆಡಿಎಸ್ ನಾಯಕನನ್ನಾಗಿ ಆಯ್ಕೆ ಮಾಡುವ ಬಗ್ಗೆ ಸಭೆ ನಡೆದಾಗ ಆರ್.ಅಶೋಕ್, ಪ್ರಹ್ಲಾದ್ ಜೋಷಿ, ಕುಮಾರಸ್ವಾಮಿ ಎಲ್ಲರೂ ಇದ್ದರು. ಆಗ ಜೋಷಿಯವರೇ ವಿಪಕ್ಷ ನಾಯಕನಾಗಲು ಜಿ.ಟಿ.ದೇವೇಗೌಡರು ಅರ್ಹರಿದ್ದಾರೆ, ಅವರನ್ನೇ ಮಾಡಿಬಿಡಿ ಎಂದು ಕೂಡ ಹೇಳಿದ್ದರು. ಆದರೆ ನನ್ನನ್ನು ನಾಯಕನನ್ನಾಗಿ ಮಾಡಲಿಲ್ಲ. ಸಾ.ರಾ.ಮಹೇಶ್ ಹೇಳುತ್ತಾರೆ, ನಾನೇ ಹಿಂದುಳಿದ ನಾಯಕನಾದ ಸುರೇಶ್ ಬಾಬು ಅವರನ್ನು ವಿಧಾನಸಭೆ ವಿಪಕ್ಷ ನಾಯಕನನ್ನಾಗಿ ಮಾಡಿದೆ. ರಾಷ್ಟ್ರೀಯ ಅಧ್ಯಕ್ಷರು, ರಾಜ್ಯಾಧ್ಯಕ್ಷರು, ಶಾಸಕರು ಎಲ್ಲರೊಂದಿಗೂ ಮಾತನಾಡಿ ಸುರೇಶ್ ಬಾಬುವನ್ನು ಆಯ್ಕೆ ಮಾಡಿದೆ. ಜಿ.ಟಿ.ದೇವೇಗೌಡರು ನನ್ನ ಬಳಿ ಕೇಳಿಲ್ಲ. ಹೀಗಾಗಿ ಅವರನ್ನು ಆಯ್ಕೆ ಮಾಡಿಲ್ಲ ಎಂದು ಸಾ.ರಾ.ಮಹೇಶ್ ಹೇಳುತ್ತಾರೆ. ನನ್ನ ಪ್ರಕಾರ ಶಾಸಕರು ತಮ್ಮ ನಾಯಕನನ್ನು ಆಯ್ಕೆ ಮಾಡಬೇಕು. ಸೋತಿರುವ ಸಾ.ರಾ.ಮಹೇಶ್ ಹ್ಯಾಗೆ ಆಯ್ಕೆ ಮಾಡುತ್ತಾರೆ ಎಂದು ಪ್ರಶ್ನಿಸಿದ ಜಿಟಿಡಿ, ಇಷ್ಟೆಲ್ಲಾ ನೋವಿದ್ದರೂ ಪಕ್ಷದಲ್ಲಿ ಇದ್ದೇನೆ. ನನಗೆ ನನ್ನ ಕಾರ್ಯಕರ್ತರು ಮತ್ತು ಜನರೇ ನಾಯಕರಾಗಿದ್ದಾರೆ. ಅವರೇನಾದರೂ ಹೀಗೆ ನೋವನ್ನನುಭವಿಸಿಕೊಂಡೇ ಇರು ಎಂದರೆ ಹಾಗೇ ಇರುತ್ತೇನೆ. ಒಂದಂತೂ ನಿಜ, ನಾನು ಅನುಭವಿಸುತ್ತಿರುವ ನೋವು, ಸಂಕಟ ಎಲ್ಲವೂ ನಮ್ಮ ಕಾರ್ಯಕರ್ತರಿಗೆ, ಜನರಿಗೆ ಗೊತ್ತಿದೆ. ಮುಂದೆ ಅವರು ಏನು ಹೇಳುತ್ತಾರೋ ಹಾಗೇ ನಡೆದುಕೊಳ್ಳುತ್ತೇನೆ ಎಂದು ಹೇಳುವ ಮೂಲಕ ಜೆಡಿಎಸ್ ಬಿಡುವ ಬಗ್ಗೆ ಪರೋಕ್ಷ ಸುಳಿವು ನೀಡಿದರು.

ನಾನಂತೂ ಕುಮಾರಸ್ವಾಮಿಯವರನ್ನು ಪ್ರೀತಿಸುತ್ತಿದ್ದೇನೆ. ಅವರೇ ನನ್ನನ್ನು ದೂರ ಮಾಡಿದ್ದಾರೆ. ಸಾ.ರಾ.ಮಹೇಶ್ ತೋಟಕ್ಕೆ ಬಂದರು. ಮದುವೆಯಲ್ಲಿ ಭಾಗವಹಿಸಲು ಮೈಸೂರಿಗೆ ಬಂದರು. ನನಗೆ ಒಂದು ಕರೆಯನ್ನೂ ಮಾಡಿಲ್ಲ. ನಿಖಿಲ್ ಕುಮಾರಸ್ವಾಮಿಯೂ ಅಷ್ಟೇ. ದಂಪತಿ ಸಮೇತ ನನ್ನ ಮಗ ಜಿ.ಡಿ.ಹರೀಶ್ ಗೌಡನ ಮನೆಗೆ ಹೋಗುತ್ತಾರೆ. ನನಗೆ ಒಂದು ಫೋನ್ ಕರೆ ಕೂಡ ಮಾಡುವುದಿಲ್ಲ. ಅವರೇ ನನ್ನ ಸಂಪರ್ಕವನ್ನು ಕಟ್ ಮಾಡಿಕೊಂಡಿದ್ದಾರೆ ಎಂದರು.

ನಾಳೆ ಕೇಂದ್ರದ ವಿರುದ್ಧ ರೈತರ ಪ್ರತಿಭಟನೆ

ಮೈಸೂರು,ನ.24(ಎಂಟಿವೈ)– ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕರಾಳ ಕಾನೂನುಗಳಾದ ಭೂ ಸುಧಾರಣೆ ಮತ್ತು ಎಪಿಎಂಸಿ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ಕಾಯ್ದೆ ಹಿಂಪಡೆಯುವಂತೆ ಆಗ್ರಹಿಸಿ ನಡೆಸುತ್ತಿರುವ ಹೋರಾಟಕ್ಕೆ ನಾಲ್ಕು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ನ.26ರಂದು ಕೇಂದ್ರ ಸರ್ಕಾರದ ವಿರುದ್ಧ ಮೈಸೂರಲ್ಲಿ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಸಂಯುಕ್ತ ಹೋರಾಟ ಕರ್ನಾಟಕ(ರೈತ) ಸಂಘಟನೆ ಸಂಚಾಲಕ ಜಗದೀಶ್ ಸೂರ್ಯ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಹಾಗೂ ರೈತರಿಗೆ ಕರಾಳ ಕಾಯ್ದೆಗಳನ್ನು ಹಿಂಪಡೆಯುವಂತೆ ಆಗ್ರಹಿಸಿ ನ.26ರಂದು ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆಯಿಂದ ಎಚ್ಚರಿಕೆ ರ್‍ಯಾಲಿ ನಡೆಸಲಾಗುತ್ತಿದೆ. ಅಂದು ಬೆಳಗ್ಗೆ 11ಕ್ಕೆ ಪುರಭವನದಿಂದ ಮೆರವಣಿಗೆ ಆರಂಭವಾಗಿ ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ, ಅಶೋಕ ರಸ್ತೆ ಮೂಲಕ ಮಹಾತ್ಮಗಾಂಧಿ ವೃತ್ತ ತಲುಪಲಿದೆ. ಬಳಿಕ ಅಲ್ಲಿ ಪ್ರತಿಭಟನಾ ಸಭೆ ನಡೆಯಲಿದ್ದು, ರೈತರು, ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.


ಕೇಂದ್ರ ಸರ್ಕಾರದ ಕರಾಳ ಕಾಯ್ದೆಗೆ ಪೂರಕವಾಗಿ ರಾಜ್ಯದಲ್ಲಿ ಅಂದಿನ ಬಿಜೆಪಿ ಸರ್ಕಾರ ಭೂ ಸುಧಾರಣೆ ಮತ್ತು ಎಪಿಎಂಸಿ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ಕಾಯ್ದೆ ಜಾರಿ ಮಾಡಿತು. ಇದನ್ನು ವಿರೋಧಿಸಿ ನಿರಂತರ ಹೋರಾಟ ರಾಜ್ಯದಲ್ಲೂ ನಡೆಯಿತು. 2023ರಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಈ ಕಾಯ್ದೆಗಳನ್ನು ವಾಪಸು ಪಡೆಯುವುದಾಗಿ ನೀಡಿದ್ದ ಭರವಸೆ ಈಡೇರಿಸಿಲ್ಲ. ಹೀಗಾಗಿ ಈ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿಲುವನ್ನು ಪ್ರತಿಭಟನೆ ವೇಳೆ ವಿರೋಧಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಪಿ.ಮರಂಕಯ್ಯ, ಉಗ್ರ ನರಸಿಂಹೇಗೌಡ, ಕಲ್ಲಳ್ಳಿ ಕುಮಾರ್, ದೇವದಾಸ್, ಬಾಲಾಜಿ ರಾವ್, ಚೌಡಳ್ಳಿ ಜವರಯ್ಯ, ಹೆಚ್.ಎಂ.ಬಸವರಾಜು, ಮುದ್ದುಕೃಷ್ಣ ಇದ್ದರು.





ರೈಲ್ವೆ ಬ್ಯಾರಿಕೇಡ್‌ಗೆ ಸಿಲುಕಿದ್ದ ಆನೆ ರಕ್ಷಣೆ


ವಾಲ್ನೂರು ಅರಣ್ಯದಂಚಿನ ರೈಲ್ವೆ ಬ್ಯಾರಿಕೇಡ್‌ಗೆ ಸಿಲುಕಿದ ಕಾಡಾನೆ.

ಮಡಿಕೇರಿ, ನ.24–ಕಾಡಾನೆಗಳ ಹಾವಳಿ ತಡೆಗೆ ವಾಲ್ನೂರು ಅರಣ್ಯದಂಚಿನಲ್ಲಿ ಅಳವಡಿಸಿದ್ದ ರೈಲ್ವೆ ಬ್ಯಾರಿಕೇಡ್‌ಗೆ ಸಿಲುಕಿಕೊಂಡಿದ್ದ ಆನೆಯನ್ನು ಅರಣ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿ ರಕ್ಷಿಸಿದ್ದಾರೆ.

ಕಾಡಿನಿಂದ ಆಹಾರ ಅರಸಿ ಬಂದ ಕಾಡಾನೆಯೊಂದು ವಾಲ್ನೂರು ಗ್ರಾಮದ ಅರಣ್ಯದಂಚಿನ ರೈಲ್ವೆ ಕಂಬಿಯನ್ನು ಮಲಗಿ ತೆವಳಿ ದಾಟಲು ಯತ್ನಿಸಿದೆ. ಆದರೆ, ಈ ಸಂದರ್ಭ ಆನೆ ರೈಲ್ವೆ ಕಂಬಿಗೆ ಸಿಲುಕಿಕೊಂಡಿದೆ. ಇದರಿಂದ ಮುಂದಕ್ಕೆ ತೆರಳಲಾಗದ ಕಾಡಾನೆ ಅಲ್ಲೇ ಮಲಗಿದೆ. ವಿಷಯ ತಿಳಿದ ಮೀನುಕೊಲ್ಲಿ ವಲಯ ಉಪ ಅರಣ್ಯಾಧಿಕಾರಿ ಸುಬ್ರಾಹ ನೇತೃತ್ವದಲ್ಲಿ ಸಿಬ್ಬಂದಿ ಹರಸಾಹಸಪಟ್ಟು ರೈಲ್ವೆ ಕಂಬಿ ನಟ್‌ಬೋಲ್ಟ್ ಕಳಚಿ ಕಾಡಾನೆಯನ್ನು ರಕ್ಷಿಸಿದ್ದಾರೆ. ಬಳಿಕ ಆನೆ ಸಮೀಪದ ಅರಣ್ಯಕ್ಕೆ ನುಸುಳಿ ಮರೆಯಾಯಿತು.

ಕಾಡಂಚಿನಲ್ಲಿ ರೈಲ್ವೆ ಕಂಬಿಗಳನ್ನು ಅಲವಡಿಸಲಾಗಿದೆ. ಆದರೆ, ಆನೆಗಳು ರೈಲ್ವೆ ಕಂಬಿಗಳನ್ನು ಮುರಿದು ಲಗ್ಗೆಇಟ್ಟು ಕೃಷಿ ಫಸಲನ್ನು ತಿಂದು, ತುಳಿದು ನಾಶಗೊಳಿಸುತ್ತಿವೆ.

ಗಾಂಜಾ ಮಾರುತ್ತಿದ್ದ ಮೂವರ ಬಂಧನ

ಕುಶಾಲನಗರ, ನ.24–ಪಟ್ಟಣದ ಗುಂಡೂರಾವ್ ಬಡಾವಣೆಯ ಜಾತ್ರೆ ಬಾಣೆಯಲ್ಲಿ ಸಾರ್ವಜನಿಕ ಶೌಚಾಲಯ ಬಳಿ ಗಾಂಜಾ ಮಾರುತ್ತಿದ್ದ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ಪಿರಿಯಾಪಟ್ಟಣ ತಾಲೂಕಿನ ಸೈಯ್ಯದ್ ಅನ್ವರ್ (39), ಕುಶಾಲನಗರ ನಾಗಮ್ಮಮಂಟಿಯ ನಯನ (19) ಹಾಗೂ ಕುಶಾಲನಗರ ಗೋಪಾಲ್ ಸರ್ಕಲ್‌ನ ಮಂಜುನಾಥ (21) ಬಂಧಿತರು.

ಈ ಮೂವರು ಜಾತ್ರೆಬಾಣೆಯ ಸಾರ್ವಜನಿಕ ಶೌಚಾಲಯ ಬಳಿ ಗಾಂಜಾ ಮಾರುತ್ತಿದ್ದಾಗ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾರೆ. ನಂತರ ಪೊಲೀಸರು 99 ಗ್ರಾಂ ಗಾಂಜಾ ಮತ್ತು ಬೈಕ್ ಅನ್ನು ವಶಪಡಿಸಿಕೊಂಡು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಡಿವೈಎಸ್ಪಿ ಆರ್.ವಿ.ಗಂಗಾಧರಪ್ಪ, ಪೊಲೀಸ್ ನಿರೀಕ್ಷಕ ಬಿ.ಜಿ.ಪ್ರಕಾಶ್ ಮಾರ್ಗದರ್ಶನದಲ್ಲಿ ಕುಶಾಲನಗರ ಟೌನ್ ಠಾಣೆ ಪಿಎಸ್ಐ ಹೆಚ್.ಟಿ.ಗೀತಾ ಹಾಗೂ ಎಎಸ್ಐ ಮಂಜುನಾಥ್, ಸುನೀಲ್, ಬಾಬು, ಜಾವೀದ್, ಶಶಿಕಲಾ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ.

ಇಂದು ಕಡೇ ಕಾರ್ತಿಕ ಸೋಮವಾರ ಪೂಜೆ

ವೀರಾಜಪೇಟೆ, ನ.24–ಪಟ್ಟಣದ ಜೈನರ ಬೀದಿಯಲ್ಲಿ ಇತಿಹಾಸ ಪ್ರಸಿದ್ಧ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ನ.25ರಂದು ರಾತ್ರಿ 8 ಗಂಟೆಗೆ ಕಡೇ ಕಾರ್ತಿಕ ಸೋಮವಾರ ಪೂಜೆ ಏರ್ಪಡಿಸಲಾಗಿದೆ ಎಂದು ದೇವಸ್ಥಾನ ಆಡಳಿತ ಮಂಡಳಿ ತಿಳಿಸಿದೆ.

ನಾಳೆ ಕೊಡವ ನ್ಯಾಷನಲ್ ಡೇ ಆಚರಣೆ

ಮಡಿಕೇರಿ, ನ.24– ಕೊಡವ ಲ್ಯಾಂಡ್ ಹಕ್ಕೊತ್ತಾಯ ಪ್ರತಿಪಾದನೆ ನಿರಂತರತೆಗಾಗಿ ನ.26ರಂದು ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ 34ನೇ ವರ್ಷದ 'ಕೊಡವ ನ್ಯಾಷನಲ್ ಡೇ' ಮತ್ತು ಸಂವಿಧಾನ ದಿನ ಆಚರಿಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.


ಎನ್.ಯು.ನಾಚಪ್ಪ

ನಗರದ ಹೊರವಲಯ ಕ್ಯಾಪಿಟಲ್ ವಿಲೇಜ್ ನಲ್ಲಿ ಅಂದು ಬೆಳಗ್ಗೆ 10 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಎಲ್ಲಾ ಕೊಡವರು ಪಾಲ್ಗೊಳ್ಳುವ ಮೂಲಕ ಒಗ್ಗಟ್ಟು ಪ್ರದರ್ಶಿಸಬೇಕು. ಭಾರತದ ಸಾರ್ವಭೌಮತ್ವ ಮತ್ತು ಪ್ರಭುತ್ವದಡಿ ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಸಾಧಿಸಲು ಮತ್ತು ಕೊಡವರಿಗೆ ಅಂತಾರಾಷ್ಟ್ರೀಯ ಕಾನೂನಿನಡಿ ಪರಿಗಣನೆ, ಕೊಡವರ ಇತರೆ ಹತ್ತು ಶಾಸನ ಬದ್ಧ ಗುರಿಗಳಿಗಾಗಿ ಹಕ್ಕೊತ್ತಾಯಿಸಲಾಗುವುದು ಎಂದರು.




ಕಾಫಿ ತೋಟಗಳ ಕಡಿದಾದ ರಸ್ತೆಯಲ್ಲಿ ಕಾರುಗಳ ಸದ್ದು

ಗುರಿ ಮುಟ್ಟಲು ಹರಸಾಹಸಪಟ್ಟ ಸ್ಪರ್ಧಿಗಳು

ಸಿದ್ದಾಪುರ, ನ.24– ವಿರಾಜಪೇಟೆ ತಾಲೂಕಿನ ಹೊಸಳ್ಳಿ ಹಾಗೂ ಮಾರ್ಗೊಳ್ಳಿ ಮಾರ್ಗವಾಗಿ ಕಾಫಿ ತೋಟಗಳ ಕಡಿದಾದ ರಸ್ತೆಯಲ್ಲಿ ಭಾನುವಾರ ನಡೆದ ರೋಬಸ್ಟಾ–2024 ಕಾರು ರ್‍ಯಾಲಿ ರೋಮಾಂಚನ ಕಾರಿಯಾಗಿತ್ತು.

ಬ್ಲೂ ಬ್ಯಾಂಡ್, ಎಫ್‌ಎಂಎಸ್‌ಸಿಐ, ಇಂಡಿಯನ್ ನ್ಯಾಷನಲ್ ರ್‍ಯಾಲಿ ಚಾಂಪಿಯನ್‌ಶಿಪ್ ನೇತೃತ್ವದಲ್ಲಿ ರೋಬಸ್ಟಾ ಸ್ಪೋರ್ಟ್ಸ್ ಅಂಡ್ ಅಡ್ವೆಂಚರ್ ಅಕಾಡೆಮಿ ಸಹಕಾರದೊಂದಿಗೆ ನಡೆದ ರೋಬಸ್ಟಾ–2024 ಕಾರು ರ್‍ಯಾಲಿ ಅಂತಿಮ 5ನೇ ಸುತ್ತಿನ ಗುರಿ ಮುಟ್ಟಲು 61 ಕಾರುಗಳ ಪೈಕಿ 57 ಕಾರು ಸ್ಪರ್ಧಿಗಳು ಕಾಫಿ ತೋಟಗಳ ಕಡಿದಾದ ರಸ್ತೆಯಲ್ಲಿ ಕಠಿಣ ಪರಿಶ್ರಮದೊಂದಿಗೆ ಜೀವದ ಹಂಗು ತೊರೆದು ರೋಮಾಂಚನಕಾರಿಯಾಗಿ ಕಾರುಗಳನ್ನು ಚಾಲನೆ ಮಾಡುವ ಮೂಲಕ ಧೂಳೆಬ್ಬಿಸಿ ಮುನ್ನುಗ್ಗಿ, ಅಂತಿಮ ಗುರಿ ಮುಟ್ಟಲು ಹರಸಾಹಸಪಟ್ಟರು.

ಕೊಡಗು ಜಿಲ್ಲೆಯ ನಾನಾ ಭಾಗಗಳಿಂದ ಆಗಮಿಸಿದ ಕಾರ್ಮಿಕರು, ಸ್ಥಳೀಯ ನಿವಾಸಿಗಳು, ಕಾರುಗಳು ತೆರಳುವ ಮಾರ್ಗದುದ್ದಕ್ಕೂ ನಿಂತು ರ್‍ಯಾಲಿಪಟ್ಟುಗಳನ್ನು ಉರಿದುಂಬಿಸಿ ಸಿಳ್ಳೆ, ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದರು. ವೇಗದ ಚಾಲನೆ ಸಂದರ್ಭ ಜಿಪ್ಸಿ ಸೇರಿದಂತೆ ಕೆಲ



ಕಾರುಗಳು ಸ್ಪರ್ಧಿಗಳ ನಿಯಂತ್ರಣ ತಪ್ಪಿ, ಉರುಳಿ ಬಿದ್ದವು. ಕಾರ್ಮಿಕರು ತಕ್ಷಣ ಕಾರುಗಳನ್ನು ಮೇಲೆತ್ತಿ ಮತ್ತೆ ಸಂಚರಿಸಲು ಅನುವು ಮಾಡಿಕೊಟ್ಟರು.

ಎಲ್ಲಾ ಕಾರುಗಳಲ್ಲೂ ಜಿಪಿಎಸ್ ಹಾಗೂ ಸುರಕ್ಷತಾ ಕ್ರಮಗಳನ್ನು ಅಳವಡಿಸಲಾಗಿತ್ತು. ಆದ್ದರಿಂದ ಯಾವುದೇ ಸ್ಪರ್ಧಿಗಳಿಗೆ ಗಾಯಗಳಾಗಿಲ್ಲ. ಬೇರೆಡೆ ನಡೆಯುತ್ತಿದ್ದ ಕಾರು ರ್‍ಯಾಲಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ನೋಡುತ್ತಿದ್ದ ಕಾರ್ಮಿಕರು ಹಾಗೂ ಸ್ಥಳೀಯರಿಗೆ ಕಣ್ಣೆದುರೇ ಎದೆ ಜಲ್ಲೆನಿಸುವ ರೀತಿ ಕಾರುಗಳು ಒಂದಕ್ಕೊಂದು ವೇಗ ಹೆಚ್ಚಿಸಿಕೊಂಡು, ಭಾರೀ ಶಬ್ಧದೊಂದಿಗೆ ಸಂಚರಿಸುತ್ತಿರುವುದನ್ನು ಕಂಡು ಖುಷಿಪಟ್ಟು ಮೊಬೈಲ್‌ಗಳಲ್ಲಿ ಚಿತ್ರೀಕರಿಸಿಕೊಂಡರು.

ಅಮ್ಮತ್ತಿ, ಪಾಲಿಬೆಟ್ಟ, ಸಿದ್ದಾಪುರ ಸುತ್ತಮುತ್ತ ಕಾಡುಪ್ರಾಣಿಗಳು ಹೆಚ್ಚಾಗಿದ್ದು, ಇದರಿಂದ ಅರಣ್ಯ ಇಲಾಖೆ ಸಿಬ್ಬಂದಿ ಅಲ್ಲಲ್ಲಿ ಕಾಡುಪ್ರಾಣಿಗಳ ಮೇಲೆ ನಿಗಾ ವಹಿಸಿದ್ದರು. ಟಾಟಾ ಕಾಫಿ ಸಂಸ್ಥೆಯು ತೋಟಗಳಲ್ಲಿ ಮಾರ್ಗ ಉದ್ದಕ್ಕೂ ರ್‍ಯಾಲಿಗೆ ಯಾವುದೇ ತೊಡಕುಂಟಾಗದಂತೆ ಸಿಬ್ಬಂದಿ ನಿಯೋಜಿಸಿ, ನಿಯಂತ್ರಣ ಹಾಗೂ ಸೂಚನಾ ಫಲಕಗಳನ್ನು ಅಳವಡಿಸಿ ಮುಂಜಾಗ್ರತ ಕ್ರಮ ಕೈಗೊಂಡಿದ್ದರು.

ಕರ್ನಾಟಕ, ತಮಿಳುನಾಡು, ಆಂಧ್ರ, ಕೇರಳ, ಮಹಾರಾಷ್ಟ್ರ, ಪಾಂಡಿ, ಗೋವಾ, ಪೂನಾ, ಚಂಡಿಗಡ್, ಕಲ್ಕತ್ತಾ, ದೆಹಲಿ ಸೇರಿದಂತೆ ವಿವಿಧ ರಾಜ್ಯಗಳ ಸುಮಾರು 61 ಕಾರುಗಳೊಂದಿಗೆ ಪುರುಷ ಹಾಗೂ ಮಹಿಳಾ ಸ್ಪರ್ಧಿಗಳು ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ಕೊನೆಯ 6ನೇ ಸುತ್ತಿನ ಈ ಚಾಂಪಿಯನ್‌ಶಿಪ್ ರ್‍ಯಾಲಿ ಮುಂದಿನ ದಿನಗಳಲ್ಲಿ ತುಮಕೂರಿನಲ್ಲಿ ನಡೆಯಲಿದೆ.

ಪಿಹೆಚ್.ಡಿ ಪದವಿ

ಮೈಸೂರು: ಡಾ.ಎನ್.ಆರ್. ಚಂದ್ರೇಗೌಡರ ಮಾರ್ಗದರ್ಶನದಲ್ಲಿ ಕೆ.ಎನ್.ಗಿರೀಶ್ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಕರ್ನಾಟಕ ರಾಜ್ಯ ಮುಕ್ತ ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಕಾಳೇಗೌಡ ನಿಧನ

ಕೆ.ಆರ್.ಪೇಟೆ,ನ.24– ತಾಲೂಕಿನ ಬೀರುವಳ್ಳಿ ಗ್ರಾಮದ ಹಿರಿಯ ಮುಖಂಡರಾದ ಬಿ.ಎನ್. ಕಾಳೇಗೌಡ (90) ಭಾನುವಾರ ನಿಧನ ಹೊಂದಿದ್ದಾರೆ. ಮೃತರು ಪತ್ನಿ ಸುಭದ್ರಮ್ಮ, ನಾಲ್ವರು ಪುತ್ರರು, ಓರ್ವ ಪುತ್ರಿ, ಅಳಿಯ ನಿವೃತ್ತ ಉಪನ್ಯಾಸಕ ಎಂ.ಕೆ.ಹರಿಚರಣತಿಲಕ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಬೀರವಳ್ಳಿಯಲ್ಲಿ ಭಾನುವಾರ ಮಧ್ಯಾಹ್ನ ನಡೆಯಿತು.



ನಂಜೇಗೌಡ

ಕೆ.ಆರ್.ಪೇಟೆ: ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಆದಿಹಳ್ಳಿ ಗ್ರಾಮದ ಹಿರಿಯ ಮುಖಂಡರಾದ ಗ್ರಾಪಂ ಮಾಜಿ ಸದಸ್ಯ ಆದಿಹಳ್ಳಿ ನಂಜೇಗೌಡ(65) ಭಾನುವಾರ ರಾತ್ರಿ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆಯು ಸೋಮವಾರ ಬೆಳಿಗ್ಗೆ 11 ಗಂಟೆಗೆ ಸ್ವಗ್ರಾಮ ಆದಿಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಉಪ ಚುನಾವಣಾ ಫಲಿತಾಂಶ ರಾಜ್ಯ ರಾಜಕಾರಣದ ದಿಕ್ಸೂಚಿಯಲ್ಲ

ಬೆಂಗಳೂರು, ಮೈಸೂರು, ಸಿದ್ದರಾಮನ ಹುಂಡಿಯಲ್ಲಿ ಮನೆ ಹೊಂದಿರುವ ಸಿದ್ದರಾಮಯ್ಯಗೆ 14 ಸೈಟ್ ಅವಶ್ಯಕತೆ ಇತ್ತೆ: ಆರ್. ಅಶೋಕ್ ಪ್ರಶ್ನೆ

ಬಿಜೆಪಿ ವಿರುದ್ಧ 40 ಪರ್ಸೆಂಟ್ ಸರ್ಕಾರ ಅಂತ ದೂರು ನೀಡಿದ್ದೀರಿ. ಅದಕ್ಕೆ ಸಾಕ್ಷಿಯನ್ನೇ ಒದಗಿಸಿಲ್ಲ. ಆ ಕೇಸು ಬಿಜೆಪಿ ಪರವಾಗಿದೆ. ನಿಮ್ಮ ಸರ್ಕಾರ ಹಾಲು, ಪೆಟ್ರೋಲ್, ಡೀಸೆಲ್ ಮೇಲೆ ದರ ಹೆಚ್ಚಳ ಮಾಡಿದ್ದಾರೆ. ಮದ್ಯದ ದರವನ್ನು ಹೆಚ್ಚಿಸಿ ಅದರ ಹಣವನ್ನು ನಿಮ್ಮ ಜೇಬಿಗೆ ಇಳಿಸುತ್ತಿದ್ದೀರಿ. ಯಾವ ತೆರಿಗೆ ಹಾಕಲ್ಲ ಎಂದು ಹೇಳಿ ಒಂದು ಲಕ್ಷ ಕೋಟಿ ಸಾಲ ಮಾಡಿದ್ದೀರಿ. ಆ ಸಾಲವನ್ನು ಜನರ ತಲೆಯ ಮೇಲೆ ಹಾಕುತ್ತಿದ್ದು, ಮೊದಲು ಮದ್ಯ ಕುಡಿದರೆ ನಶೆ ಏರುತ್ತಿತ್ತು. ಇದೀಗ ಮದ್ಯದ ದರ ನೋಡಿದರೆ ನಶೆಯಾಗುತ್ತದೆ. –ಆರ್.ಅಶೋಕ್

ಮಂಡ್ಯ, ನ.24– ರಾಜ್ಯದಲ್ಲಿ ನಡೆದ ಮೂರು ಕ್ಷೇತ್ರಗಳ ಉಪಚುನಾವಣೆ ರಾಜ್ಯ ಅಥವಾ ರಾಷ್ಟ್ರೀಯ ಚುನಾವಣೆಯ ದಿಕ್ಸೂಚಿ ಅಲ್ಲ. ನಿಮಗೆ ಈ ಚುನಾವಣೆಯಿಂದ ಕ್ಲೀನ್ ಚೀಟ್ ಸಿಕ್ಕಿಲ್ಲ. ಕೋರ್ಟ್ ನಿಮ್ಮ ವಿರುದ್ಧ ತನಿಖೆ ಮಾಡಿ ಎಂದಿದ್ದು, ನೀವಿನ್ನು ಆರೋಪ ಮುಕ್ತರಾಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಕಿಡಿಕಾರಿದ್ದಾರೆ.

ಭಾನುವಾರ ತಾಲೂಕಿನ ತಗ್ಗಹಳ್ಳಿ ಗ್ರಾಮದ ದೇವಸ್ಥಾನ ಆವರಣದಲ್ಲಿ ನಡೆದ ಬಿಜೆಪಿ ಪಕ್ಷ ಸೇರ್ಪಡೆ ಹಾಗೂ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಕಣ್ಮುಚ್ಚಿದರೆ ಸಾಕು 14 ಸೈಟ್‌ಗಳ ಹಗರಣವೇ ಕಾಣುತ್ತದೆ. ಆ ಸೈಟುಗಳ ಅವಶ್ಯಕತೆ ನಿಮಗಿತ್ತೇ? ಆ ಸೈಟನ್ನು ಬಡವರಿಗೆ ಹಂಚಬಹುದಿತ್ತು. ಬೆಂಗಳೂರು, ಮೈಸೂರು ಸಿದ್ದರಾಮನ ಹುಂಡಿಯಲ್ಲೂ ನಿವೇಶನ ಹೊಂದಿರುವ ನಿಮಗೆ ಅಕ್ರಮವಾಗಿ ಸೈಟು ಪಡೆಯುವ ಅವಶ್ಯಕತೆ ಏನಿತ್ತು ಪ್ರಶ್ನಿಸಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಪಾಪಿಗಳ ಸರ್ಕಾರ ಎಂದು ಹಿಂದೆಯೂ ಹೇಳಿದ್ದೆ. ಮುಂದೆಯೂ ಹೇಳುತ್ತೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ 14 ಮುಡಾ ಸೈಟುಗಳನ್ನು ಲೂಟಿ ಹೊಡೆದಿದ್ದಾರೆ. ವಾಲ್ಮೀಕಿ ಹಗರಣದಲ್ಲಿ 187 ಕೋಟಿ, ದಲಿತರಿಗೆ ಮೀಸಲಿಟ್ಟ 25 ಕೋಟಿ ಹಣವನ್ನು ಲೂಟಿ ಹೊಡೆದಿದ್ದಾರೆ. ಇದಕ್ಕೆ ನ್ಯಾಯ ದೊರಕುವವರೆಗೆ ಇದು ಪಾಪಿಗಳ ಸರ್ಕಾರವೇ ಆಗಿರುತ್ತದೆ ಎಂದು ಕಿಡಿಕಾರಿದರು.

ಕಾಂಗ್ರೆಸ್‌ನವರು ಮೂರು ಸೀಟು ಗೆದ್ದಿದ್ದೇವೆ ಎಂದು ಬೀಗುತ್ತಿದ್ದಾರೆ. ಈ ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಉಪಚುನಾವಣೆಯಲ್ಲಿ 18 ಸೀಟು ಗೆದ್ದಿದ್ದೆವು. ಜನ ಆಡಳಿತ ಪಕ್ಷದ ಜೊತೆ ವಾಲುವುದು ಉಪಚುನಾವಣೆಯಲ್ಲಿ ಸಹಜ ಪ್ರಕ್ರಿಯೆ. ಜನ ಪ್ರತಿಪಕ್ಷಗಳಿಗೆ ಮತ ಕೊಟ್ಟರೆ ಸೌಲಭ್ಯ ಒದಗಿಸುವುದಿಲ್ಲ, ಅಧಿಕಾರಿಗಳ ವರ್ಗಾವಣೆ ಆಗುತ್ತದೆ, ಗ್ಯಾರಂಟಿ ನಿಲ್ಲಿಸುತ್ತಾರೆ, ಗುತ್ತಿಗೆದಾರರ ಬಿಲ್ ಆಗುವುದಿಲ್ಲ ಎಂಬ ಈ ಭಯಕ್ಕೆ ಆಡಳಿತ ಪಕ್ಷಕ್ಕೆ ಮತ ಕೊಟ್ಟಿದ್ದಾರೆ ಎಂದರು.

ಉಪಚುನಾವಣೆಯಲ್ಲಿ ಬಿಜೆಪಿ ಸೋತಿರಬಹುದು. ಅದಕ್ಕೆ ನಮಗೆ ಭಯವೂ ಇಲ್ಲ, ಓಡಿಯೂ ಹೋಗಲ್ಲ. ನಮ್ಮ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಹೋಗುತ್ತೇವೆ ಎಂದು ತಿಳಿಸಿದರು.

ಚುನಾವಣೆಗಳು ಹಣದ ಮೇಲೆ ನಡೆಯಬಾರದರು. ಗುಣದ ಮೇಲೆ ನಡೆಯಬೇಕು. ಆದ್ದರಿಂದ ಸಚ್ಚಿದಾನಂದ ಅವರಿಗೆ ಮುಂದಿನ ದಿನಗಳಲ್ಲಿ ಆಶೀರ್ವಾದ ಮಾಡಬೇಕು. ರಾಜ್ಯ ಸರ್ಕಾರದ ಲಿಕ್ಕರ್ ಹಗರಣವನ್ನು ಹೊರಗೆ ತರುತ್ತೇವೆ. ರಾಜ್ಯದ ಜನತೆಗೆ ಅನ್ಯಾಯವಾಗುವುದನ್ನು ತಡೆಯುತ್ತೇವೆ. ಮಹಾರಾಷ್ಟ್ರದ ರೀತಿ ಕರ್ನಾಟಕದಲ್ಲೂ ಕಾಂಗ್ರೆಸ್‌ಗೆ ಅಂತಹ ಪರಿಸ್ಥಿತಿ ಬರಲಿದೆ ಎಂದು ಭವಿಷ್ಯ ನುಡಿದರು.


ಬಿಜೆಪಿ ಪಕ್ಷ ಸೇರ್ಪಡೆ ಹಾಗೂ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿದ ಗಣ್ಯರು.

ಸಂಸದ ಯದುವೀರ್ ಒಡೆಯರ್ ಮಾತನಾಡಿ, ಉಪಚುನಾವಣೆಯಲ್ಲಿ ಸೋಲು–ಗೆಲುವು ಸಹಜ. ಜನರ ತೀರ್ಮಾನ ಸ್ವೀಕರಿಸುತ್ತೇವೆ. ಸಾಮಾನ್ಯವಾಗಿ ಆಡಳಿತ ಪಕ್ಷದ ಪರ ಫಲಿತಾಂಶ ಬಂದಿದೆ. ಮುಂದೆ ರಾಜ್ಯದಲ್ಲೂ ಬಿಜೆಪಿ ಆಡಳಿತ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಆಗಿಲ್ಲ. ರಸ್ತೆಗಳು ಗುಂಡಿ ಬಿದ್ದಿವೆ. ಸರ್ಕಾರದ ಹಗರಣಗಳನ್ನು ತೆರೆದಿಟ್ಟಿದ್ದೇವೆ. ಚಾಮುಂಡಿ ಬೆಟ್ಟದ ಆಸ್ತಿಯನ್ನು ಪ್ರಾಧಿಕಾರಕ್ಕೆ ಹಾಕಿದರು. ಆ ಆಸ್ತಿ ದೇಗುಲಕ್ಕೆ ದಾನ ಮಾಡಿದ ಆಸ್ತಿ ಆಗಿದೆ. ವಕ್ಫ್ ಬೋರ್ಡ್ ಎಂಬುದು ಯಾವ ರೀತಿಯ ನ್ಯಾಯ. ಆದ್ದರಿಂದ ಧರ್ಮದ ಪರ ಎಲ್ಲರೂ ನಿಲ್ಲಬೇಕು. ಅದು ನಮ್ಮ ಕರ್ತವ್ಯ. ಆದ್ದರಿಂದ ಶ್ರೇಷ್ಠ ಭಾರತ ನಿರ್ಮಾಣಕ್ಕೆ ಕೈ ಜೋಡಿಸಬೇಕೆಂದು ಮನವಿ ಮಾಡಿದರು.

ವೇದಿಕೆಯಲ್ಲಿ ಮಾಜಿ ಸಚಿವ ಭೈರತಿ ಬಸವರಾಜು, ಮಾಜಿ ಸಂಸದ ಮುನಿಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಬಿಜೆಪಿ ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಎಸ್.ಪಿ.ಸ್ವಾಮಿ, ಪೀಹಳ್ಳಿ ರಮೇಶ್, ಮಂಗಳಾ ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

ರಸ್ತೆ ದುರಸ್ತಿಗೆ ಆಗ್ರಹಿಸಿ ಗ್ರಾಮಸ್ಥರ ಪ್ರತಿಭಟನೆ


ಮನವಿ ಪತ್ರ ಸಲ್ಲಿಸುತ್ತಿರುವ ಆಲಂಬಾಡಿಕಾವಲು ಗ್ರಾಮಸ್ಥರು.

ಕೆ.ಆರ್.ಪೇಟೆ,ನ.24– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಆಲಂಬಾಡಿಕಾವಲು ಗ್ರಾಮದ ರಸ್ತೆಗಳನ್ನು ದುರಸ್ತಿ ಮಾಡಿಸುವಂತೆ ಒತ್ತಾಯಿಸಿ ಆಲಂಬಾಡಿಕಾವಲು ಗ್ರಾಮಸ್ಥರು ಗ್ರಾಮ ಪಂಚಾಯಿತಿ ಮುಂದೆ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು.

ಗ್ರಾಮದ ಮುಖಂಡರು ಹಾಗೂ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಎ.ಎಂ.ಸಂಜೀವಪ್ಪ ಯುವ ಮುಖಂಡ ಮೋಹನ್, ಗ್ರಾಪಂ ಮಾಜಿ ಅಧ್ಯಕ್ಷೆ ಚಂದ್ರಕಲಾ ಬಸವರಾಜು, ಗ್ರಾಪಂ ಸದಸ್ಯರಾದ ಮುಜಾಹಿದ್, ಅತೀಕ್ ಅಹಮದ್, ಆಲಂಬಾಡಿಕಾವಲು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ದಿವಾಕರ್‌ಮಾಸ್ತಿ, ಗೌಸ್, ಖಾಸಿಂ, ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಗ್ರಾಮದ ಎಲ್ಲಾ ರಸ್ತೆಗಳು ಗುಂಡಿ ಬಿದ್ದು ಹಾಳಾಗಿದೆ. ಗುಂಡಿಯಲ್ಲಿ ನೀರು ನಿಂತು ಸೊಳ್ಳೆಗಳ ಕಾಟ ಜಾಸ್ತಿಯಾಗಿದೆ. ಈ ರಸ್ತೆಯಲ್ಲಿ ಮಕ್ಕಳು, ವಯೋವೃದ್ಧರು ಓಡಾಡಲು ಸಾಧ್ಯವಾಗುತ್ತಿಲ್ಲ. ದ್ವಿಚಕ್ರ ವಾಹನಗಳು, ಇತರೆ ವಾಹನಗಳು ಓಡಾಡಲು ತೀವ್ರ ತೊಂದರೆಯಾಗಿರುತ್ತದೆ ಹಾಗಾಗಿ ಕೂಡಲೇ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿಯು ನರೇಗಾ ಯೋಜನೆ ಅಡಿ ಅಥವಾ 15ನೇ ಹಣಕಾಸು ಯೋಜನೆ ದುರಸ್ತಿ ಮಾಡಿಸಿಕೊಡುವ ಮೂಲಕ ಆಲಂಬಾಡಿಕಾವಲು ಗ್ರಾಮಸ್ಥರಿಗೆ ಅನುಕೂಲ ಮಾಡಿ ಕೊಡಬೇಕು ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಗುಡುಗನಹಳ್ಳಿ ವೆಂಕಟೇಶ್, ಪಿಡಿಓ ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನಾಕಾರರ ಮನವಿ ಸ್ವೀಕರಿಸಿದ ಅಧ್ಯಕ್ಷರಾದ ವೆಂಕಟೇಶ್ ಮಾತನಾಡಿ, ಅತಿ ಶೀಘ್ರವೇ ರಸ್ತೆ ದುರಸ್ತಿಗೆ ಕ್ರಮ ವಹಿಸುವುದಾಗಿ ಭರವಸೆ ನೀಡಿದ ನಂತರ ಪ್ರತಿಭಟನಾಕಾರರು ತಮ್ಮ ಪ್ರತಿಭಟನೆಯನ್ನು ವಾಪಸು ಪಡೆದರು.

ಮೇಲುಕೋಟೆಗೆ ಇಂದು ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಚಾರ ರಥ

ಮೇಲುಕೋಟೆ: ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಚಾರ ರಥ ಖ್ಯಾತ ಕವಿ ಪು.ತಿ.ನ ತವರೂರು ಮೇಲುಕೋಟೆಗೆ ಸೋಮವಾರ ಆಗಮಿಸಲಿದೆ.

ರಥ ಮೇಲುಕೋಟೆಯ ಪಟ್ಟಣದ ಹೊರಭಾಗದಲ್ಲಿರುವ ವೀರಾಂಜನೇಯ ಸ್ವಾಮಿ ದೇವಾಲಯದ ಬಳಗ್ಗೆ 9 ಗಂಟೆಗೆ ಆಗಮಿಸಲಿದೆ ಅಲ್ಲಿ ಸ್ವಾಗತ ಕಾರ್ಯಕ್ರಮ ಆಯೋಜಿಸಲಾಗಿದ್ದು ವಿವಿಧ ಶಾಲಾ–ಕಾಲೇಜು ಮಕ್ಕಳು ಭಾಗವಹಿಸಲಿದ್ದಾರೆ. ನಂತರ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿರುವ ಸಾಹಿತ್ಯರಥ ಡಿಸೆಂಬರ್‌ನಲ್ಲಿ ಮಂಡ್ಯದಲ್ಲಿ ನಡೆಯುವ ಸಾಹಿತ್ಯ ಸಮ್ಮೇಳದ ಮಾಹಿತಿ ನೀಡಲಿದೆ. ರಥದ ಸುಗಮ ಸಂಚಾರ ಮತ್ತು ಭವ್ಯ ಸ್ವಾಗತಕ್ಕೆ ಗ್ರಾಮ ಪಂಚಾಯಿತಿ ವ್ಯವಸ್ಥೆ ಮಾಡಿಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ ಪ್ರತಿಧ್ವನಿಸಿದ ಗಾಂಜಾ, ಮದ್ಯ ಸಾಗಣೆ

ಚಾಮರಾಜನಗರ, ನ.24–ಜಿಲ್ಲೆಯಲ್ಲಿ ಗಾಂಜಾ ಹಾಗೂ ಅಕ್ರಮ ಮದ್ಯ ಸಾಗಣೆ ಪ್ರಕರಣಗಳು ಹೆಚ್ಚು ನಡೆಯುತ್ತಿವೆ ಎಂದು ಎಸ್ಸಿ, ಎಸ್ಟಿ ಮುಖಂಡರ ಕುಂದುಕೊರತೆ ಸಭೆಯಲ್ಲಿ ಪ್ರತಿಧ್ವನಿಸಿತು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸಭಾಂಗಣದಲ್ಲಿ ಭಾನುವಾರ ನಡೆದ ಜಿಲ್ಲಾ ಮಟ್ಟದ ಎಸ್‌ಸಿ, ಎಸ್‌ಟಿ ಮುಖಂಡರ ಕುಂದುಕೊರತೆ ಸಭೆಯಲ್ಲಿ ದಲಿತ ಮುಖಂಡ ಬಸವನಪುರ ರಾಜಶೇಖರ್ ಮಾತನಾಡಿ, ಹನೂರು ವ್ಯಾಪ್ತಿಯಲ್ಲಿ ಗಾಂಜಾ ಬೆಳೆಯುವುದು, ಮಾರಾಟ ಮತ್ತು ಸಾಗಣೆ ನಿರಂತರವಾಗಿದೆ. ಇದಕ್ಕೆ ಕಡಿವಾಣ ಹಾಕಬೇಕು ಎಂದು ಮನವಿ ಮಾಡಿದರು. ಇತ್ತೀಚೆಗೆ ಪೊಲೀಸರು ಗಾಂಜಾ ಸೇವಿಸುವವರನ್ನು ಬಂಧಿಸುತ್ತಿದ್ದಾರೆ. ಆದರೆ, ಗಾಂಜಾ ಸಾಗಣೆ ಮತ್ತು ಮಾರಾಟ ಮಾಡುವವರನ್ನು ಬಂಧಿಸುತ್ತಿಲ್ಲ ಎಂದು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಗಾಂಜಾ ಸಾಗಣೆ ಮತ್ತು ಮಾರಾಟ ಮಾಡುವವರ ವಿರುದ್ಧ ಕ್ರಮ ವಹಿಸಲು, ಮಾಹಿತಿ ಸಂಗ್ರಹಿಸಲು ಸೇವಿಸುವವರನ್ನು ಬಂಧಿಸಲಾಗುತ್ತಿದೆ. ಆದರೆ, ಸೇವನೆ ಮಾಡುವವರನ್ನೇ ಪೊಲೀಸರು ಗುರಿ ಮಾಡುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಜಿಲ್ಲೆಯಲ್ಲಿ ಗಾಂಜಾ ಬೆಳೆಯುವುದನ್ನು ತಡೆಯಲು ಪ್ರತಿ ತಿಂಗಳು 2 ಬಾರಿ ಗಸ್ತು ಮಾಡಲಾಗುತ್ತಿದೆ. ಬೆಳೆಯುವವರ ಬಗ್ಗೆ ಮಾಹಿತಿ ಸಂಗ್ರಹಿಸಿ ದಾಳಿ ನಡೆಸಲಾಗುತ್ತಿದೆ. ಜಿಲ್ಲೆಯಲ್ಲಿ 2020ರಲ್ಲಿ 169, 2021ರಲ್ಲಿ 122, 2022ರಲ್ಲಿ 115, 2023ರಲ್ಲಿ 141, 2024ರಲ್ಲಿ 101 ಡ್ರಗ್ಸ್ ಕೇಸ್ ಹಾಗೂ 2020ರಲ್ಲಿ 219, 2021ರಲ್ಲಿ 314, 2022ರಲ್ಲಿ 300, 2023ರಲ್ಲಿ 212, 2024ರಲ್ಲಿ 316 ಅಕ್ರಮ ಮದ್ಯ ಮಾರಾಟ, ಸಾಗಣೆ, ಸಂಗ್ರಹ ಪ್ರಕರಣ, ಗಾಂಜಾ ಸಂಬಂಧಿತ 2020ರಲ್ಲಿ 27, 2021ರಲ್ಲಿ 26, 2022ರಲ್ಲಿ 23, 2023ರಲ್ಲಿ 38, 2024ರಲ್ಲಿ 25 ಮೊಕದ್ದಮೆಗಳು ದಾಖಲಾಗಿವೆ ಎಂದು ಮಾಹಿತಿ ನೀಡಿದರು.


ಚಾ.ನಗರದ ಎಸ್‌ಪಿ ಕಚೇರಿ ಸಭಾಂಗಣದಲ್ಲಿ ನಡೆದ ಕುಂದುಕೊರತೆ ಸಭೆಯಲ್ಲಿ ಎಸ್‌ಸಿ, ಎಸ್‌ಟಿ ಮುಖಂಡರು ಭಾಗವಹಿಸಿದ್ದರು.

ಅತೀ ವೇಗದ ಸಂಚಾರ: ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಮದ್ಯ ಸೇವನೆ ನಡೆಯುತ್ತಿದೆ. ಗಾಳಿಪುರ ಬಡಾವಣೆಯಲ್ಲಿ ವಾಹನಗಳ ಮೂಲಕ ಅತೀ ವೇಗದ ಸಂಚಾರ, ವ್ಹೀಲಿಂಗ್ ಮಾಡಲಾಗುತ್ತಿದೆ. ಗೂಳಿಗಳ ಕಳವು ನಡೆಯುತ್ತಿದೆ ಎಂದು ಮುಖಂಡ ವಿರಾಟ್ ಶಿವು ದೂರಿದರು.

ಮುಖಂಡ ಸುರೇಶ ನಾಯಕ ಮಾತನಾಡಿ, ನಗರದ ಹೊರವಲಯದಲ್ಲಿ 8 ರಿಂದ 10 ಕ್ಲಬ್‌ಗಳಿಗೆ ಅವಕಾಶ ನೀಡಲಾಗಿದೆ. ಗಡಿಭಾಗದ ಇಲ್ಲಿ ಇಷ್ಟೊಂದು ಕ್ಲಬ್‌ಗಳನ್ನು ತೆರೆಯಲು ಅವಕಾಶ ನೀಡಬೇಕಿರಲಿಲ್ಲ. ಇಲ್ಲಿಗೆ ಬಡವರೇ ಹೆಚ್ಚಾಗಿ ಹೋಗುತ್ತಿದ್ದಾರೆ. ಹೆಚ್‌ಡಿ ಮತ್ತು ಹರದನಹಳ್ಳಿ ಸ್ಟೇಟ್ ಫಾರೆಸ್ಟ್‌ಗಳಲ್ಲಿ 420 ಎಕರೆ ಭೂಮಿ ಪರಿಶಿಷ್ಟರಿಗೆ ಮಂಜೂರಾಗಿತ್ತು. ಎಲ್ಲರ ಬಳಿ ಸಾಗುವಳಿ ಪತ್ರವೂ ಇದೆ. ಆದರೂ ಅರಣ್ಯ ಇಲಾಖೆ ಅಧಿಕಾರಿಗಳು ಈ ಭೂಮಿ ಅರಣ್ಯ ಇಲಾಖೆಯದು ಎಂದು ಕಿರುಕುಳ ನೀಡುತ್ತಿದ್ದಾರೆ ಎಂದು ದೂರಿದರು.

ಸಭೆಯಲ್ಲಿ ಡಿವೈಎಸ್ಪಿಗಳಾದ ಲಕ್ಷ್ಮಯ್ಯ, ಧರ್ಮೇಂದ್ರ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಮುನಿರಾಜು, ಪೊಲೀಸ್ ಇನ್ಸ್‌ಪೆಕ್ಟರ್‌ಗಳು, ಎಸ್‌ಸಿ, ಎಸ್‌ಟಿ ಮುಖಂಡರು ಹಾಜರಿದ್ದರು.

ವಿಜೃಂಭಣೆಯ ಎಣ್ಣೆಹೊಳೆ ಮಹದೇಶ್ವರ ಜಾತ್ರೆ

ಚಾಮರಾಜನಗರ, ನ.24–ತಾಲೂಕಿನ ಪ್ರಸಿದ್ಧ ಎಣ್ಣೆಹೊಳೆ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜರುಗಿತು.

ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ಈ ಜಾತ್ರಾ ಮಹೋತ್ಸವ ಜರುಗಲಿದ್ದು, ಮಹದೇಶ್ವರಸ್ವಾಮಿಗೆ ಮಹಾರುದ್ರಾಭಿಷೇಕ ಮತ್ತು ಬಿಲ್ವಾರ್ಚನೆ ನಡೆಯಿತು. ನಂತರ ಹಾಲರವೆ ಉತ್ಸವ ನಡೆಯಿತು. ದೇವಸ್ಥಾನ ಸುತ್ತ ನಂದಿ ವಾಹನ ಉತ್ಸವ ಮಾಡಲಾಯಿತು. ಬಳಿಕ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಇದೇ ವೇಳೆ ತಾಲೂಕಿನ ಅಮಚವಾಡಿ, ಬಡಗಲಪುರ, ಚಿಕ್ಕೆಂಪಿಹುಂಡಿ, ಕಟ್ನವಾಡಿ, ಮೂಡ್ಲುಪುರ, ಮಲ್ಲಯ್ಯನಪುರ, ಉಗನೇದಹುಂಡಿ, ನರಸಮಂಗಲ, ಹೊನ್ನಹಳ್ಳಿ ಗ್ರಾಮಸ್ಥರು ವಿವಿಧ ಉತ್ಸವ ನಡೆಸಿ ಪೂಜೆ ಸಲ್ಲಿಸಿದರು. ದೇವಸ್ಥಾನದ ಧರ್ಮದರ್ಶಿ ಬಿ.ಬಾಲಚಂದ್ರಮೂರ್ತಿ ಹಾಗೂ ಅರ್ಚಕ ನಾಗಮಲ್ಲಪ್ಪ ಇದ್ದರು.


ಎಣ್ಣೆಹೊಳೆ ಮಹದೇಶ್ವರಸ್ವಾಮಿ ರಥೋತ್ಸವ ನಡೆಯಿತು.

ಉಪ್ಪಾರರನ್ನು ಮೀಸಲಾತಿ ಪಟ್ಟಿಗೆ ಸೇರಿಸಲು ಆಗ್ರಹ

ಚಾಮರಾಜನಗರ, ನ.24– ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿರುವ ಉಪ್ಪಾರ ಸಮಾಜವನ್ನು ಮೀಸಲಾತಿ ಪಟ್ಟಿಗೆ ಸೇರಿಸಬೇಕು ಎಂದು ಹೊಸದುರ್ಗ ಭಗೀರಥ ಪೀಠದ ಡಾ.ಪುರುಷೋತ್ತಮಾನಂದಪುರಿ ಸ್ವಾಮೀಜಿ ಒತ್ತಾಯಿಸಿದರು.

ತಾಲೂಕಿನ ನಡುಕಲಮೋಳೆಯಲ್ಲಿ ಭಗೀರಥ ಮಹರ್ಷಿ ಪುತ್ಥಳಿ ಅನಾವರಣಗೊಳಿಸಿ ಮಾತನಾಡಿದ ಅವರು, ಮೀಸಲಾತಿ ವರದಿ ರಾಜ್ಯ ಸರ್ಕಾರದ ಮುಂದಿದೆ. ಉಪ್ಪಾರರ ಕುಲಶಾಸ್ತ್ರೀಯ ಅಧ್ಯಯನ ತಂಡದ ಮುಖ್ಯಸ್ಥ ಪ್ರೊ.ಕೆ.ಎಂ.ಮೇತ್ರಿ ರಾಜ್ಯಾದ್ಯಂತ ಪ್ರವಾಸ ಮಾಡಿ, ಎಲ್ಲಾ ಜನರ ಅಂಕಿ–ಅಂಶಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ಸಮುದಾಯಕ್ಕೆ ಮೀಸಲಾತಿ ಸೌಲಭ್ಯ ಕೊಡಿಸುವ ಭರವಸೆ ನೀಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮಂಗಲ ಮಂಜುನಾಥಸ್ವಾಮೀಜಿ, ಜಿಪಂ ಮಾಜಿ ಅಧ್ಯಕ್ಷ ಸಿ.ಎ. ಮಹದೇವಶೆಟ್ಟಿ, ರಾಜು ವೈ.ಕೆ.ಮೋಳೆ, ಯಜಮಾನರಾದ ಮಾದಶೆಟ್ಟಿ, ನಾಗೇಂದ್ರ, ದೊಡ್ಡಮಾದಶೆಟ್ಟಿ, ಮಹದೇವಶೆಟ್ಟಿ ಸಮಾಜದ ಮುಖಂಡರು ಹಾಜರಿದ್ದರು.


ನಡುಕಲಮೋಳೆಯಲ್ಲಿ ಭಗೀರಥ ಮಹರ್ಷಿ ಪುತ್ಥಳಿಯನ್ನು ಹೊಸದುರ್ಗ ಭಗೀರಥ ಪೀಠದ ಡಾ.ಪುರುಷೋತ್ತಮಾನಂದಪುರಿ ಸ್ವಾಮೀಜಿ ಅನಾವರಣಗೊಳಿಸಿದರು.

ಮನೆ ಬಾಗಿಲು ಒಡೆದು ಚಿನ್ನಾಭರಣ ಕಳವು

ಚಾಮರಾಜನಗರ, ನ.24–ನಗರದ ಬುದ್ಧ ನಗರ ಬಡಾವಣೆಯ 1ನೇ ಕ್ರಾಸ್‌ನ ಮನೆಯೊಂದರಲ್ಲಿ ಶನಿವಾರ ತಡರಾತ್ರಿ ಕಳ್ಳರು 1.40 ಲಕ್ಷ ರೂ. ಮೌಲ್ಯದ 42 ಗ್ರಾಂ ಚಿನ್ನಾಭರಣ ದೋಚಿದ್ದಾರೆ.

ಬಡಾವಣೆಯ ಪಿ.ಬಾಲು ಅವರ ಮನೆಯಲ್ಲಿ ಕಳ್ಳತನವಾಗಿದೆ. ಬಾಲು ಕುಟುಂಬದವರೊಡನೆ ಶುಕ್ರವಾರ ತಿರುಪತಿಗೆ ತೆರಳಿದ್ದರು. ಶನಿವಾರ ತಡರಾತ್ರಿ 2 ಗಂಟೆಯಲ್ಲಿ ಕಳ್ಳರು ಮನೆ ಬಾಗಿಲ ಬೀಗ ಒಡೆದು ಬೀರುವಿನಲ್ಲಿದ್ದ 42 ಗ್ರಾಂ ಚಿನ್ನಾಭರಣ ಕದ್ದೊಯ್ದಿದ್ದಾರೆ. ಭಾನುವಾರ ಬೆಳಗ್ಗೆ ಬಾಲು ಮತ್ತು ಕುಟುಂಬದವರು ಮನೆಗೆ ಬಂದಾಗ ಕಳ್ಳತನವಾಗಿರುವುದು ಪತ್ತೆಯಾಗಿದೆ. ನಂತರ ಮನೆ ಮಾಲೀಕ ಬಾಲು ಪಟ್ಟಣ ಪೊಲೀಸ್ ಠಾಣೆ ತಿಳಿಸಿದ್ದಾರೆ.

ಡಿವೈಎಸ್ಪಿ ಲಕ್ಷ್ಮಯ್ಯ, ಇನ್ಸ್‌ಪೆಕ್ಟರ್ ರಾಜೇಶ್, ಸಬ್ ಇನ್ಸ್‌ಪೆಕ್ಟರ್ ಸಿದ್ದರಾಜು, ಬೆರಳಚ್ಚು ತಜ್ಞರು, ಶ್ವಾನದಳ ಸಿಬ್ಬಂದಿ ಸ್ಥಳ ಪರಿಶೀಲಿಸಿದರು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆತ್ಮಹತ್ಯೆಗೆ ಯತ್ನಿಸಿದ್ದ ಜೆಡಿಎಸ್ ಕಾರ್ಯಕರ್ತನ ನಿವಾಸಕ್ಕೆ ಭೇಟಿ ನೀಡಿ, ಧೈರ್ಯ ಹೇಳಿದ ನಿಖಿಲ್

ರಾಮನಗರ, ನ.24– ಚನ್ನಪಟ್ಟಣ ತಾಲ್ಲೂಕಿನ ಕೂಡ್ಲೂರು ಪಂಚಾಯಿತಿಯ ಶ್ರೀರಾಂಪುರ ಗ್ರಾಮದ ಜೆಡಿಎಸ್ ಕಾರ್ಯಕರ್ತ ಮಂಜುನಾಥ್(ಅಭಿ) ಅವರ ನಿವಾಸಕ್ಕೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರ ಸ್ವಾಮಿ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ಯುವಕನ ಕುಟುಂಬಕ್ಕೆ ಧೈರ್ಯ ಹೇಳಿದ ಅವರು, ಇನ್ನೆಂದೂ ಇಂಥ ದುಡುಕಿನ ನಿರ್ಧಾರ ಮಾಡಬೇಡ ಎಂದು ಯುವಕನಿಗೆ ಕಿವಿಮಾತು ಹೇಳಿದರು. ಚುನಾವಣೆ ಎಂದ ಮೇಲೆ ಸೋಲು, ಗೆಲುವು ಸಾಮಾನ್ಯ. ಸೋಲೇ ಗೆಲುವಿನ ಮೆಟ್ಟಿಲು. ಹೀಗಾಗಿ ಯಾರೂ ಧೃತಿಗೆಡಬಾರದು ಎಂದು ಕಾರ್ಯಕರ್ತರಿಗೆ ನಿಖಿಲ್ ಅವರು ಮನವಿ ಮಾಡಿದರು.

ಕಾರ್ಯಕರ್ತರೇ ನಮ್ಮ ಪಕ್ಷದ ಶಕ್ತಿ ಎಲ್ಲರೂ ಪಕ್ಷದ ಜತೆ ನಿಂತು ಕೆಲಸ ಮಾಡೋಣ, ಹೋರಾಟ ಮಾಡೋಣ. ನಾನು ಸೋತಿದ್ದೇನೆ ಎಂದು ಮನೆಯಲ್ಲಿ ಕುರುವುದಿಲ್ಲ, ಎದೆಗುಂದುವುದಿಲ್ಲ ನಿಮ್ಮ ಜತೆ ನಾನು ಇರ್ತೀನಿ, ಪಕ್ಷ ಇರುತ್ತೆ ಯಾರು ಕೂಡ ಧೃತಿಗೆಡಬಾರದು ಎಂದರು.

ಮನೆಗೆ ಆಧಾರವಾಗಿದ್ದ ಮಂಜುನಾಥ್ ಅವರು ಈ ರೀತಿ ಮಾಡಿಕೊಂಡಿದ್ದಕ್ಕೆ ಬಹಳ ಬೇಸರವಾಯಿತು. ಈ ತರ ಮಾಡಿಕೊಳ್ಳಬೇಡಿ ನಿಮ್ಮ ಜತೆ ನಾನಿರುತ್ತೇನೆ, ಧೃತಿಗೆಡಬೇಡಿ ತಾಲೂಕಿನಲ್ಲಿ ದೇವೇಗೌಡರು ಹಾಗೂ ಕುಮಾರಣ್ಣ ಮತ್ತು ಪಕ್ಷದ ಮೇಲೆ ಕಾರ್ಯಕರ್ತರು ಪ್ರಾಣ ಇಟ್ಟುಕೊಂಡಿದ್ದಾರೆ. ಯಾರೂ ಧೈರ್ಯ ಕಳೆದುಕೊಳ್ಳಬೇಡಿ ಎಂದು ನಿಖಿಲ್ ಅವರು ಮನವಿ ಮಾಡಿದರು.

ಮೂರನೇ ಪುಟದಿಂದ

ತಂದಿಕ್ಕುವ ಕೆಲಸ ಮಾಡುತ್ತಿದ್ದಾರೆ

ಜೆಡಿಎಸ್–ಬಿಜೆಪಿನವರು ಪೂರ್ತಿ ಮನಸ್ಸಿನಿಂದ ಚುನಾವಣೆ ಮಾಡಿದ್ದೇವೆ. ಆದರೆ ನಿಖಿಲ್‌ಗೆ ಅದೃಷ್ಟ ಇರಲಿಲ್ಲ. ನಿಖಿಲ್‌ಗೆ ಮುಂದೆ ಒಳ್ಳೆಯ ಭವಿಷ್ಯವಿದೆ. ಬೆಳಗ್ಗೆ ಹೆಚ್‌ಡಿಕೆ, ನಿಖಿಲ್‌ಗೆ ಕರೆ ಮಾಡಿ ಧೈರ್ಯ ಹೇಳಿದ್ದೀನಿ. ಮುಂಬರುವ ಚುನಾವಣೆಯಲ್ಲಿ ಒಟ್ಟಾಗಿ ಹೋರಾಟ ಮಾಡುತ್ತೇವೆ. ಡಿಕೆ ಸುರೇಶ್ ಸೋಲಲು ಸಿದ್ದರಾಮಯ್ಯ ಕಾರಣ ಅಲ್ವಾ? ಅದನ್ನು ಡಿಕೆಶಿ ಒಪ್ಪಿಕೊಳ್ಳುತ್ತಾರಾ ಎಂದು ಪ್ರಶ್ನಿಸಿದರು.

ಬಿಜೆಪಿ–ಜೆಡಿಎಸ್ ಹಾಲು ಜೇನಿನಂತೆ ಇದ್ದೇವೆ. ಮುಂದೆ ಬರುವ ಚುನಾವಣೆಯಲ್ಲಿ ಒಟ್ಟಿಗೆ ಕೆಲಸ ಮಾಡುತ್ತೇವೆ. ಉಪ ಚುನಾವಣೆಯಲ್ಲಿ ಹಿನ್ನಡೆಯಾಗಿದೆ, ಆದರೆ ಅದು ಆಧಾರವಾಗಲ್ಲ. ಸೋತಿದ್ದೇವೆಂದು ನಾವೂ ಮಲಗಲ್ಲ. ಭ್ರಷ್ಟಾಚಾರ ಹಗರಣಗಳೇನಿದೆ ಅದನ್ನು ವಿಧಾನಸಭೆಯಲ್ಲಿ ಚರ್ಚೆ ಮಾಡುತ್ತೇವೆ. ಸೋಲನ್ನು ಗೆಲುವಾಗಿ ಪರಿವರ್ತನೆ ಮಾಡುತ್ತೇವೆ ಎಂದು ಹರಿಹಾಯ್ದರು.

ಸಿದ್ದರಾಮಯ್ಯ ಶಕ್ತಿ ಪ್ರದರ್ಶನ

ಕಳೆದ ವರ್ಷ ದಾವಣಗೆರೆ, ಮೈಸೂರಿನಲ್ಲಿ ಸಿದ್ದರಾಮಯ್ಯ ಅವರ ಅಭಿಮಾನಿಗಳು ಬೃಹತ್ ಸಮಾವೇಶವನ್ನು ನಡೆಸಿದ್ದರು. ಈಗ ಅದಕ್ಕಿಂತಲೂ ಹೆಚ್ಚಿನ ಜನರನ್ನು ಸೇರಿಸಿ ದಳಪತಿಗಳ ತವರಲ್ಲಿ ಸಮಾವೇಶ ನಡೆಸಲಾಗುವುದು ಎಂದು ತಿಳಿಸಿವೆ. ಉಪ ಚುನಾವಣೆ ಪ್ರಚಾರ ಸಂದರ್ಭದಲ್ಲಿ ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡ ಅವರು ಸಿದ್ದರಾಮಯ್ಯ ವಿರುದ್ಧ ಮಾಡಿದ್ದ ಆರೋಪಗಳಿಗೆ ಅವರ ತವರು ಜಿಲ್ಲೆಯಲ್ಲೇ ಸಮಾವೇಶದ ಮೂಲಕ ತಿರುಗೇಟು ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಸಮಾವೇಶ ಕುರಿತು ಸಚಿವ ಡಾ.ಎಚ್.ಸಿ. ಮಹದೇವಪ್ಪ ಮಾತನಾಡಿ, ಇದು ಸರ್ಕಾರದ ಕಾರ್ಯಕ್ರಮ ಅಲ್ಲ, ಪಕ್ಷದ ಕಾರ್ಯಕ್ರಮವೂ ಅಲ್ಲ. ಸಿದ್ದರಾಮಯ್ಯ ಅವರ ಅಭಿಮಾನಿಗಳು ನಡೆಸುತ್ತಿರುವ ಸಮಾವೇಶ. ಹಾಗಾಗಿ ನಾವು ಅವರಿಗೆ ಸಹಾಯ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದ್ದಾರೆ. ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ–ಜೆಡಿಎಸ್ ಜಂಟಿಯಾಗಿ ಹೋರಾಟ ನಡೆಸಿದ್ದವು. ಬೆಂಗಳೂರಿನಿಂದ ಮೈಸೂರು ತನಕ ಪಾದಯಾತ್ರೆ ನಡೆಸಿದ್ದವು.

ಹೇಮಂತ್ ಸೊರೆನ್ ಪ್ರಮಾಣ

ಸಚಿವ ಸಂಪುಟ ರಚನೆ ಅಂತಿಮ ಹಂತದಲ್ಲಿದ್ದು, ಈ ಸಂಬಂಧ ಹೇಮಂತ್ ಸೊರೆನ್ ಕಾಂಗ್ರೆಸ್ ನಾಯಕರೊಂದಿಗೆ ಚರ್ಚೆ ನಡೆಸುತ್ತಿದ್ದಾರೆ. ಸಂಪುಟದಲ್ಲಿ ಮುಖ್ಯಮಂತ್ರಿ ಹೊರತುಪಡಿಸಿ, ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಕೋಟಾದ ಆರು ಸಚಿವರು, ಕಾಂಗ್ರೆಸ್‌ನ ನಾಲ್ವರು ಹಾಗೂ ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ)ದ ಒಬ್ಬರು ಸ್ಥಾನ ಪಡೆದುಕೊಳ್ಳಲಿದ್ದಾರೆ ಎನ್ನಲಾಗಿದೆ. ಒಟ್ಟು 81 ಸದಸ್ಯ ಬಲದ ಜಾರ್ಖಂಡ್ ವಿಧಾನಸಭೆಯಲ್ಲಿ 56 ಸ್ಥಾನಗಳನ್ನು ಗೆಲ್ಲುವ ಮೂಲಕ ಜೆಎಂಎಂ ನೇತೃತ್ವದ ಒಕ್ಕೂಟ ಶನಿವಾರ ಜಾರ್ಖಂಡ್‌ನಲ್ಲಿ ಸತತ ಎರಡನೇ ಗೆಲವು ದಾಖಲಿಸಿದೆ. ಇದರೊಂದಿಗೆ ರಾಜ್ಯದಲ್ಲಿ ಮತ್ತೊಮ್ಮೆ ಅಧಿಕಾರಕ್ಕೇರುವ ಬಿಜೆಪಿಯ ಕನಸಿಗೆ ತಣ್ಣೀರೆರೆಚಿದ್ದಾರೆ. ಹೇಮಂತ್ ಸೊರೇನ್ ಮತ್ತು ಪತ್ನಿ, ಶಾಸಕಿ ಕಲ್ಪನಾ ಸೊರೇನ್ ಇಬ್ಬರೂ ವ್ಯವಸ್ಥಿತ ತಂತ್ರಗಾರಿಕೆ ಮೂಲಕ ಜೆಎಂಎಂ ನೇತೃತ್ವದ ಕಾಂಗ್ರೆಸ್ ಒಳಗೊಂಡ ಇಂಡಿಯಾ ಒಕ್ಕೂಟ ಜಾರ್ಖಂಡ್‌ನಲ್ಲಿ ಜಯಗಳಿಸಿದೆ.

ಚಾಮುಂಡೇಶ್ವರಿಗೆ ಚಿನ್ನದ ರಥ ನಿರ್ಮಾಣ

ನಿರ್ಮಿಸುವ ಪ್ರಸ್ತಾವ ಈ ಹಿಂದೆಯೇ ಬಂದಿತ್ತು. ಅದಕ್ಕೆ ಸುಮಾರು 100 ಕೋಟಿ ಬೇಕಾಗಬಹುದು ಎಂದು ಅಂದಾಜಿಸಲಾಗಿತ್ತು. ಆದರೆ, ವಿವಿಧ ಕಾರಣಗಳಿಂದ ಈಡೇರಿಲ್ಲ. ಮುಂದಿನ ದಸರಾದ ಒಳಗಡೆ ರಥ ನಿರ್ಮಿಸಿ, ರಥೋತ್ಸವ ಮಾಡಬೇಕು ಎಂಬುದು ಭಕ್ತರ ಬೇಡಿಕೆ ಎಂದು ಮನವಿಯಲ್ಲಿ ವಿವರಿಸಿದ್ದೆ ಎಂದು ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ಮಧ್ಯಂತರ ವರದಿ ಸಲ್ಲಿಕೆ

ವಿಚಾರಣೆ ವೇಳೆ ವಾದ ಮಂಡಿಸಿದ್ದರು. ಈ ಸಂಬಂಧ ವಾದ ಪ್ರತಿವಾದ ಆಲಿಸಿದ ಹೈಕೋರ್ಟ್ ನ್ಯಾಯಮೂರ್ತಿ ನಾಗಪ್ರಸನ್ನ ಅವರು ನವೆಂಬರ್ 24ರವರೆಗೆ ಆಗಿರುವ ಪ್ರಕರಣದ ಎಲ್ಲಾ ತನಿಖೆಯ ಮಧ್ಯಂತರ ವರದಿಯನ್ನು ನವೆಂಬರ್ 25ಕ್ಕೆ ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ಲೋಕಾಯುಕ್ತರಿಗೆ ಆದೇಶಿಸಿ ಮುಂದಿನ ವಿಚಾರಣೆಯನ್ನು ನವೆಂಬರ್ 26ಕ್ಕೆ ಮುಂದೂಡಿದ್ದರು. ಲೋಕಾಯುಕ್ತರು ಮಾತ್ರವಲ್ಲದೆ ಅರ್ಜಿದಾರ ಸಿದ್ದರಾಮಯ್ಯ, ಸಿಬಿಐ ಹಾಗೂ ರಾಜ್ಯ ಸರ್ಕಾರಕ್ಕೆ ಕೂಡ ನೋಟಿಸ್ ಜಾರಿ ಮಾಡಿರುವ ಹೈಕೋರ್ಟ್ ತಮ್ಮ ಅಭಿಪ್ರಾಯ ತಿಳಿಸುವಂತೆ ಸೂಚಿಸಿದೆ.

ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ವಿರುದ್ಧದ ಪ್ರಕರಣ ವಿಚಾರಣೆ ಹೈಕೋರ್ಟ್‌ನಲ್ಲಿ ನವೆಂಬರ್ 26ರಂದು ನಡೆಯಲಿದೆ. ಈ ಸಂಬಂದ ಲೋಕಾಯುಕ್ತ ಎಸ್ಪಿ ಟಿ.ಜೆ. ಉದೇಶ್ ಅವರು ಹೈಕೋರ್ಟ್‌ಗೆ ನಾಳೆ ಮಧ್ಯಂತರ ವರದಿ ಸಲ್ಲಿಸಲಿದ್ದಾರೆ. ಈ ಹಿನ್ನೆಲೆ ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಮಧ್ಯಂತರ ವರದಿಯೊಂದಿಗೆ ಇಂದು ಬೆಂಗಳೂರಿಗೆ ತೆರಳಿದ್ದಾರೆ. ಸಿದ್ದರಾಮಯ್ಯ ಪ್ರಕರಣವನ್ನು ಸಿಬಿಐಗೆ ವಹಿಸುವ ಸಂಬಂಧ ನವೆಂಬರ್ 26 ರಂದು ಹೈಕೋರ್ಟ್‌ನಲ್ಲಿ ಮಹತ್ವದ ವಿಚಾರಣೆ ನಡೆಯಲಿದೆ. ಅಂದು ನ್ಯಾಯಾಲಯ ಯಾವ ರೀತಿ ತೀರ್ಪು ನೀಡುತ್ತದೆ ಎಂಬ ಸಹಜ ಕುತೂಹಲ ಎಲ್ಲರಲ್ಲೂ ಮನೆ ಮಾಡಿದೆ.

ಅರ್ಲಿ ಬರ್ಡ್ ಸಂಸ್ಥೆ ಬಗ್ಗೆ ಶ್ಲಾಘನೆ

ಅಷ್ಟೆ ಅಲ್ಲದೆ ಪಕ್ಷಿ ಸಂಕುಲ ಹಾಗೂ ಪ್ರಕೃತಿಯಿಂದ ಪರಿಸರಕ್ಕೆ ಆಗುವ ಅನುಕೂಲದ ಬಗ್ಗೆ ಕೂಡ ಮಕ್ಕಳಿಗೆ ತಿಳಿ ಹೇಳುತ್ತಿದೆ. ಮಕ್ಕಳನ್ನು ಹಳ್ಳಿಗೆ ಕರೆದೊಯ್ದು ಪಕ್ಷಿಗಳ ದೃಶ್ಯ ವೀಕ್ಷಣೆ ಮೂಲಕ ಮಾಹಿತಿ ನೀಡುತ್ತಿದೆ. ಜೊತೆಗೆ ಸಂಸ್ಥೆಯು ಪಕ್ಷಿ ಸಂಕುಲ ಹಾಗೂ ಪ್ರಕೃತಿ ಬಗ್ಗೆ ಗ್ರಂಥಾಲಯ ತೆರೆದಿದೆ. ಪುಸ್ತಕಗಳ ಮೂಲಕ ಪ್ರಕೃತಿ ಕುರಿತ ವಿಚಾರಗಳನ್ನು ಮಕ್ಕಳಿಗೆ ತಿಳಿಸಲು ಅರ್ಲಿ ಬರ್ಡ್ ಸಂಸ್ಥೆ ಶ್ರಮಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಬಾಲ್ಯದಲ್ಲಿ ಗುಬ್ಬಚ್ಚಿಗಳನ್ನು ನೀವು ನೋಡಿರಬೇಕು ಎಂದು ಬಾಲ್ಯದ ದಿನಗಳನ್ನು ನೆನಪಿಸಿದ ಪ್ರಧಾನಿ ನರೇಂದ್ರ ಮೋದಿ, ನಮ್ಮ ಸುತ್ತಮುತ್ತಲಿನ ಜೀವವೈವಿಧ್ಯ ಕಾಪಾಡುವಲ್ಲಿ ಗುಬ್ಬಚ್ಚಿಗಳು ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಹೆಚ್ಚುತ್ತಿರುವ ನಗರೀಕರಣದಿಂದ ಗುಬ್ಬಚ್ಚಿ ನಮ್ಮಿಂದ ದೂರವಾಗುತ್ತಿದೆ. ಇದರಿಂದ ಇಂದಿನ ಮಕ್ಕಳು ಗುಬ್ಬಚ್ಚಿಯನ್ನು ನೋಡಲು ಸಾಧ್ಯವಾಗುತ್ತಿಲ್ಲ. ಅದರ ಬದಲು ಚಿತ್ರದಲ್ಲಿ ಮಾತ್ರ ನೋಡುವಂತಾಗಿದೆ. ಈ ಹಿನ್ನೆಲೆ ಗುಬ್ಬಚ್ಚಿಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಹಲವು ಪ್ರಯತ್ನ ನಡೆಯುತ್ತಿದೆ. ನೀವು ಈ ಪ್ರಯತ್ನ ಮಾಡಿದರೆ ಗುಬ್ಬಚ್ಚಿಗಳು ನಮ್ಮ ಜೀವನದ ಭಾಗವಾಗಲಿದೆ ಎಂದು ನರೇಂದ್ರ ಮೋದಿ ಸಲಹೆ ನೀಡಿದರು. ಪಕ್ಷಿ ಸಂಕುಲ ಹಾಗೂ ಪ್ರಕೃತಿ ಬಗ್ಗೆ ಮಕ್ಕಳಿಗೆ ತಿಳಿ ಹೇಳಲು ಪಕ್ಷಿ ವೀಕ್ಷಕರಿಗೆ ಅರ್ಲಿ ಬರ್ಡ್ ಶಿಕ್ಷಣ ತಜ್ಞರು ತರಬೇತಿ ನೀಡುತ್ತಿದ್ದಾರೆ. ಇಷ್ಟೆ ಅಲ್ಲದೆ ಸಮಾನ ಮನಸ್ಕ ಸಂಸ್ಥೆಗಳ ಸಹಭಾಗಿತ್ವದಲ್ಲಿ ದೇಶಾದ್ಯಾಂತ ಕಾರ್ಯಗಾರವನ್ನು ಕೂಡ ನಡೆಸುತ್ತಿದೆ. ಮಕ್ಕಳೊಂದಿಗೆ ಕೆಲಸ ಮಾಡುವ ಸ್ಥಳಿಯ ಗುಂಪುಗಳೊಂದಿಗೆ ಪಾಲುದಾರಿಕೆ ಹೊಂದುವ ಮೂಲಕ ಜನರನ್ನು ತಲುಪುವ ಗುರಿಯತ್ತ ಸಾಗುತ್ತಿದೆ ಎಂದು ಮೋದಿ ಹೇಳಿದ್ದಾರೆ.

ಗೃಹಲಕ್ಷ್ಮಿ ಸಂಘಗಳ ಸ್ಥಾಪನೆ

ಈ ಹಿಂದೆ ಎಸ್.ಎಂ.ಕೃಷ್ಣ ಅವರ ಅವಧಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾಗಿದ್ದ ಮೋಟಮ್ಮ ಅವರು ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳನ್ನು ಆರಂಭಿಸಿ ದೇಶದ ಆರ್ಥಿಕತೆಗೆ ಶಕ್ತಿ ತುಂಬಿದರು. ಈಗ ಅದೇ ಇಲಾಖೆಯ ಮೂಲಕ ಗೃಹಲಕ್ಷ್ಮೀ ಯೋಜನೆ ಜಾರಿಗೆ ತಂದಿರುವುದು ನನ್ನ ಪಾಲಿನ ಅದೃಷ್ಟ ಎಂದರು. ಗೃಹಲಕ್ಷ್ಮಿ ಯೋಜನೆ ಮೂಲಕ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸುವ ಉದ್ದೇಶ ಸರ್ಕಾರದ್ದು. ಈ ನಿಟ್ಟಿನಲ್ಲಿ ಮಹಿಳೆಯರಿಗೆ ಮತ್ತಷ್ಟು ಶಕ್ತಿ ತುಂಬಲು ಗೃಹಲಕ್ಷಿ ಸಂಘಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಬೆಲೆ ಏರಿಕೆಯಿಂದ ತತ್ತರಿಸಿದ್ದ ಜನರಿಗೆ ಅನುಕೂಲಕರ ಮಾಡುವ ಸಲುವಾಗಿ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಯಿತು. ಇದರ ಫಲವಾಗಿ ಇಂದು 1.24 ಕೋಟಿ ಮಹಿಳೆಯರಿಗೆ ಗೃಹಲಕ್ಷ್ಮೀ ಯೋಜನೆಯ ಹಣ ಸಂದಾಯ ಆಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ದೂರದೃಷ್ಟಿಯ ಫಲವಾಗಿ ಇಂದು ಕರ್ನಾಟಕದಲ್ಲಿ ಮಹಿಳೆಯರ ಸಬಲೀಕರಣ ಮಾಡಲಾಗುತ್ತಿದೆ. ಕನಕಪುರ ತಾಲೂಕಿನಲ್ಲಿ 70 ಸಾವಿರ ಮಹಿಳೆಯರಿಗೆ ಗೃಹಲಕ್ಷ್ಮೀ ಯೋಜನೆಯ ಹಣ ಸಂದಾಯ ಆಗುತ್ತಿದೆ ಎಂದರು.

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ನ.30, ಡಿ.1ಕ್ಕೆ ಚುಂಚನಕಟ್ಟೆ ಜಲಪಾತೋತ್ಸವ

ಸಿದ್ಧತೆ ಕೈಗೊಳ್ಳದ ತಾಲೂಕು ಆಡಳಿತ

ಸಾರ್ವಜನಿಕರ ಆಕ್ರೋಶ



ಚುಂಚನಕಟ್ಟೆ ದೇವಾಲಯದ ಆವರಣ ಕಳೆಯಿಂದ ಆವೃತವಾಗಿರುವುದು.



ದೇವಾಲಯದ ಪ್ರವೇಶದ್ವಾರಲ್ಲಿಯೇ ಕಸದ ರಾಶಿ.

ಚುಂಚನಕಟ್ಟೆ, ನ.24– ಚುಂಚನಕಟ್ಟೆ ಜಲಪಾತೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ತಾಲೂಕು ಆಡಳಿತ ಯಾವುದೇ ಸಿದ್ಧತೆ ಕೈಗೊಳ್ಳದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಇದೇ ತಿಂಗಳ ನ.30 ಹಾಗೂ ಡಿ.1ರಂದು ಚುಂಚನಕಟ್ಟೆಯಲ್ಲಿ ಜಲಪಾತೋತ್ಸವ ನಡೆಸಲು ದಿನಾಂಕ ನಿಗದಿ ಮಾಡಲಾಗಿದೆ. ಆದರೆ ತಾಲೂಕು ಆಡಳಿತ ರಸ್ತೆಗಳಿಗೆ ತೇಪೆ ಹಚ್ಚುವ ಕೆಲಸ ಬಿಟ್ಟು ಯಾವುದೇ ಸಿದ್ಧತೆ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ್ದು, ನಿಜಕ್ಕೂ ಜಲಪಾತೋತ್ಸವ ನಡೆಯುವುದೋ ಇಲ್ಲವೋ ಎಂಬ ಗೊಂದಲ ಉಂಟಾಗಿದೆ.

ಚುಂಚನಕಟ್ಟೆ ಜಲಪಾತೋತ್ಸವಕ್ಕೆ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಮಂದಿ ಆಗಮಿಸುತ್ತಾರೆ. ಆದರೆ ಜಲಪಾತೋತ್ಸವಕ್ಕೆ ಸಿದ್ಧತೆ ಕೈಗೊಳ್ಳಬೇಕಾದ ತಾಲೂಕು ಆಡಳಿತ ಕನಿಷ್ಟ ಪಕ್ಷ ದೇವಾಲಯದ ಆವರಣ ಹಾಗೂ ವೇದಿಕೆ ಬಳಿ ಬೆಳೆದಿರುವ ಕಳೆ ತೆಗೆದಿಲ್ಲ. ಅಲ್ಲದೇ ಕಾರ್ಯಕ್ರಮ ಯಶಸ್ವಿಗೆ ಬ್ಯಾನರ್ ಅಳವಡಿಕೆ ಸೇರಿದಂತೆ ಯಾವುದೇ ರೀತಿಯ ಪ್ರಚಾರ ಕೈಗೊಳ್ಳದಿರುವುದು ಆಡಳಿತ ಯಂತ್ರದ ನಿರಾಸಕ್ತಿಗೆ ಹಿಡಿದ ಕನ್ನಡಿಯಾಗಿದೆ. ಕಳೆದ 15 ದಿನಗಳ ಹಿಂದೆ ಶಾಸಕ ರವಿಶಂಕರ್ ಅವರು ಜಿಲ್ಲಾಧಿಕಾರಿಗಳ ಜೊತೆಗೂಡಿ ಇಲ್ಲಿ ಸಭೆ ನಡೆಸಿದ್ದು ಬಿಟ್ಟರೇ ಯಾವುದೇ ಅಧಿಕಾರಿಗಳು ಒಮ್ಮೆಯೂ ಇತ್ತ ಸುಳಿದಿಲ್ಲ. ಯಾವುದೇ ಸಿದ್ಧತೆ ಮಾಡಿಕೊಳ್ಳದೇ ಕಾಲಹರಣ ಮಾಡಿ ದುಂದು ವೆಚ್ಚ ಮಾಡಿ ತರಾತುರಿಯಲ್ಲಿ ಕಾರ್ಯಕ್ರಮ ಮಾಡುವುದು ಯಾರಿಗಾಗಿ ಎಂಬ ಪ್ರಶ್ನೆ ಸಾರ್ವಜನಿಕರದ್ದಾಗಿದೆ.

ಪ್ರವಾಸೋದ್ಯಮ ಇಲಾಖೆ ಅಡಿ ನಡೆಯುವ ಕಾರ್ಯಕ್ರಮ ಇದಾಗಿದ್ದು, ಕನಿಷ್ಟ ಅವರ ಮಾಹಿತಿಯೂ ಸ್ಥಳೀಯರಿಗೆ ಇಲ್ಲವಾಗಿದೆ. ಕಾರ್ಯಕ್ರಮದ ಅಂಗವಾಗಿ ಸ್ಥಳೀಯ ಕಲಾವಿದರನ್ನು ಗುರ್ತಿಸುವುದು. ದೇವಾಲಯದ ಆವರಣದಲ್ಲಿ ದೀಪಾಲಂಕಾರ, ರಸ್ತೆ ಸ್ವಚ್ಛತೆ, ಮಾಹಿತಿ ಫಲಕ ಮುಂತಾದ ಕಾರ್ಯಗಳನ್ನು ಮಾಡದೇ ತಟಸ್ಥವಾಗಿರುವ ಅಧಿಕಾರಿಗಳಿಗೆ ಹಿಡಿಶಾಪ ಹಾಕುವಂತಾಗಿದೆ.

ಕೆಲ ದಿನಗಳ ಹಿಂದೆ ನಡೆದ ಗಗನಚುಕ್ಕಿ, ಭರಚುಕ್ಕಿ ಜಲಪಾತೋತ್ಸವಕ್ಕೆ ಅಲ್ಲಿನ ಜಿಲ್ಲಾಡಳಿತ ಹಾಗೂ ಅಧಿಕಾರಿ ವರ್ಗ ತಿಂಗಳ ಹಿಂದೆಯೇ ಮಾಹಿತಿ ನೀಡಿ ರಾಜ್ಯಾದ್ಯಂತ ಪ್ರಚಾರ ಪ್ರವಾಸಿಗರನ್ನು, ಸಾರ್ವಜನಿಕರನ್ನು ಸೆಳೆಯುವ ಕೆಲಸ ಮಾಡಿತ್ತು. ಆದರೆ ಚುಂಚನಕಟ್ಟೆ ಜಲಪಾತೋತ್ಸಕ್ಕೆ ಗರ ಬಡಿದಂತಾಗಿದ್ದು ಒಂದೆಡೆ ಜಿಲ್ಲೆಯ ಪ್ರವಾಸಿ ತಾಣಗಳ ಪಟ್ಟಿಯಲ್ಲೂ ಪ್ರಮುಖ ದೇವಾಲಯಗಳ ಪಟ್ಟಿಯಲ್ಲೂ ಜಾಗವಿಲ್ಲದೇ ಪರಿತಪಿಸುವ ತಾಣವಾಗಿ ಉಳಿದಿದ್ದು ಈ ಮಲತಾಯಿ ಧೋರಣೆ ಸರಿಯೇ ಎಂಬುದು ಸ್ಥಳೀಯರ ಆಕ್ರೋಶವಾಗಿದೆ. ಕಳೆದ ಬಾರಿ ಬರದಿಂದ ಕಾವೇರಿ ನೀರು ನಿರೀಕ್ಷಿತ ಪ್ರಮಾಣದಲ್ಲಿ ಹರಿಯದ ಕಾರಣ ಕಾರ್ಯಕ್ರಮ ರದ್ದು ಮಾಡಲಾಗಿತ್ತು. ಈ ಬಾರಿಯಾದರೂ ಜಲಪಾತೋತ್ಸವಕ್ಕೆ 7 ದಿನಗಳು ಬಾಕಿ ಇದ್ದು ಈಗಲಾದರೂ ತಾಲೂಕು ಆಡಳಿತ ಎಚ್ಚೆತ್ತು ಕಾರ್ಯಕ್ರಮ ಯಶಸ್ವಿಗೊಳಿಸಲು ಮುಂದಾಗುವುದೇ ಕಾದು ನೋಡಬೇಕಿದೆ.

ಪರ್ತ್ ಟೆಸ್ಟ್: ಆಸೀಸ್‌ಗೆ ಕಠಿಣ ಗುರಿ ನೀಡಿದ ಭಾರತ

ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ ಆಕರ್ಷಕ ಶತಕ, ಗೆಲುವಿನತ್ತ ಬೂಮ್ರಾ ಪಡೆ



ಪರ್ತ್, ನ.24– ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ ಅವರ ಆಕರ್ಷಕ ಶತಕಗಳ ನೆರವಿನಿಂದ ಭಾರತ ಬಾರ್ಡರ್–ಗವಾಸ್ಕರ್ ಟೆಸ್ಟ್ ಸರಣಿಯ ಮೊದಲ ಪಂದ್ಯದ ಎರಡನೇ ಇನ್ನಿಂಗ್ಸ್‌ನಲ್ಲಿ ಬೃಹತ್ ಮೊತ್ತ ದಾಖಲಿಸಿದ್ದು, ಆಸ್ಟ್ರೇಲಿಯಾಕ್ಕೆ 534 ರನ್‌ಗಳ ಗೆಲುವಿನ ಗುರಿ ನೀಡಿದೆ.

172 ರನ್‌ಗಳಿಂದ ಮೂರನೇ ದಿನದಾಟ ಆರಂಭಿಸಿದ ಭಾರತ 134.3 ಓವರ್‌ಗಳಲ್ಲಿ 6 ವಿಕೆಟ್‌ಗೆ 487 ರನ್ ಗಳಿಸಿ ಡಿಕ್ಲೇರ್ ಘೋಷಿಸಿತು. ಬಳಿಕ ಅಸಾಧಾರಣ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ದಿನದಾಟದ ಅಂತ್ಯಕ್ಕೆ 4.2 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 12 ರನ್ ಗಳಿಸಿದ್ದು, ಪಂದ್ಯದ ಗೆಲುವಿಗೆ 522 ರನ್ ಗಳಿಸಬೇಕಿದೆ.

ಮೊದಲ ಇನಿಂಗ್ಸ್‌ನಲ್ಲಿ 5 ವಿಕೆಟ್ ಉರುಳಿಸಿದ್ದ ನಾಯಕ ಜಸ್‌ಪ್ರಿತ್ ಬುಮ್ರಾ, ದ್ವಿತೀಯ ಇನಿಂಗ್ಸ್‌ನಲ್ಲೂ ತಮ್ಮ ಮೊನಚಾದ ದಾಳಿಯ ಮೂಲಕ ನೇಥಾನ್ ಮಕ್‌ಸ್ವೀನಿ ಮತ್ತು ಮರ್ನಸ್ ಲಾಬುಶೇನ್ ಅವರ ವಿಕೆಟ್ ಉರುಳಿಸಿ ಎದುರಾಳಿ ತಂಡಕ್ಕೆ ಆಘಾತ ನೀಡಿದರು. ಮತ್ತೊಂದೆಡೆ ಮೊಹಮ್ಮದ್ ಶಮಿ ಸಹ ಒಂದು ವಿಕೆಟ್ ಪಡೆದರು. ಇದಕ್ಕೂ ಮುನ್ನ ಮೂರನೇ ದಿನ ದಾಟ ಮುಂದುವರಿಸಿದ ಯಶಸ್ವಿ ಜೈಸ್ವಾಲ್ ಮತ್ತು ಕೆ.ಎಲ್. ರಾಹುಲ್ 201 ರನ್‌ಗಳ ಜೊತೆಯಾಡಿದರು. ಆ ಮೂಲಕ ಆಸ್ಟ್ರೇಲಿಯಾದಲ್ಲಿ ದ್ವಿಶತಕದ ಜೊತೆಯಾಟವಾಡಿದ ಭಾರತದ ಮೊದಲ ಜೋಡಿ ಎಂಬ ಶ್ರೇಯಕ್ಕೆ ಪಾತ್ರರಾದರು. 176 ಎಸೆತಗಳಲ್ಲಿ 77 ರನ್ ಗಳಿಸಿದ ರಾಹುಲ್ ವಿಕೆಟ್ ಒಪ್ಪಿಸಿದರು. ನಂತರ ಬಂದ ದೇವದತ್ ಪಡಿಕ್ಕಲ್ 25 ರನ್ ಕೊಡುಗೆ ನೀಡಲಷ್ಟೇ ಶಕ್ತರಾದರು.

ಆಸೀಸ್ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದ ಜೈಸ್ವಾಲ್ 161 ರನ್‌ಗಳಿಗೆ ಔಟಾದರು. ತವರಿನಲ್ಲಿ ಕಿವೀಸ್ ವಿರುದ್ಧ ರನ್ ಬರ ಎದುರಿಸಿದ್ದ ವಿರಾಟ್ ಕೊಹ್ಲಿ, ಆಕರ್ಷಕ ಶತಕ ಸಿಡಿಸುವ ಮೂಲಕ ಲಯ ಕಂಡುಕೊಂಡರು. ಯುವ ಆಟಗಾರರಾದ ವಾಷಿಂಗ್ಟನ್ ಸುಂದರ್ 29, ನಿತೀಶ್ ಕುಮಾರ್ ರೆಡ್ಡಿ 38 ಅವರಗೆ ಉಪಯುಕ್ತ ಸಲಹೆಗಳನ್ನು ನೀಡುವ ಜೊತೆಗೆ ಅದ್ಭುತ ಇನಿಂಗ್ಸ್ ಕಟ್ಟಿದ ಕೊಹ್ಲಿ, ನಾಯಕ ಬುಮ್ರಾ ಇನಿಂಗ್ಸ್ ಡಿಕ್ಲೇರ್ ಘೋಷಿಸುವ ಮುನ್ನ ಟೆಸ್ಟ್‌ನಲ್ಲಿ 30ನೇ ಹಾಗೂ ಒಟ್ಟಾರೆ 81ನೇ ಶತಕ ಗಳಿಸಿ ತಮ್ಮದೇ ಶೈಲಿಯಲ್ಲಿ ಸಂಭ್ರಮಿಸಿದರು. ಈ ವೇಳೆ ಆಸ್ಟ್ರೇಲಿಯಾ ನೆಲದಲ್ಲಿ ಸಚಿನ್ ದಾಖಲಿಸಿದ್ದ 6 ಶತಕಗಳ ದಾಖಲೆಯನ್ನು ಹಿಂದಿಕ್ಕಿದರು.

ಸ್ಟುಡಿಯೋದಲ್ಲಿ 5 ಸಾವಿರ ರೂ. ಕಳ್ಳತನ

ಹೆಚ್.ಡಿ.ಕೋಟೆ, ನ.24– ವ್ಯಕ್ತಿಯೋರ್ವ ಸ್ಟುಡಿಯೋದಲ್ಲಿ 5 ಸಾವಿರ ರೂ. ಕಳ್ಳತನ ಮಾಡಿರುವ ಘಟನೆ ಶನಿವಾರ ಪಟ್ಟಣದಲ್ಲಿ ನಡೆದಿದೆ. ಪಟ್ಟಣದ ಅಯ್ಯಂಗಾರ್ ಬಡಾವಣೆಯ ವೆಂಕಿ ಅವರಿಗೆ ಸೇರಿದ ಸ್ಟುಡಿಯೋದಲ್ಲಿ ಕಳ್ಳತನವಾಗಿರುವುದು. ಶನಿವಾರ ಮಧ್ಯಾಹ್ನ ಸ್ಟುಡಿಯೋ ನೋಡಿಕೊಳ್ಳುತ್ತಿದ್ದ ಹುಡುಗ ಪಕ್ಕದ ಅಂಗಡಿಯವರಿಗೆ ಊಟ ಮಾಡಿಕೊಂಡು ಬರುತ್ತೇನೆ. ಅಂಗಡಿ ನೋಡಿಕೊಳ್ಳುವಂತೆ ತಿಳಿಸಿ ತೆರಳಿದ್ದಾನೆ. ಇದನ್ನು ಗಮನಿಸಿದ ವ್ಯಕ್ತಿಯೋರ್ವ ಸ್ಟುಡಿಯೋಗೆ ನುಗ್ಗಿ 5 ಸಾವಿರ ದೋಚಿ ಪರಾರಿಯಾಗಿದ್ದಾನೆ. ಸಂಜೆ ವೇಳೆ ಸ್ಟುಡಿಯೋ ಮಾಲೀಕ ವೆಂಕಿ ಲೆಕ್ಕ ತೆಗೆದುಕೊಳ್ಳುವ ವೇಳೆ ಹುಡುಗನನ್ನು ಹಾದ ಬಗ್ಗೆ ವಿಚಾರಿಸಿದ್ದು, ಬಳಿಕ ಕ್ಯಾಮಾರಾ ಪರಿಶೀಲಿಸಿದಾಗ ಕಳ್ಳತನ ನಡೆಸುತ್ತಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಜಿಲ್ಲಾ ಮಟ್ಟದ ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆ

ಮೈಸೂರು,ನ.24–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ 2024–25ನೇ ಸಾಲಿನ ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ನ.27 ರಂದು ನಜರ್‌ಬಾದ್‌ನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಜಿಲ್ಲಾ ಮಟ್ಟದ ವಿಕಲ ಚೇತನರ ಕ್ರೀಡಾ ಸ್ಪರ್ಧೆಯನ್ನು ಹಾಗೂ ನ.29ರಂದು ತಿಲಕ್‌ನಗರದ ಅಂದ ಹಾಗೂ ಕಿವುಡ ಮಕ್ಕಳ ಸರ್ಕಾರಿ ಪಾಠ ಶಾಲೆಯಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಮ್ಮಿಕೊಳಲಾಗಿದೆ. ಆಸಕ್ತ ವಿಕಲಚೇತನರು ನ.26ರೊಳಗೆ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ಮಾಹಿತಿಗಾಗಿ ದೂ.ಸಂ:0821–2490333 ಹಾಗೂ ಮೊ. ಸಂ:9731059098, 9164939204 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಕಚೇರಿಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಬೇಲದಕುಪ್ಪೆ ಮಹದೇಶ್ವರ ಜಾತ್ರಾ ಮಹೋತ್ಸವ



ಬೇಲದಕುಪ್ಪೆ ಮಹದೇಶ್ವರ ದೇವಾಲಯ

ಸರಗೂರು, ನ.24– ಕಡೇ ಕಾರ್ತಿಕ ಅಂಗವಾಗಿ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ತಾಲೂಕಿನ ಬೇಲದಕುಪ್ಪೆ ಮಹದೇಶ್ವರ ಸನ್ನಿಧಿಯಲ್ಲಿ (ನ.25) ಸೋಮವಾರ ಜಾತ್ರಾ ಮಹೋತ್ಸವ ನಡೆಯಲಿದೆ.

ಜಾತ್ರಾ ಮಹೋತ್ಸವಕ್ಕೆ ಈಗಾಗಲೇ ಸಕಲ ಸಿದ್ಧತೆ ಕೈಗೊಳ್ಳಲಾಗಿದ್ದು, ದೇವಾಲಯವನ್ನು ತಳಿರು ತೋರಣಗಳಿಂದ ಸಿಂಗರಿಸಿ, ಬಣ್ಣ ಬಣ್ಣದ ವಿದ್ಯುತ್ ದೀಪ ಹಾಗೂ ವಿವಿಧ ಹೂಗಳಿಂದ ಅಲಂಕರಿಸಲಾಗಿದೆ. ಮಹದೇಶ್ವರ ಕೊಳಗ, ಚನ್ನಗುಂಡಿ ಗ್ರಾಮದ ರುದ್ರಾಕ್ಷಿ ಮಂಟಪ ಹುಲಿವಾಹನ, ಮುತ್ತಿಗೆ ಹುಂಡಿ ಗ್ರಾಮದ ನಂದಿಧ್ವಜ, ಎತ್ತಿಗೆ ಗ್ರಾಮದ ಹುಲಿ ವಾಹನ, ಅರಳಹಳ್ಳಿ, ನಾಗಣಪುರ, ಯಶವಂತಪುರ ಗ್ರಾಮದ ಹುಲಿವಾಹನಗಳನ್ನು ಬಿರುದು ಸಮೇತ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ಕರೆ ತರಲಾಗುವುದು. ಸೋಮವಾರ ದೇವಸ್ಥಾನದ ಸಮೀಪದಲ್ಲಿರುವ ಕೆರೆಯಿಂದ ಹಾಲರವಿ ಸೇವೆ ನಡೆಸಲಾಗುವುದು. ನಂತರ ಮಹದೇಶ್ವರಸ್ವಾಮಿ ಬಸವಗಳಿಂದ ಕೊಂಡೋತ್ಸವ ನಡೆಸಿ ನಂತರ ಭಕ್ತರು ಕೊಂಡೋತ್ಸವ ಹಾಯಲಿದ್ದಾರೆ.

ಶನಿವಾರ ಬೆಳಗ್ಗೆಯೇ ಮಹದೇಶ್ವರ ದೇವಾಲಯದ ವಿಮಾನ ಗೋಪುರ ಕಳಸವನ್ನು ಬಿಡಗಲು ವಿರಕ್ತ ಮಠದ ಮಹದೇವಸ್ವಾಮೀಜಿ ಪ್ರತಿಷ್ಠಾಪಿಸಿದರು. ವಿದ್ವಾನ್ ಮಲ್ಲಣ್ಣ ಹಾಗೂ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಆಗಮಿಕ ಮಲ್ಲಿಕಾರ್ಜುನ ಹಾಗೂ ಚಿಕ್ಕದೇವಮ್ಮನವರ ಬೆಟ್ಟದ ಅರ್ಚಕರು, ಬೇಲದ ಕುಪ್ಪೆ ದೇವಾಯದ ಅರ್ಚಕ ಮಹದೇವಸ್ವಾಮಿ ಸಹಭಾಗಿತ್ವದಲ್ಲಿ ವಿವಿಧ ಹೋಮ ಹವನ ಹಾಗೂ ಕಳಸ ಪ್ರತಿಷ್ಠಾಪನೆ, ಕುಂಬಾಭಿಷೇಕ, ಏಕದಶ ರುದ್ರ ಪಾರಾಯಣ, ಏಕದಶ ರುದ್ರಹೋಮ, ವಿವಿಧ ಪೂಜಾ ಪುನಸ್ಕಾರಗಳು ನಡೆದವು. ಮಹಾ ಮಂಗಳಾರತಿ, ತೀರ್ಥಪ್ರಸಾದ ನಂತರ ರುದ್ರಾಭಿಷೇಕ, ಎಣ್ಣೆ ಮಜ್ಜನ ನಡೆಸಲಾಯಿತು. ದೇವರ ಮೂರ್ತಿಗೆ ವಿವಿಧ ಬಗೆಯ ಹೂವುಗಳಿಂದ ಅಲಂಕೃತಗೊಳಿಸಲಾಗಿತ್ತು.

ಈ ವೇಳೆ ತಹಸೀಲ್ದಾರ್ ಮೋಹನಕುಮಾರಿ, ಇಓ ರಘು, ಪಾರುಪತ್ತೇದಾರ್ ಮಹದೇವಸ್ವಾಮಿ, ರಾಕೇಶ್ ಹಾಗೂ ಅರಣ್ಯ, ಪೊಲೀಸ್, ಆರೋಗ್ಯ ಇಲಾಖೆ ಅಧಿಕಾರಿಗಳು ಸೇರಿದಂತೆ ಅಕ್ಕಪಕ್ಕದ ಗ್ರಾಮಗಳ ಯಜಮಾನರು, ಮುಖಂಡರು ಗ್ರಾಮಸ್ಥರು, ಭಕ್ತರು ಉಪಸ್ಥಿತರಿದ್ದರು.

ಭಾನುವಾರ ಶಾಸಕ ಅನಿಲ್ ದೇವಾಲಯಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿ, ಯಾವುದೇ ಅಹಿತಕರ ಘಟನೆ ನಡೆಯದಂತೆ ಅಧಿಕಾರಿಗಳು ಮುಂಜಾಗ್ರತೆ ಕ್ರಮ ಕೈಗೊಳ್ಳಬೇಕು. ಅರಣ್ಯ ಇಲಾಖೆ ಅಧಿಕಾರಿಗಳೂ ಸಹ ಭಕ್ತರಿಗೆ ಸ್ಪಂದಿಸಬೇಕು. ಜಾತ್ರೆಗೆ ಆಗಮಿಸುವ ಭಕ್ತರ ಅನುಕೂಲಕ್ಕಾಗಿ 100 ಸಾರಿಗೆ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಅರಣ್ಯ ಇಲಾಖೆಯ ಚೈನ್‌ಗೇಟ್ ಸಮೀಪ ಖಾಸಗಿ ವಾಹನಗಳ ಪಾರ್ಕಿಂಗ್, ಅಂಗಡಿ ಮಳಿಗೆಗಳು ಸೇರಿದಂತೆ ಎತ್ತಿನಗಾಡಿ ನಿಲುಗಡೆಗೆ ಸ್ಥಳಾವಕಾಶ ಮಾಡಿಕೊಡುವಂತೆ ಅಧಿಕಾರಿಗಳಿಗೆ ಸೂಚಿಸಿದ ಶಾಸಕರು ಸುಗಮ ಸಂಚಾರಕ್ಕೆ ಹೆಚ್ಚಿನ ಪೊಲೀಸರನ್ನು ನಿಯೋಜಿಸುವಂತೆ ತಿಳಿಸಲಾಗಿದೆ. ಭಕ್ತರ ಆರೋಗ್ಯದ ದೃಷ್ಟಿಯಿಂದ ತಾಲೂಕು ಆರೋಗ್ಯ ಇಲಾಖೆ ತಾತ್ಕಾಲಿಕ ಆಸ್ಪತ್ರೆ ತೆರೆದು ವೈದ್ಯರು, ಸಿಬ್ಬಂದಿ ಚಿಕಿತ್ಸೆ ನೀಡಲು ಸಿದ್ಧರಾಗಿರಬೇಕು ಎಂದರು.

ನಾಳೆ ವಿದ್ಯಾರ್ಥಿ ನಿಲಯ ನವೀಕರಣ ಸಂಬಂಧ ಸಭೆ



ಪೂರ್ವಭಾವಿ ಸಭೆಯಲ್ಲಿ ಪ್ರಕಾಶ್ ಮಾತನಾಡಿದರು.

ತಿ.ನರಸೀಪುರ, ನ.24– ಪಟ್ಟಣದ ವೀರಶೈವ ವಿದ್ಯಾರ್ಥಿ ನಿಲಯದ ನವೀಕರಣ ಸಂಬಂಧ ಸಮಾಜದ ಮುಖಂಡರಿಂದ ಸಲಹೆ–ಸೂಚನೆ ಪಡೆಯಲು ಹಾಗೂ ವೀರಶೈವ ಲಿಂಗಾಯತ ಸಮುದಾಯದವರಿಗೆ ಕೃತಜ್ಞತೆ ಸಲ್ಲಿಸಲು ಜೆಎಸ್‌ಎಸ್ ಸಭಾ ಭವನದಲ್ಲಿ ನ.26 ರಂದು ಸಭೆ ಕರೆಯಲಾಗಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಸಿ.ಎಂ.ಪ್ರಕಾಶ್ ತಿಳಿಸಿದರು.

ಪಟ್ಟಣದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ಭಾನುವಾರ ನಡೆದ ಸಮಾಜದ ಮುಖಂಡರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ವಾಟಾಳು ಮಠದ ಡಾ.ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಸಾನಿಧ್ಯದಲ್ಲಿ ಪಟ್ಟಣದ ಜೆಎಸ್‌ಎಸ್ ಸಭಾ ಭವನದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಸಮಾಜದ ಮುಖಂಡರ ಸಭೆ ಆಯೋಜಿಸಲಾಗಿದ್ದು, ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಟ್ಟಡ ನವೀಕರಣ ಕುರಿತಂತೆ ತಮ್ಮ ಅಮೂಲ್ಯ ಸಲಹೆ ಸೂಚನೆ ನೀಡಬೇಕೆಂದು ಮನವಿ ಮಾಡಿದರು.

ಕೃಷಿಕ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ಶಿವಮಲ್ಲಪ್ಪ ಮಾತನಾಡಿ, ವೀರಶೈವ ವಿದ್ಯಾರ್ಥಿ ನಿಲಯದ ಕಟ್ಟದ ಹಳೆಯದಾಗಿದ್ದು, ನವೀಕರಣದ ಅವಶ್ಯಕತೆ ಇದೆ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದಿಂದ ಕಟ್ಟಡ ನವೀಕರಣ ಮಾಡುವ ಉದ್ದೇಶ ಹೊಂದಲಾಗಿದೆ. ಅಂದಾಜು 25 ಲಕ್ಷ ರೂ. ವೆಚ್ಚದಲ್ಲಿ ಸಮುದಾಯ ಭವನ ಮಾದರಿ ನವೀಕರಣ ಮಾಡಬೇಕಿದೆ. ಮೇಲ್ಛಾವಣಿಯನ್ನು ತೆರವುಗೊಳಿಸಿ ಕಾಂಕ್ರೀಟ್ ಹಾಕಿ ನವೀಕರಿಸಿ ಹೆಚ್ಚುವರಿ ಕೊಠಡಿ ನಿರ್ಮಾಣ ಮಾಡಬೇಕೆಂಬ ಗುರಿ ಹೊಂದಿದ್ದು, ಇದಕ್ಕೆ ಸಮಾಜದ ಮುಖಂಡರು, ಮಠಾಧೀಶರ ಸಲಹೆ ಸಹಕಾರ ಅಗತ್ಯವಾಗಿದೆ. ಹಾಗಾಗಿ ಸಭೆಗೆ ಸಮಾಜದ ಬಂಧುಗಳು ಆಗಮಿಸಿ ನವೀಕರಣ ಸಂಬಂಧ ಸಲಹೆ ಸೂಚನೆ ನೀಡುವಂತೆ ಮನವಿ ಮಾಡಿದರು.


ಈ ವೇಳೆ ಸಂಘದ ಉಪಾಧ್ಯಕ್ಷ ಎಸ್.ಕೆ. ಕಿರಣ್, ಪ್ರಧಾನ ಕಾರ್ಯದರ್ಶಿ ಕುರುಬೂರು ಕೆ.ವಿ.ಶಿವಶಂಕರ್, ಕಾರ್ಯದರ್ಶಿ ಚೆನ್ನಮಲ್ಲಿಕಾರ್ಜುನಸ್ವಾಮಿ, ಕೋಶಾಧ್ಯಕ್ಷ ಜಿ.ನಂಜುಂಡಸ್ವಾಮಿ, ಕಾರ್ಯಕಾರಿಣಿ ಸಮಿತಿ ಸದಸ್ಯರಾದ ಎಸ್.ಬಿ. ಸುಗಂಧರಾಜು, ತೊಂಟೇಶ್,ಓಂಕಾರ ಸ್ವಾಮಿ, ಎಂ.ಗುರುಸ್ವಾಮಿ, ಕೆಎಂ.ಮಲ್ಲು ಎಂ.ಪರಶಿವ ಮೂರ್ತಿ, ಟಿ.ಪಿ.ಶಿವ ಕುಮಾರಸ್ವಾಮಿ, ಬಿ.ಎಸ್. ಜ್ಞಾನೇಶ್ವರಿ, ಟಿ.ಎಂ.ರವಿ, ವೀರೇಂದ್ರ, ಪೂಜಿತ್ ಮೆಡಿಕಲ್ ಕುಮಾರ್, ಎಂ.ಮಹೇಶ್, ಪುರಸಭೆ ಮಾಜಿ ಸದಸ್ಯ ಟಿ.ಎನ್. ಲೋಕೇಶ್ ಇದ್ದರು.

ಹೆಚ್.ಪಿ.ದೇವಕಿ ನಿಧನ



ಮೈಸೂರು, ನ.24–ಮೈಸೂರಿನ ಗಂಗೋತ್ರಿ ಬಡಾವಣೆ ನಿವಾಸಿ ವಿಶ್ರಾಂತ ಸಂಸ್ಕೃತ ಪ್ರೊ. ದಿವಂಗತ ಎ.ಎಂ.ಪುಟ್ಟಸ್ವಾಮಿಗೌಡರ ಪತ್ನಿ ಪ್ರೊ. ಹೆಚ್.ಪಿ.ದೇವಕಿ(73) ಅವರು ಇಂದು (ಭಾನುವಾರ) ರಾತ್ರಿ ನಿಧನರಾದರು. ಮೃತರು ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದ ನಂತರ ಮಾನಸ ಗಂಗೋತ್ರಿಯಲ್ಲಿ ಎಂ.ಎ. ಸಂಸ್ಕೃತ ಪದವಿ ಪಡೆದಿದ್ದಾರೆ. ಭಾರತದಿಂದ ಪ್ಯಾರೀಸ್‌ನ ಕಾಲೇಜಿಗೆ ಪ್ರಾಧ್ಯಾಪಕರಾಗಿ ನಿಯೋಜನೆಗೊಂಡು 5 ವರ್ಷ ಅಲ್ಲಿ ಕಾರ್ಯ ನಿರ್ವಹಿಸಿದ್ದರು. ಮೂವರು ಸಹೋದರರು, ಮೂವರು ಸಹೋದರಿಯರು ಹಾಗೂ ಅಪಾರ ಶಿಷ್ಯ ವರ್ಗವನ್ನು ಅಗಲಿದ್ದಾರೆ. ಇವರ ಪುತ್ರ ಡಾ. ಎ.ಪಿ.ವರ್ಧಮಾನ್ ಆಸ್ಟ್ರೇಲಿಯಾದಲ್ಲಿದ್ದು, ಅವರು ಬಂದ ನಂತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.11.2024 ಸೋಮವಾರ, ಮಳೆ ನಕ್ಷತ್ರ: ಅನೂರಾಧ, 19.11.2024 ರಿಂದ 01.12.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** 47ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವ, 26ನೇ ವರ್ಷದ ಮಹಾ ಕುಂಬಾಭಿಷೇಕ ಮತ್ತು 10ನೇ ವರ್ಷದ ಹಾಲರವಿ ಸೇವೆ, ನಾಲ್ಕನೇ ಕಾರ್ತಿಕ ಸೋಮವಾರದ ಅಂಗವಾಗಿ ಬೆಳಗ್ಗೆಯಿಂದ ಶ್ರೀ ಸ್ವಾಮಿಗೆ ಅಭಿಷೇಕ ಹಾಗೂ ವಿಶೇಷ ಪೂಜೆ. ಸಂಜೆ 7 ಗಂಟೆಗೆ ಶ್ರೀ ಸ್ವಾಮಿಯ ಸುವರ್ಣ ಕೊಳಗದ ಮೆರವಣಿಗೆ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ನವ ಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್:** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ರಿಯಾಯಿತಿ ಪುಸ್ತಕ ಮಾರಾಟ, ಸ್ಥಳ: ಚಾಮರಾಜ ಜೋಡಿರಸ್ತೆ, ರಾಮಸ್ವಾಮಿ ಸರ್ಕಲ್, ಬೆಳಗ್ಗೆ 9.30ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಅಜೀಮ್ ಪ್ರೇಮ್ ಜಿ ಯೂನಿವರ್ಸಿಟಿ, ಅನುವಾದ ಸಂಪದ (ಕನ್ನಡ ಮತ್ತು ಹಿಂದಿಯಲ್ಲಿ ಗುಣಾತ್ಮಕ ಶೈಕ್ಷಣಿಕ ಸಂಪನ್ಮೂಲಗಳ ಆನ್‌ಲೈನ್ ಕಣಜ :** ವಿಚಾರ ಸಂಕಿರಣ ಹಾಗೂ ಕಾರ್ಯಾಗಾರ, ವಿಷಯ: ಉನ್ನತ ಶಿಕ್ಷಣದಲ್ಲಿ ಸಂವಾದವನ್ನು ಉತ್ತೇಜಿಸಲು ಪ್ರಾದೇಶಿಕ ಭಾಷೆಗಳಲ್ಲಿ ಸುಸ್ಥಿರ ಪರಿಸರ ವ್ಯವಸ್ಥೆಯ ನಿರ್ಮಾಣ: ಸವಾಲುಗಳು ಮತ್ತು ಅವಕಾಶಗಳು, ಸ್ಥಳ: ಶಿಕ್ಷಣ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನವಿಕ ಬ್ಲಾಕ್, ಬೆಳಗ್ಗೆ 10 ಗಂಟೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್, ಬಾಸುದೇವ ಸೋಮಾನಿ ಕಾಲೇಜು (ಕನ್ನಡ ವಿಭಾಗ ಹಾಗೂ ರಾಷ್ಟ್ರೀಯ ಸೇವಾ ಯೋಜನೆ:** ಕನ್ನಡ ರಾಜ್ಯೋತ್ಸವ ಆಚರಣೆ, ಸ್ಥಳ: ಕಾಲೇಜು ಸಭಾಂಗಣ, ಕುವೆಂಪುನಗರ, ಬೆಳಗ್ಗೆ 11 ಗಂಟೆಗೆ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, ಕಾರ್ತಿಕ ಸೋಮವಾರದ ಅಂಗವಾಗಿ ಬೆಳಗ್ಗೆ 7 ಗಂಟೆಗೆ ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿಗೆ ತೈಲಾಭಿಷೇಕ, ಪಂಚಾಮೃತಾಭಿಷೇಕ, ಮಹಾರುದ್ರಾಭಿಷೇಕ ಮತ್ತು ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಶ್ರೀ ಚಾಮರಾಜೇಶ್ವರ ಸ್ವಾಮಿ ಪ್ರೀತ್ಯರ್ಥವಾಗಿ ಅಭಿಜಿನ್ ಲಗ್ನದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವ, ಸಂಜೆ 7 ಗಂಟೆಗೆ ಶಾಲ್ಯನ್ನ ಅಲಂಕಾರ ಹಾಗೂ ಒಳ ಆವರಣದ ಉತ್ಸವ, ಸ್ಥಳ: ದೇವಸ್ಥಾನದ ಆವರಣ, ಡಿ. ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.

■ **ಆಶಾ ಮಂದಿರ ನಿವೇಶನ ಮತ್ತು ವಸತಿದಾರರ ಕ್ಷೇಮಾಭಿವೃದ್ಧಿ ಸಂಘ :** ಕಾರ್ತಿಕ ಸೋಮವಾರ, ಶ್ರೀ ವಿನಾಯಕ ಸ್ವಾಮಿ, ಶ್ರೀ ಉಮಾ ಮಹೇಶ್ವರಿ, ಶ್ರೀ ಆಂಜನೇಯ ಸ್ವಾಮಿ, ನವಗ್ರಹ ದೇವಸ್ಥಾನ ಹಾಗೂ ಪಂಚ ಗೋಪುರಗಳ ಸಮುಚ್ಚಾಲಯದಲ್ಲಿ ಬೆಳಗ್ಗೆ 8 ಗಂಟೆಯಿಂದ ಅಭಿಷೇಕ, ಪೂಜಾ ಕಾರ್ಯಕ್ರಮ, ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ, ಸಂಜೆ 6.30ಕ್ಕೆ ದೀಪೋತ್ಸವ, ಸ್ಥಳ: ದೇವಸ್ಥಾನದ ಆವರಣ, ಹೆಬ್ಬಾಳು ಬಡಾವಣೆ.

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ):** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳು, ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಮಠದ ಆವರಣ, ಬೆಳಗ್ಗೆಯಿಂದ.

■ **ಉತ್ತಿಷ್ಠ ಭಾರತ ಪ್ರತಿಷ್ಠಾನ, ಹಿಮಾಲಯ ಪ್ರತಿಷ್ಠಾನ: ಯೋಗಿರಾಜ ಶ್ರೀ ಕೃಷ್ಣಮಾಚಾರ್ಯ ಜಯಂತ್ಯುತ್ಸವ, ಉದ್ಘಾಟನೆ:** ಪ್ರಮತಿ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಹೆಚ್.ವಿ.ರಾಜೀವ್, ಅಧ್ಯಕ್ಷತೆ: ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಮುಖ್ಯ ಅತಿಥಿಗಳು: ಡಾ.ಕೆ.ಲೀಲಾ ಪ್ರಕಾಶ್, ಕೆ.ಯೋಗಾ ನರಸಿಂಹನ್, ಸ್ಥಳ: ನಿವೇದಿತಾ ಉದ್ಯಾನವನ, ಸಂಜೆ 5 ಗಂಟೆಗೆ.

■ **ಕಲಾಧಾರೆ ಕಲ್ಚರಲ್ ಟ್ರಸ್ಟ್ (ಮಾಸ್ಟರ್ 'ಎನ್' ಬ್ಲಾಸ್ಟರ್ ಡ್ಯಾನ್ಸ್ ಗ್ರೂಪ್):** ಮಕ್ಕಳ ದಿನಾಚರಣೆ ಹಾಗೂ ಸುವರ್ಣ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ವೈವಿಧ್ಯಮಯ ನೃತ್ಯ ತರಬೇತಿ ಶಿಬಿರ, ಸ್ಥಳ: ಟ್ರಸ್ಟ್ ಆವರಣ, ಶ್ರೀರಾಂಪುರ, ಎರಡನೇ ಹಂತ, ಸಂಜೆ 5 ಗಂಟೆಗೆ.

■ **ಶ್ರೀ ಕೃಷ್ಣ ಟ್ರಸ್ಟ್ (ಶ್ರೀ ಕೃಷ್ಣಧಾಮ):** ತಿಂಗಳ ಸಾಂಸ್ಕೃತಿಕೋತ್ಸವ, ನಗೆ ಸಾರ್ವಭೌಮ ಗಂಗಾವತಿ ಪ್ರಾಣೇಶ್ ಮತ್ತು ತಂಡದವರಿಂದ ಹಾಸ್ಯ ಸಂಜೆ ಕಾರ್ಯಕ್ರಮ, ಸ್ಥಳ: ಕೃಷ್ಣಧಾಮದ ಶ್ರೀ ಕೃಷ್ಣ ಸಭಾ ಭವನ, ಸರಸ್ವತಿಪುರಂ, ಸಂಜೆ 5.30ಕ್ಕೆ.

■ **ಶ್ರೀ ನನ್ನೇಶ್ವರ ಸ್ವಾಮಿ ದೇವರ ಕಲ್ಯಾಣಿ (ಕೊಳ)ಯ ಮತ್ತು ಹಿನಕಲ್ ಗ್ರಾಮದ ಅಭಿವೃದ್ಧಿ ಸಮಿತಿ:** ಕಡೇ ಕಾರ್ತಿಕ ಸೋಮವಾರದ ಅಂಗವಾಗಿ ಲಕ್ಷ ದೀಪೋತ್ಸವ, ಸ್ಥಳ: ದೇವಸ್ಥಾನದ ಆವರಣ, ಹಿನಕಲ್ ಗ್ರಾಮ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಡಾ.ಪ್ರಿಯಂವದಾ ಹುಲಗಬಾಳಿ, 6.15–ಗೀತಾರಾಧನ, 6.35–ಮತ್ತು ಸಂಜೆ 6.10: ಅಂಚೆ–ಅಂಕನ –ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್. ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾ ಧರಿಸಿದ ಬಾನುಲಿ ಸರಣಿ, ಗಾಯನ–ಜಯಂತಿ. ವಿ.ಭಟ್, ಡಿ.ಪುರುಷೋತ್ತಮ್, ವ್ಯಾಖ್ಯಾನ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು–ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.05–ಶ್ವಾಸಕೋಶ ಕ್ಯಾನ್ಸರ್ ಕುರಿತು ಮಾಹಿತಿ ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 9.10–ನೆನಪಿನಂಗಳ (ಧ್ವನಿ ಭಂಡಾರದಿಂದ): ಹಿರಿಯ ಮೃದಂಗ ಕಲಾವಿದರಾದ ಟಿ.ಎಂ.ಪುಟ್ಟಸ್ವಾಮಯ್ಯ ಅವರೊಂದಿಗೆ ಬೆಂಗಳೂರು ಕೆ.ವೆಂಕಟರಾಮ್ ಅವರು ನಡೆಸಿದ್ದ ಸಂವಾದ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಟಿ.ರುಕ್ಮಿಣಿ–ವಯೋಲಿನ್ ವಾದನ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ, ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ, 12.05–ವನಿತಾ ವಿಹಾರ, 12.35–ದೇವರನಾಮ–ಪುರಂದರದಾಸರ ರಚನೆಗಳು, 12.45–ನಮ್ಮ ಆರೋಗ್ಯ: 'ಮಧುಮೇಹ ಸಂಬಂಧಿತ ಸಮಸ್ಯೆಗಳ ಪೂರ್ವ ತಪಾಸಣೆ ಹಾಗೂ ಚಿಕಿತ್ಸೆ' ಕುರಿತು ಮಧುಮೇಹ ತಜ್ಞರಾದ ಡಾ.ರೇಣುಕಾಪ್ರಸಾದ್ ಎ.ಆರ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಚಿತ್ರಗೀತೆಗಳು, 1.20–ಕೋಮು ಏಕತಾ ಸಪ್ತಾಹ ಸಂರಕ್ಷಣಾ ದಿನ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾನಸರಸ್ವತಿ–ಹಾಡುಗಾರಿಕೆ, 4.00–ಮಹಿಳಾ ರಂಗ–"ನಾನು ನನ್ನ ಕಂಪನಿ" ಸಾವಯವ ಆಹಾರ ಪದಾರ್ಥಗಳನ್ನು ತಯಾರಿ ಸುವ ಉದ್ಯಮಿ ಆಶಾಕುಮಾರಿ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನ, 4.45–ಹಿಂದಿ ಪಾಠ,ಡಾ. ಸ್ಮಿತಾ ಚಿಪ್ಳೂಣ್‌ಕರ್, 6.50–ಕೃಷಿರಂಗ: ಕೃಷಿ ವಿಜ್ಞಾನ ಕೇಂದ್ರದ ಕಾರ್ಯ ಚಟುವಟಿಕೆಗಳು. ಈ ಕುರಿತು ನಂಜನಗೂಡು ತಾಲೂಕು ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು ಹಾಗೂ ಹಿರಿಯ ವಿಜ್ಞಾನಿ ಡಾ.ಬಿ.ಎನ್.ಜ್ಞಾನೇಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ: ಯುವ ಸಂಗೀತ ಪ್ರತಿಭೆ ಮಂಡ್ಯ ಜಿಲ್ಲೆ ಬೆಳವಾಡಿಯ ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿದ್ಯಾರ್ಥಿನಿ ಸಿರಿ ಪರಮಾತ್ಮ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಎಸ್.ರಾಮನಾಥನ್– ಹಾಡುಗಾರಿಕೆ, 10.00–ರೂಪಕ, 10.30–ಸವಿನೆನಪು.

ಮೈಸೂರು ಮಿತ್ರ
ಸೋಮವಾರ 25 ನವೆಂಬರ್ 2024

ಭರತನಾಟ್ಯ ವಿಶ್ವಕ್ಕೆ ಭಾರತ ನೀಡಿದ ಮಹಾನ್ ಕೊಡುಗೆ

ಮೈಸೂರು ಕಲಾ ದಿವಸ್‌ನಲ್ಲಿ ಸುತ್ತೂರು ಶ್ರೀ ಅಭಿಮತ




ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಭಾನುವಾರ ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ ಆಯೋಜಿಸಿದ್ದ ಮೈಸೂರು ಕಲಾ ದಿವಸ್ ಕಾರ್ಯಕ್ರಮವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು. ಮತ್ತೊಂದು ಚಿತ್ರದಲ್ಲಿ ಪ್ರತಿಭಾನ್ವಿತ 550 ಕ್ಕೂ ಹೆಚ್ಚು ನೃತ್ಯ ಕಲಾವಿದರು ಸಮೂಹ ನೃತ್ಯ ಪ್ರದರ್ಶನ ನೀಡಿದರು.

ಮೈಸೂರು, ನ.24(ಬಿಎಲ್‌ಯು)– ಯೋಗದಂತೆ ಭರತನಾಟ್ಯವನ್ನು ಕೂಡ ಭಾರತ ವಿಶ್ವಕ್ಕೆ ಮಹಾನ್ ಕೊಡುಗೆಯಾಗಿ ನೀಡಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ನಗರದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಇಂದು ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ ಆಯೋಜಿಸಿದ್ದ ಮೈಸೂರು ಕಲಾ ದಿವಸ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ಪ್ರಾಚೀನ ಪರಂಪರೆ ಕಲೆಯಾದ ಭರತನಾಟ್ಯದಲ್ಲಿ ಡಾ.ವಸುಂಧರ ದೊರೆಸ್ವಾಮಿ ಅವರು ವಿಶೇಷ ಛಾಪು ಮೂಡಿಸಿದ್ದಾರೆ ಎಂದರು.

ಭರತನಾಟ್ಯ ತಮ್ಮ ಬದುಕಿನ ಅವಿಭಾಜ್ಯ ಅಂಗ ಎಂದು ಪರಿಗಣಿಸಿರುವ ಡಾ. ವಸುಂಧರ ದೊರೆಸ್ವಾಮಿ ಅವರು ಈ ಕಲೆಯನ್ನು ದೇಶ–ವಿದೇಶದಲ್ಲಿ ಪಸರಿಸುತ್ತಿದ್ದಾರೆ. ಈ ಮೂಲಕ ತಾವು ಕಲಿತಿರುವ ಭರತನಾಟ್ಯ ಕಲೆಯನ್ನು ವಿಶ್ವಕ್ಕೆ ಧಾರೆ ಎರೆಯುತ್ತಿದ್ದಾರೆ ಎಂದು ಶ್ರೀಗಳು ಪ್ರಶಂಸಿಸಿದರು.

ಒಂದೇ ಸ್ಥಳದಲ್ಲಿ ಇಂದು 550 ಕ್ಕೂ ಹೆಚ್ಚು ಭರತನಾಟ್ಯ ಕಲಾವಿದರು ಭರತನಾಟ್ಯ ಸಮೂಹ ನೃತ್ಯ ಮಾಡಿರುವುದು ಮೈಸೂರಿಗೆ ಹೆಮ್ಮೆಯ ವಿಚಾರವಾಗಿದೆ. ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಈ ಆಶ್ರಮದ ವೇದಿಕೆಯಲ್ಲಿ ನಾವಿರುವ ನೆಲ ಚಾಮುಂಡಿ ತಪ್ಪಲು ಎಂಬ ಹಾಡಿಗೆ ನೃತ್ಯ ಪ್ರದರ್ಶಿಸಿರುವುದು ನೋಡುಗರನ್ನು ಆಕರ್ಷಿಸಿದೆ ಎಂದರು.

ಇಷ್ಟೊಂದು ಭರತನಾಟ್ಯ ಕಲಾವಿದರು ನೃತ್ಯ ಮಾಡಿರುವುದು ಕಣ್ಣಿಗೆ ಆನಂದ ತಂದಿದೆ ಹಲವು ವರ್ಷಗಳಿಂದ ಭರತನಾಟ್ಯ ಕ್ಷೇತ್ರದಲ್ಲಿ ಡಾ.ವಸುಂಧರ ದೊರೆಸ್ವಾಮಿ ಅದ್ವಿತೀಯ ಸಾಧನೆ ಮಾಡಿದ್ದಾರೆ. ಭರತನಾಟ್ಯದಲ್ಲಿ ನಿರಂತರ ತಪಸ್ಸು ಮಾಡಿದ ಫಲವಾಗಿ ಅವರಿಗೆ ಈ ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಈ ವೇಳೆ ಮಾತನಾಡಿದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಅವಧೂತ ದತ್ತ ಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ನೃತ್ಯ ಕಲಿಯುವುದು ಕಷ್ಟವಲ್ಲ. ಆದರೆ ಏಕಾಗ್ರತೆ ಇಲ್ಲದಿದ್ದರೆ ಮಾತ್ರ ಕಷ್ಟವಾಗುತ್ತದೆ. ತಮ್ಮನ್ನು ತಾವು ಅರ್ಪಿಸಿಕೊಂಡು ಕಲಿತರೆ ಭರತನಾಟ್ಯ ಕಲಿಯುವುದು ಸುಲಭ ಎಂದು ಅಭಿಪ್ರಾಯಪಟ್ಟರು.

ಸಂಗೀತ ಅರ್ಥ ಮಾಡಿಕೊಂಡು ನೃತ್ಯ ಮಾಡಬೇಕು. ಗುರು ಭಕ್ತಿಯನ್ನು ಅರ್ಪಿಸಬೇಕು. ಯೋಗದಿಂದ ಆರೋಗ್ಯವಂತರಾಗಬಹುದು ಎಂಬುದನ್ನು ಮನಗಾಣಬೇಕು ಎಂದು ಹೇಳಿದರು.

ಮೈಸೂರಿನಲ್ಲಿ ನೂರಾರು ಕಲಾವಿದರು ನೃತ್ಯ ಮಾಡಿರುವುದು ನಗರದಲ್ಲಿ ನಡೆದ ಯೋಗ ದಾಖಲೆಯನ್ನು ನೆನಪಿಸುತ್ತದೆ ಎಂದರು.

ಕಳೆದ 50 ವರ್ಷಗಳಿಂದ ಅಪಾರ ಶಿಷ್ಯ ವೃಂದಕ್ಕೆ ಡಾ.ವಸುಂಧರ ದೊರೆಸ್ವಾಮಿ ಈ ಕಲೆ ಧಾರೆ ಎರೆದಿದ್ದು, ಇದು ಸಣ್ಣ ಸಾಧನೆಯಲ್ಲ ಎಂದು ಡಾ.ವಸುಂಧರ ದೊರೆಸ್ವಾಮಿ ಅವರ ಭರತನಾಟ್ಯ ಪರಿಣತಿ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಡಾ.ವಸುಂಧರ ದೊರೆಸ್ವಾಮಿ ನೃತ್ಯ ಪ್ರದರ್ಶಿಸಿದರು. ದೇಶ–ವಿದೇಶದ ಹಲವು ಗಣ್ಯರು ಈ ಕಾರ್ಯಕ್ರಮ ಕಣ್ತುಂಬಿಕೊಂಡರು.

ಮೈಸೂರು ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಅಧ್ಯಕ್ಷೆ ಡಾ.ಸಂಧ್ಯಾ ಪುರೇಚಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮಿನಿ ಒಲಂಪಿಕ್ಸ್‌ನಲ್ಲಿ ಮೈಸೂರು ತಂಡ ಸಾಧನೆ




ವಿವಿಧ ಪ್ರಶಸ್ತಿ ಪಡೆದ ಮೈಸೂರು ಜಿಲ್ಲೆಯ ಬಾಲಕ, ಬಾಲಕಿಯರ ತಂಡ.

ಮೈಸೂರು,ನ.24(ಎಂಟಿವೈ)– ಕರ್ನಾಟಕ ಒಲಂಪಿಕ್ಸ್ ಅಸೋಸಿಯೇಷನ್ ಸಂಸ್ಥೆಯು ಬೆಂಗಳೂರಲ್ಲಿ ನಡೆಸಿದ 3ನೇ ಮಿನಿ ಒಲಂಪಿಕ್ಸ್–2024 ಕ್ರೀಡಾಕೂಟದಲ್ಲಿ ಮೈಸೂರು ಜಿಲ್ಲೆಯನ್ನು ಪ್ರತಿನಿಧಿಸಿದ್ದ 14 ವರ್ಷದೊಳಗಿನ ಟೆನ್ನಿಸ್ ಪಂದ್ಯಾವಳಿಯಲ್ಲಿ ಬಾಲಕ, ಬಾಲಕಿಯರ ತಂಡ ವಿವಿಧ ಪ್ರಶಸ್ತಿ ಗಳಿಸಿ ಗಮನ ಸೆಳೆದಿದೆ.

ಬೆಂಗಳೂರಿನ ಕೆಎಸ್‌ಎಲ್‌ಟಿಎನಲ್ಲಿ ನಡೆದ 3ನೇ ಮಿನಿ ಒಲಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದ ಮೈಸೂರು ಜಿಲ್ಲೆಯನ್ನು ಪ್ರತಿನಿಧಿಸಿದ್ದ ಐವರು ಬಾಲಕಿಯರಿದ್ದ ತಂಡ ಉತ್ತಮ ಪ್ರದರ್ಶನ ನೀಡಿದೆ. ಈ ಪಂದ್ಯಾವಳಿಯಲ್ಲಿ 6 ಜಿಲ್ಲೆಗಳ ತಂಡಗಳು ಪಾಲ್ಗೊಂಡಿತ್ತು. ಅದರಲ್ಲಿ ಮೈಸೂರು ತಂಡದ ಆಟಗಾರರಾದ ಬಾಲಕಿಯರ ತಂಡದಲ್ಲಿ ಪದ್ಮಪ್ರಿಯ ರಮೇಶ್‌ಕುಮಾರ್, ಸಾನ್ವಿ ಪ್ರಕಾಶ್ ರಾಜ್‌ಪುರೋಹಿತ್, ಖುಷಿ ಮಹೇಶ್, ಹಿತಾ ರಾಜ್.ಸಿ, ಯುಕ್ತಾ.ಎನ್ ಅವರಿದ್ದ ತಂಡ ಪಂದ್ಯಾವಳಿಯಲ್ಲಿ ಕಂಚಿನ ಪದಕವನ್ನು ತನ್ನದಾಗಿಸಿಕೊಂಡಿದೆ. ಬಾಲಕರ ತಂಡದಲ್ಲಿ ಇಶಾಯು ದೇಸಾಯಿ, ವಚನ್ ಪ್ರಸಾದ್, ಸಿದ್ದಾಂತ್, ದಕ್ಷ ಹಾಗೂ ಅಬ್ದುಲ್ಲಾ ಅವರಿದ್ದ ತಂಡ ಉತ್ತಮ ಪ್ರದರ್ಶನ ನೀಡಿದೆ. ವೈಯಕ್ತಿಕ ಸ್ಪರ್ಧೆಯಲ್ಲಿ, ಡಬಲ್ಸ್ ವಿಭಾಗದಲ್ಲಿ, ಇಶಾಯು ದೇಸಾಯಿ ಮತ್ತು ವಚನ ಪ್ರಸಾದ್ ಪರಸ್ಪರ ಜೊತೆಗೂಡಿ ಕಂಚಿನ ಪದಕವನ್ನು ಗೆದ್ದರು.

ಪದ್ಮಪ್ರಿಯಾಗೆ 3 ಪದಕ: ಪಂದ್ಯಾವಳಿಯಲ್ಲಿ ಬಾಲಕಿಯರ ತಂಡದಲ್ಲಿದ್ದ ಪದ್ಮಪ್ರಿಯ ರಮೇಶ್ ಕುಮಾರ್ ಸಿಂಗಲ್ಸ್ ವಿಭಾಗದಲ್ಲಿ ಬೆಳ್ಳಿ ಪದಕ ಪಡೆದರು. ಅಲ್ಲದೆ, ವೈಯಕ್ತಿಕ ಸ್ಪರ್ಧೆಯಲ್ಲಿ ಡಬಲ್ಸ್ ವಿಭಾಗದಲ್ಲಿ ಪದ್ಮಪ್ರಿಯಾ ರಮೇಶ್ ಕುಮಾರ್ ಮತ್ತು ಸಾನ್ವಿ ಪ್ರಕಾಶ್ ರಾಜಪುರೋಹಿತ್ ಪರಸ್ಪರ ಜೊತೆಗೂಡಿ ಕಂಚಿನ ಪದಕ ತನ್ನದಾಗಿಸಿಕೊಂಡರು. ಪದ್ಮಪ್ರಿಯ ಅವರಿಗೆ ಒಟ್ಟು ಒಂದು ಬೆಳ್ಳಿ, ಎರಡು ಕಂಚಿನ ಪದಕ ಲಭಿಸಿದಂತಾಗಿದೆ.

ಸುತ್ತೂರು ಶ್ರೀಗಳಿಂದ ಆಶೀರ್ವಾದ



ಕೆ.ಆರ್.ಬ್ಯಾಂಕ್‌ನ ನಿರ್ದೇಶಕರಾಗಿ ಆಯ್ಕೆಯಾದ ಕರ್ನಾಟಕ ಪ್ರತಿಧ್ವನಿ ವೇದಿಕೆ ಅಧ್ಯಕ್ಷ ಪ್ರತಿಧ್ವನಿ ಪ್ರಸಾದ್ ಹಾಗೂ ನಾಗಜ್ಯೋತಿ ಪ್ರತಿಧ್ವನಿ ಪ್ರಸಾದ್ ಭಾನುವಾರ ಸುತ್ತೂರು ಮಠಕ್ಕೆ ಭೇಟಿ ನೀಡಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ವರುಣ ಪಿಡಿಒ ಕುಮಾರ್ ಆರಾಧ್ಯ, ಭಗತ್ ಇದ್ದರು.

ಕೆ–ಸೆಟ್ ಪರೀಕ್ಷೆಗೆ 15,439 ವಿದ್ಯಾರ್ಥಿಗಳು ಹಾಜರು

ಮೈಸೂರು, ನ.24(ಎಂಟಿವೈ)– ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಮೈಸೂರಿನ 35 ಕೇಂದ್ರಗಳಲ್ಲಿ ಭಾನುವಾರ ನಡೆಸಿದ ಕೆ–ಸೆಟ್ ಪರೀಕ್ಷೆಯಲ್ಲಿ ನೋಂದಣಿ ಮಾಡಿಕೊಂಡಿದ್ದ 15,439 ಅಭ್ಯರ್ಥಿಗಳಲ್ಲಿ 13,063 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾದರೆ, 2376 ಅಭ್ಯರ್ಥಿಗಳು ಗೈರು ಹಾಜರಾದರು.

ಕರ್ನಾಟಕ ಸೇವಾ ಪ್ರಾಧಿಕಾರ ನಡೆಸಿದ ಕೆ–ಸೆಟ್ ಪರೀಕ್ಷೆ 18 ವಿಷಯಗಳಲ್ಲಿ ಜರುಗಿತು. ಮೈಸೂರಿನ 35 ಶಾಲಾ–ಕಾಲೇಜುಗಳಲ್ಲಿನ ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಭದ್ರತೆಯಲ್ಲಿ ಪರೀಕ್ಷೆ ನಡೆಯಿತು. ಕೆ–ಸೆಟ್ ಪರೀಕ್ಷೆ ಬರೆಯಲು 15,439 ಹೆಸರು ನೋಂದಾಯಿಸಿದ್ದರು. ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಪರೀಕ್ಷೆ ಜರುಗಿತು. ಮೊದಲ ಪತ್ರಿಕೆ ಸಾಮಾನ್ಯ ಜ್ಞಾನ ಹಾಗೂ ಎರಡನೇ ಪತ್ರಿಕೆ ಆಯಾ ವಿಷಯವಾರು(18 ಸಬ್ಜೆಕ್ಟ್) ನಡೆಯಿತು. ನಿಯಮಾನುಸಾರ ಪರೀಕ್ಷೆಗೆ ಮುನ್ನವೇ ಪರೀಕ್ಷಾ ಕೇಂದ್ರಕ್ಕೆ ಬಂದ ಅಭ್ಯರ್ಥಿಗಳನ್ನು ತಪಾಸಣೆ ಮಾಡಿ ಪರೀಕ್ಷಾ ಕೇಂದ್ರಕ್ಕೆ ಬಿಡಲಾಯಿತು. ಇಂದು ನಡೆದ ಪರೀಕ್ಷೆಯಲ್ಲಿ 13,063 ಅಭ್ಯರ್ಥಿಗಳು ಪರೀಕ್ಷೆ ಬರೆದರೆ, 2376 ಅಭ್ಯರ್ಥಿ ಗೈರು ಹಾಜರಾದರು.


ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್ ನೇತೃತ್ವದಲ್ಲಿ ಕೆ–ಸೆಟ್ ಪರೀಕ್ಷೆ ಯಾವುದೇ ಗೊಂದಲವಿಲ್ಲದೆ ಸುಸೂತ್ರವಾಗಿ ನೆರವೇರಿತು. ಪರೀಕ್ಷಾ ಕೇಂದ್ರಗಳಿಗೆ ಸಕಾಲದಲ್ಲಿ ಪ್ರಶ್ನೆಪತ್ರಿಕೆ ತಲುಪಿಸಲು ತ್ರಿ ಸದಸ್ಯ ಸಮಿತಿ ರಚಿಸಲಾಗಿತ್ತು ಈ ಸಮಿತಿಯು 10 ಮಾರ್ಗದ ಮೂಲಕ 35 ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ರವಾನಿಸಲಾಯಿತು. ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆಗಳನ್ನು ಭದ್ರತೆಯೊಂದಿಗೆ ಸುರಕ್ಷಿತವಾಗಿ ಕೊಂಡೊಯ್ಯಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಅಭಿನಂದನೆ



ನೇಪಾಳದಲ್ಲಿ ಇತ್ತೀಚೆಗೆ ನಡೆದ ಅಂತಾರಾಷ್ಟ್ರೀಯ ಯೋಗ ಸ್ಪರ್ಧೆಯಲ್ಲಿ ಚಿನ್ನದ ಪದಕ ಗಳಿಸಿದ ಕಾಂಗ್ರೆಸ್ ಯುವ ಮುಖಂಡ ಕುರುಬಾರಹಳ್ಳಿ ಪ್ರಕಾಶ್ ಅವರ ಪುತ್ರಿ ಸಾನ್ವಿ ಪ್ರಕಾಶ್ ಅವರನ್ನು ಮೈಸೂರಿನ ಕನಕ ಭವನದಲ್ಲಿ ನಡೆದ ಸಂತ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದರು.

ಅಭಿನಂದನೆ



ಚನ್ನಪಟ್ಟಣ ಉಪಚುನಾವಣೆಯಲ್ಲಿ ಜಯಗಳಿಸಿದ ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಅವರಿಗೆ ಎಸ್.ಎಂ.ಕೃಷ್ಣ ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷ ವಿಕ್ರಾಂತ್ ಪಿ ದೇವೇಗೌಡ ಅಭಿನಂದನೆ ತಿಳಿಸಿದ್ದಾರೆ